
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಮಾರ್ಚ್ 25, 2009 ರೂ. 12/-

ಥ್ಯಾಂಕ್ಸ್ ಮಾಗೆ
ಲಂಕೇಶ್
ಚಿತ್ರ ಪ್ರಶಸ್ತಿ



ದುರ್ಗ, ಮಂಡ್ಯ, ಧಾರವಾಡ
ಬಿಜೆಪಿ ಒಳಗೇ ಮಾರಾಮಾರಿ


ಲಿಂಗಾಯತರಿಂದಲೇ ಬಂಡಾಯ

ಬಿಜೆಪಿ ಪಾಲಿಗೆ ಭಸ್ಮಾಸುರ

ಆದಿಚುಂಚನಗಿರಿಯಲ್ಲಿ ಅಮಾಯಕರ ಗೋಳು


ಮೇಲುಕೋಟೆಯ ಸೈತಾನ್ ಭಾಷ್ಯಂ ಸ್ವಾಮಿ





ಪ್ರಧಾನಮಂತ್ರಿ ಸ್ಥಾನ
ಕನಸು ಭಗ್ನ

ಹಾಲಿವುಡ್‌ನ ಬಿಲಿಯನೇರ್‌ಗಳು ಬಾಲಿವುಡ್‌ನ ಸ್ಲಂಡಾಗ್‌ಗಳು




ಜಾಗತೀಕರಣ ಮತ್ತು ಖಾಸಗೀಕರಣಗಳು ಪ್ರಾರಂಭವಾದ ಕಳೆದ ಹತ್ತು ವರ್ಷಗಳಲ್ಲಿ ಹಾಲಿವುಡ್ಡಿನ ಚಿತ್ರೋದ್ಯಮದಲ್ಲಿದ್ದ ಹಲವು ಪ್ರತಿಷ್ಠಿತ ಚಿತ್ರನಿರ್ಮಾಣ ಸಂಸ್ಥೆಗಳು ಮಾತ್ರವಲ್ಲದೆ ಮಧ್ಯಮ ಗಾತ್ರದ ಚಿತ್ರ ನಿರ್ಮಾಣ ಸಂಸ್ಥೆಗಳು ಮುಳುಗಿಹೋಗಿ ಈಗ ಹಾಲಿವುಡ್ಡಿನಲ್ಲಿ ಕೆಲವೇ ಕೆಲವು ಬೃಹತ್ ಚಿತ್ರನಿರ್ಮಾಣ ಸಂಸ್ಥೆಗಳಿವೆ. ಅವುಗಳೆಂದರೆ ಟೈಂ-ವಾರ್ನರ್, ಡಿಸ್ನಿ, ವಯಾಕಾಂ, ನ್ಯೂಸ್ ಕಾರ್ಪೋರೇಷನ್, ಸೋನಿ, ಜೀ-ಎನ್‌ಬಿಸಿ ಮತ್ತು ವಿವೆಂಡಿ. ಇವೆಲ್ಲಾ ಮೊದಲಿಂದಲೂ ಚಿತ್ರೋದ್ಯಮದಲ್ಲಿದ್ದವೇನೂ ಅಲ್ಲ. ಉದಾಹರಣೆಗೆ ಟೈಂ, ನ್ಯೂಸ್ ಕಾರ್ಪೋರೇಷನ್ ಮಾಧ್ಯಮ ಸಂಸ್ಥೆಗಳಾಗಿದ್ದರೆ, ಜೀ ಒಂದು ವಿದ್ಯುತ್ ಉತ್ಪಾದನಾ ಸಂಸ್ಥೆ, ವಿವೆಂಡಿ ಫ್ರಾನ್ಸಿನ ನೀರು ವಿತರಣಾ ಸಂಸ್ಥೆ. ಆದರೆ ಹಣಕಾಸು ವಹಿವಾಟು ಜಾಗತೀಕರಣಗೊಳ್ಳುತ್ತಿದ್ದಂತೆ ಯಾವುದೇ ಕ್ಷೇತ್ರದಲ್ಲಿರುವ ಬೃಹತ್ ಉದ್ಯಮಿಗಳು ಲಾಭದ ಸಾಧ್ಯತೆ ಇರುವ ಯಾವ ಉದ್ಯಮವನ್ನೂ ಬಿಡದೆ ಕೊಂಡುಕೊಳ್ಳುತ್ತಾ ಬೃಹತ್ ಮಾನಾಪಲಿಗಳನ್ನು (ಏಕಸ್ವಾಮ್ಯ) ನಿರ್ಮಿಸಿಕೊಂಡಿವೆ. ಇವುಗಳ ವ್ಯವಹಾರ ಹಲವಾರು ದೇಶಗಳ ಒಟ್ಟಾರೆ ರಾಷ್ಟ್ರೀಯ ಆದಾಯಕ್ಕಿಂತ ಜಾಸ್ತಿ ಇರುವುದರಿಂದ ಅವು ಯಾವುದೇ ದೇಶಗಳ ನೀತಿಗಳನ್ನು ಬದಲಿಸಿ ಅಲ್ಲಿರುವ ಮಾರುಕಟ್ಟೆಯನ್ನು ತಮ್ಮದಾಗಿಸಿಕೊಳ್ಳಬಲ್ಲವು.

ಜಾಗತೀಕರಣದ ಪ್ರಭಾವದಿಂದಲೇ ಚಲನಚಿತ್ರ ನಿರ್ಮಾಣ ಮತ್ತು ವಿತರಣೆಗಳಿಗೆ ಇದ್ದ ಅಡ್ಡಿಗಳನ್ನು ಈ ಬೃಹತ್ ಸಂಸ್ಥೆಗಳು WTO ನಲ್ಲಿರುವ GATS ಕಲಮನ್ನು ಬಳಸಿಕೊಂಡು ನಿವಾರಿಸಿಕೊಂಡವು. ಆದಾದ ನಂತರ ಅತಿ ದೊಡ್ಡ ಮಟ್ಟದಲ್ಲಿ ಏಷಿಯಾ ಅದರಲ್ಲೂ ಚೀನಾ, ತೈವಾನ್, ಜಪಾನ್ ಮತ್ತು ಇಂಡಿಯಾದ ಮಾರುಕಟ್ಟೆಯಲ್ಲಿ ಹಾಲಿವುಡ್ ಬ್ಲಾಕ್‌ಬಸ್ಟರ್ ಚಿತ್ರಗಳು ಬರಲಾರಂಭಿಸಿದವು. ಜೊತೆಗೆ ಹಾಲಿವುಡ್ ಚಿತ್ರಗಳಲ್ಲಿ ನಿಧಾನವಾಗಿ ಇತರ ಸಂಸ್ಕೃತಿಗಳು, ಅಮೆರಿಕನ್ನರಲ್ಲದ ನಾಯಕ-ನಾಯಕಿಯರು, ಕಥೆಗಳು ಕಾಣತೊಡಗಿದವು. ಉದಾಹರಣೆಗೆ 1998ರಲ್ಲಿ ತೆರೆಕಂಡ 308 ಹಾಲಿವುಡ್ ಚಿತ್ರಗಳಲ್ಲಿ 139 ಚಿತ್ರಗಳನ್ನು ಅಮೆರಿಕದಿಂದ ಹೊರಗಡೆ ಚಿತ್ರೀಕರಿಸಲಾಗಿತ್ತು. ಹೀಗೆ ಜಾಗತೀಕರಣದ ಜೊತೆಜೊತೆಗೆ ಹಾಲಿವುಡ್ಡಿನ ಜಾಗತೀಕರಣವೂ ಆಗತೊಡಗಿತು.

ಇದರ ಆರ್ಥಿಕ ಮತ್ತು ಸಾಂಸ್ಕೃತಿಕ ಪರಿಣಾಮಗಳು ಚಿತ್ರೋದ್ಯಮದ ಮೇಲೂ ಮತ್ತು ಸಮಾಜದ ಮೇಲೂ ಘೋರವಾಗಿ ತಟ್ಟಲಿದೆ. ಜಾಗತೀಕರಣ ಮತ್ತು ಉದಾರೀಕರಣ ನೀತಿಗಳು ಚಿತ್ರ ನಿರ್ಮಾಣ, ಪ್ರದರ್ಶನ, ವಿತರಣೆ ಎಲ್ಲ ಕ್ಷೇತ್ರಗಳಲ್ಲೂ ವಿದೇಶಿ ಬಂಡವಾಳಕ್ಕೆ ಮುಕ್ತ ಪರವಾನಗಿ ಕೊಟ್ಟಿರುವುದರಿಂದ ರಿಲಯನ್ಸ್‌ನ ಅಂಬಾನಿ ಮತ್ತಿತರ ದೊಡ್ಡ ಉದ್ಯಮಿಗಳ ಸಹಯೋಗದೊಂದಿಗೆ ಹಾಲಿವುಡ್ಡಿನ ದೈತ್ಯರು ಚಿತ್ರಮಂದಿರ, ಸ್ಟುಡಿಯೋ ಮತ್ತು ಚಿತ್ರ ನಿರ್ಮಾಣ ಎಲ್ಲದರಲ್ಲೂ ದೊಡ್ಡ ಮಟ್ಟದ ಹೂಡಿಕೆ ಮಾಡುತ್ತಿದ್ದಾರೆ. ಈವರೆಗೆ ಸಣ್ಣಪುಟ್ಟ ಬಂಡವಾಳ ಹೂಡುತ್ತಿದ್ದವರನ್ನೂ ಒಳಗೊಂಡಂತೆ ಲಕ್ಷಾಂತರ ಭಾರತೀಯರ ಹೊಟ್ಟೆಪಾಡಿಗೆ ಆಸರೆಯಾಗಿದ್ದ ಚಿತ್ರೋದ್ಯಮ ಕೆಲವೇ ದೈತ್ಯ ಕಂಪನಿಗಳ ಏಕಸ್ವಾಮ್ಯವಾಗುತ್ತಾ ಹೊರಟಿದೆ.

1948ರ ಹಿಂದೆ ಅಮೆರಿಕದಲ್ಲೂ ಸಹ ಇದೇ ರೀತಿ ದೊಡ್ಡ ಸಿನಿಮಾ ನಿರ್ಮಾಣ ಸಂಸ್ಥೆಗಳೇ ಪ್ರದರ್ಶನ ಮತ್ತು ವಿತರಣೆ ಕ್ಷೇತ್ರಗಳಲ್ಲೂ ಏಕಸ್ವಾಮ್ಯ ಹೊಂದಿದ್ದವು. ಇದರಿಂದಾಗಿ ಒಂದೆಡೆ ಈ ಸಂಸ್ಥೆಗಳು ತೆಗೆದ ಕುಲಗೆಟ್ಟ ಚಿತ್ರಗಳನ್ನೂ ಪ್ರೇಕ್ಷಕ ನೋಡಲೇಬೇಕಾದ ಅನಿವಾರ್ಯತೆ ಉಂಟಾದರೆ ಮತ್ತೊಂದೆಡೆ ಸಣ್ಣ ಬಜೆಟ್ಟಿನಲ್ಲಿ ಉತ್ತಮ ಚಿತ್ರ ತೆಗೆಯುತ್ತಿದ್ದ ಸ್ವತಂತ್ರ ನಿರ್ಮಾಪಕರಿಗೆ ಅವಕಾಶವೇ ಇಲ್ಲದಂತಾಗಿ ಹೋಯಿತು. ಹೀಗಾಗಿ ಅಮೆರಿಕದ ಸುಪ್ರೀಂಕೋರ್ಟು ಆಂಟಿ ಟ್ರಸ್ಟ್ ಲಾ ಪ್ರಕಾರ ಈ ರೀತಿ ನಿರ್ಮಾಣ ಸಂಸ್ಥೆಗಳು ಪ್ರದರ್ಶನ ವಲಯದಲ್ಲಿ ಏಕಸ್ವಾಮ್ಯ ಹೊಂದುವಂತಿಲ್ಲ ಎಂದು ತೀರ್ಮಾನ ನೀಡಿತು. ಆ ನಂತರವಷ್ಟೆ ಅಮೆರಿಕದಲ್ಲಿ ಹೆಚ್ಚು-ಕಡಿಮೆ 70-80ರ ದಶಕದ ತನಕ ಒಳ್ಳೆ ಚಿತ್ರಗಳು ಬರಲು ಸಾಧ್ಯವಾಯಿತು. ಆದರೆ ರೇಗನ್ ಕಾಲದಲ್ಲಿ ಪ್ರಾರಂಭವಾದ ಬಂಡವಾಳಶಾಹಿ ಪರ ಆರ್ಥಿಕ ನೀತಿಗಳು ಈ ಕಾನೂನಿನ ಆಶಯದ ವಿರುದ್ಧವಾದ ನೀತಿಗಳನ್ನೇ ಜಾರಿಗೆ ತಂದಿದ್ದರಿಂದ ಇಂದು ಇಡೀ ಅಮೆರಿಕದ ಚಿತ್ರೋದ್ಯಮ ಮೇಲೆ ಹೇಳಿದ ಆರೇಳು ದೈತ್ಯ ಸಂಸ್ಥೆಗಳ ಮುಷ್ಟಿಯಲ್ಲಿ ಸಿಲುಕಿದೆ. ಸೃಜನಶೀಲತೆ ಕೊನೆ ಉಸಿರನ್ನು ಎಳೆಯುತ್ತಿದೆ.



ಜಾಗತೀಕರಣ ನೀತಿಗಳು ಜಾರಿಯಾದ ನಂತರ ಭಾರತದಲ್ಲಿ ಏಕಸ್ವಾಮ್ಯತೆಯನ್ನು ತಡೆಯಲು ರಚಿತವಾಗಿದ್ದ ಎಂಆರ್‌ಟಿಪಿ (ಮಾನೋಪಲಿ ರೆಸ್ಟ್ರಿಕ್ಟಿವ್ ಟ್ರೇಡ್ ಪ್ರಾಕ್ಟೀಸ್) ಇನ್ನಿತ್ಯಾದಿ ಕಾನೂನುಗಳನ್ನೂ ಮತ್ತು ವಿದೇಶಿ ಬಂಡವಾಳವನ್ನು ನಿಯಂತ್ರಿಸುತ್ತಿದ್ದ ಕಾನೂನುಗಳನ್ನು ತೆಗೆದು ಹಾಕಲಾಗಿದೆ. ಹೀಗಾಗಿ ಭಾರತದ ಚಿತ್ರೋದ್ಯಮದಲ್ಲೂ ಕ್ರಮೇಣ 1948ರ ಹಿಂದೆ ಅಮೆರಿಕದಲ್ಲಿದ್ದ ಪರಿಸ್ಥಿತಿಯೇ ಉಂಟಾಗುತ್ತಿದೆ. ಇದರಿಂದ ಕಲಾತ್ಮಕ ಸೃಜನಶೀಲತೆಯ ಅಭಿವ್ಯಕ್ತಿಯೇ ಕಮರಿ ಹೋಗಿ ಆ ದೈತ್ಯ ಸಂಸ್ಥೆಗಳ ಮಾರುಕಟ್ಟೆ ಅಗತ್ಯಗಳೇ ಚಿತ್ರ ನಿರ್ಮಾಣವನ್ನು ನಿರ್ದೇಶಿಸತೊಡಗುತ್ತದೆ. ಹಾಗೂ ಕಲಾ ಸ್ವಾತಂತ್ರ್ಯ ಸಂಪೂರ್ಣವಾಗಿ ಮಾರುಕಟ್ಟೆ ನಿಯಮಗಳ ಅಧೀನವಾಗಿಬಿಡುತ್ತದೆ. ಸಣ್ಣಪುಟ್ಟ ಚಿತ್ರ ನಿರ್ಮಾಪಕರು, ನಿರ್ದೇಶಕರು ಮತ್ತು ತಂತ್ರಜ್ಞರು ಮೂಲೆಗುಂಪಾಗುತ್ತಾರೆ.

ಈ ದೈತ್ಯರು ಬಳಸಬೇಕೆಂದಿರುವ ತಂತ್ರಜ್ಞಾನವೂ ಸಹ ವೀಕ್ಷಕರಿಗೆ ಆಯ್ಕೆಯನ್ನು ಕಡಿಮೆ ಮಾಡುತ್ತದೆ. ಉದಾಹರಣೆಗೆ ಚಿತ್ರೋದ್ಯಮದಲ್ಲಿ ಅದರಲ್ಲೂ ವಿಶೇಷವಾಗಿ ಅಮೆರಿಕದಲ್ಲಿ ಥಿಯೇಟರ್‌ಗಳಲ್ಲಿ ಚಿತ್ರ ಬಿಡುಗಡೆ ಮಾಡುವುದರಿಂದ ಬರುತ್ತಿದ್ದ ಲಾಭದ ಪ್ರಮಾಣ ಕ್ರಮೇಣ ಕಡಿಮೆಯಾಗುತ್ತಿದೆ. ಹೋಮ್ ಥಿಯೇಟರ್, ಟಿವಿ ಇನ್ನಿತ್ಯಾದಿಗಳೇ ಬರಲಿರುವ ಜಮಾನದ ಪ್ರಮುಖ ಚಿತ್ರವೀಕ್ಷಣಾ ಮಾದರಿಗಳಾಗಲಿವೆ. ಯಾವ ಚಿತ್ರ ನಿರ್ಮಾಣ ಸಂಸ್ಥೆಗೆ ಈ ಹೊಸ ಸಂವಹನದ ಮಾಧ್ಯಮದ ಮೇಲೆ ನಿಯಂತ್ರಣವಿರುತ್ತದೋ ಅದು ಮಾತ್ರ ಮಾರುಕಟ್ಟೆಯ ದೊಡ್ಡ ಪಾಲನ್ನು ಪಡೆಯಲಿದೆ. ಈ ಬೃಹತ್ ಮಾರುಕಟ್ಟೆ ಸಾಧ್ಯತೆಯನ್ನು ಗಮನದಲ್ಲಿಟ್ಟುಕೊಂಡೇ ಹಾಲಿವುಡ್ಡಿನಲ್ಲಿ ಸೋನಿಯಂತಹ ಎಲೆಕ್ಟ್ರಾನಿಕ್ಸ್ ಉದ್ಯಮದ ದೈತ್ಯ ಕೊಲಂಬಿಯಾ ಮತ್ತು ಎಂಜಿಎಂನಂತಹ ಬೃಹತ್ ಚಿತ್ರ ನಿರ್ಮಾಣ ಸಂಸ್ಥೆಗಳನ್ನು ಕೊಂಡಿದ್ದು, ಟಿವಿ ದೈತ್ಯ ಫಾಕ್ಸ್, ಟೈಂ ಇನ್ನಿತ್ಯಾದಿಗಳು ಚಿತ್ರೋದ್ಯಮದಲ್ಲಿ ಏಕಸ್ವಾಮ್ಯ ಸ್ಥಾಪಿಸಿರುವುದು. ಭಾರತದಲ್ಲಿ ಈ ತಂತ್ರಜ್ಞಾನ ಕಣ್ಣು ಬಿಡುವ ಮುನ್ನವೇ ಈ ಹಾಲಿವುಡ್ ಸಂಸ್ಥೆಗಳು ಅದರ ಮೇಲೆ ಅಧಿಪತ್ಯ ಸಾಧಿಸಿರುತ್ತವಾದ್ದರಿಂದ ಭಾರತದ ಚಿತ್ರೋದ್ಯಮ ತಂತ್ರಜ್ಞಾನದ ದೃಷ್ಟಿಯಲ್ಲೂ ಹಾಲಿವುಡ್ಡಿನ ಜೀತ ಮಾಡಬೇಕಾಗುತ್ತದೆ.



ಎಲ್ಲಕ್ಕಿಂತ ಮುಖ್ಯವಾದದ್ದು ಈ ಬಗೆಯಲ್ಲಿ ಒಂದು ಕಲಾ ಮಾಧ್ಯಮದಲ್ಲಿ ಲಾಭಕೋರ ಬಂಡವಾಳಶಾಹಿ ಉದ್ಯಮಗಳು ಏಕಸ್ವಾಮ್ಯ ಸೃಷ್ಟಿಸಿಕೊಂಡಾಗ ಅವು ಸಮಾಜದಲ್ಲಿ ಬಿತ್ತುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳು ಎಂಥವು? ಹಾಲಿವುಡ್ಡಿನ ಚಿತ್ರಗಳು ಪ್ರಧಾನವಾಗಿ ಅಮೆರಿಕನ್ ಕನಸನ್ನು ಮತ್ತು ಅಮೆರಿಕನ್ ಜೀವನ ಮೌಲ್ಯಗಳನ್ನು ಅಂದರೆ ಅಲ್ಲಿನ ಶ್ರೀಮಂತ ಬಿಳಿಯ ಜನರ ಜೀವನ ಮೌಲ್ಯಗಳನ್ನೇ ಸಾರ್ವತ್ರಿಕಗೊಳಿಸುತ್ತವೆ ಮತ್ತು ಶ್ರೇಷ್ಠವೆಂದು ಬಿಂಬಿಸುತ್ತವೆ. ಈವರೆಗಿನ ಬಹುಪಾಲು ಹಾಲಿವುಡ್ ಚಿತ್ರಗಳು ಹಣ ಮತ್ತು ಯಶಸ್ಸೇ ಮುಖ್ಯವಾದ ಜೀವನ ಮೌಲ್ಯಗಳೆಂದು ಸಾರುತ್ತಾ ಬಂದಿವೆ. ಮದುವೆ ಮತ್ತು ಮನೆಗಳೇ ಮುಖ್ಯವಾದ ಸಾಮಾಜಿಕ ರಚನೆಗಳೆಂದು ಸಾರುತ್ತವೆ. ಪ್ರಭುತ್ವ, ಪೊಲೀಸ್ ಮಾನ್ಯತೆಯುಳ್ಳ ಅಧಿಕಾರ ಕೇಂದ್ರಗಳು, ಅದರ ವಿರುದ್ಧ ಬಂಡಾಯ ಅಮಾನ್ಯ ಎಂದು ಸಾರುತ್ತವೆ. ಅಮೆರಿಕನ್ ವ್ಯವಸ್ಥೆಗೆ ಧಕ್ಕೆಯುಂಟಾದಾಗ ಯಾವುದೇ ಬಗೆಯ ಹಿಂಸೆಯನ್ನಾದರೂ ಬಳಸಬಹುದು ಎಂದು ಒಪ್ಪಿಸುತ್ತವೆ. ಆದರೆ ಕಳೆದ ಇಪ್ಪತ್ತು ವರ್ಷಗಳಲ್ಲಿ ಜಾಗತೀಕರಣ ಮತ್ತು ಉದಾರೀಕರಣ ನೀತಿಗಳು ಅಮೆರಿಕದ ವಿರುದ್ಧ ಮಾತ್ರವಲ್ಲದೆ ಅದನ್ನು ಅನುಸರಿಸುವ ಎಲ್ಲಾ ದೇಶಗಳ ಸರ್ಕಾರದ ವಿರುದ್ಧ ಬಂಡಾಯವನ್ನು ಮತ್ತು ಅವುಗಳ ಸಮಾಜದಲ್ಲಿ ಸಂಕ್ಷೋಭೆಯನ್ನು ಹುಟ್ಟುಹಾಕಿವೆ. ರಷ್ಯಾದ ಕುಸಿತದ ನಂತರ ಪರ್ಯಾಯದ ಸೈದ್ಧಾಂತಿಕ ಭರವಸೆಯೂ ಇಲ್ಲದಂತಾಗಿ ಸಾರ್ವಜನಿಕ ಜೀವನದಲ್ಲಿ ಸಾಮೂಹಿಕ ಪ್ರತಿಭಟನೆ, ಸಹಕಾರ, ಸಹಜೀವನ, ಸೌಹಾರ್ದತೆ ಎಂಬ ಮೌಲ್ಯಗಳು ಇಲ್ಲವಾಗುತ್ತಿವೆ. ಅದರ ಬದಲಿಗೆ ಆತಂಕ, ಅನಿಶ್ಚಿತತೆ, ಅಭದ್ರತೆ, ಭೀತಿ, ಸಿನಿಕತೆ ತಾಂಡವವಾಡುತ್ತಿವೆ. ಈ ಹೊಸ ಸನ್ನಿವೇಶದಲ್ಲಿ ಹಳೆಯ ರೀತಿಯ ಹಾಲಿವುಡ್ ಚಿತ್ರಗಳ ಜೊತೆಜೊತೆಗೆ ಸಮಾಜದಲ್ಲಿರುವ ಈ ಬಗೆಯ ಸಿನಿಕತೆಯನ್ನು ಮತ್ತಷ್ಟು ಹೆಚ್ಚಿಸುವ ಚಿತ್ರಗಳೇ ಬರುತ್ತಿವೆ. ಮೇಲ್ನೋಟಕ್ಕೆ ಅವು ವಸ್ತುಸ್ಥಿತಿಯ ಯಥಾರ್ಥ ಚಿತ್ರಣದಂತೆ ಕಂಡರೂ ಸಾರಾಂಶದಲ್ಲಿ ಅವು ಜನರನ್ನು ಸಮಾಜದಿಂದ ದೂರ ಉಳಿಸುವ, ವೈಯಕ್ತಿಕ ಪರಿಹಾರಗಳನ್ನು ಹುಡುಕುವಂತ, ಅಥವಾ ಸಮಸ್ಯೆಯ ಆಳಕ್ಕೆ ಹೋಗದೆ ಭ್ರಾಮಕ ಪವಾಡ ಸದೃಶ ಪರಿಹಾರ ಕಂಡುಕೊಳ್ಳುವಂತ ಪಲಾಯನವಾದಿ ಅಥವಾ ಯಥಾಸ್ಥಿತಿವಾದಿ ಚಿತ್ರಗಳೇ ಆಗಿವೆ.

ಹಾಲಿವುಡ್‌ನ ಇತ್ತೀಚಿನ ಚಿತ್ರಗಳನ್ನು ಅಧ್ಯಯನ ಮಾಡಿರುವ CARL BOGGS II TOM POLLARD ಎಂಬುವರು ತಮ್ಮ "Postmodern Cinema and Hollywood Culture in an Age of Corporate Colonization" ಎಂಬ ಲೇಖನದಲ್ಲಿ ಹಾಲಿವುಡ್ಡಿನ ಹೊಸ ಚಿತ್ರಗಳ ಬಗ್ಗೆ ಹೀಗೆ ಹೇಳುತ್ತಾರೆ:

"ಆಳವಾಗಿ ನೋಡಿದರೆ ಹಾಲಿವುಡ್ಡಿನ ಈ ಕಾಲದ ಸಿನಿಮಾಗಳು ಸಾರ್ವಜನಿಕ ಜೀವನವನ್ನು ಮತ್ತು ಸಾಮೂಹಿಕ ಬದುಕನ್ನು ನಗಣ್ಯವಾಗುವಂತೆ ಅಥವಾ ಮರೆಯುವಂತೆ ಮಾಡುತ್ತವೆ. ಯಾವುದೇ ವಿಷಯವನ್ನು ರಾಜಕೀಯ ರಹಿತಗೊಳಿಸುವುದು ಅದರ ಒಳ ಉದ್ದೇಶವಾಗಿರುತ್ತದೆ. ಪ್ರತಿನಿತ್ಯದ ಬದುಕಿನಲ್ಲಿ ಖಾಸಗಿ ಜೀವನಕ್ಕೆ ಸಾರ್ವಜನಿಕ ಆಯಾಮವೇ ಇಲ್ಲವೆಂಬಂತೆ ತೋರಿಸುವುದರಿಂದ ಸಾಮಾಜಿಕ ಬಂಧನ ಮತ್ತು ಒಂದು ಸಮುದಾಯಕ್ಕೆ ಸೇರಿದವರೆಂಬ ಭಾವನೆ ಮಾಯವಾಗುತ್ತದೆ. ಎಲ್ಲಾ ಬಗೆಯ ರಾಜಕೀಯವು ಅನುಮಾನ, ಅವಿಶ್ವಾಸ, ಭಯ ಮತ್ತು ಹಿಂಸೆಗಳನ್ನು ವ್ಯಕ್ತಪಡಿಸುವ ಕ್ಷೇತ್ರವೆಂಬಂತೆ ಕಾಣತೊಡಗುತ್ತದೆ.. ಈ ಬಗೆಯ ಸಂಕುಚಿತಗೊಳ್ಳುತ್ತಿರುವ ರಾಜ ಕೀಯ ದೃಷ್ಟಿಯು ಕಾರ್ಪೊರೇಟ್ ಮಹಾಹತೀಕರಣವನ್ನು ಹಿಮ್ಮೆಟ್ಟಿಸುವಷ್ಟು ಸಾಮರ್ಥ್ಯ ಇರುವ ಯಾವುದೇ ಪ್ರತಿರೋಧ ಶಕ್ತಿಗಳು ಇಲ್ಲದಿರುವ ಸಂದರ್ಭದಲ್ಲಿ ಚಾಲ್ತಿಯನ್ನು ಪಡೆದುಕೊಂಡಿದೆ. ಇಂಥ ಸಂದರ್ಭದಲ್ಲಿ ನಮ್ಮೆದುರಿಗೆ ಉಳಿಯುವುದು ಈ ಹಾಲಿವುಡ್ ಚಿತ್ರಗಳು ತೋರಿಸುವ ಕಾರ್ಪೊರೇಟ್ ಸಂಸ್ಕೃತಿಯ ಮೂಲ ಗುಣಗಳೇ ಆದ ಸ್ವಾರ್ಥ, ಆಸ್ತಿ ಮತ್ತು ಅಧಿಕಾರ ಲಾಲಸೆ ಮತ್ತು ಅದು ಸಮಾಜದಲ್ಲಿ ಹುಟ್ಟುಹಾಕುವ ಅರಾಜಕತೆ, ಹಿಂಸೆ, ಅಭದ್ರತೆ, ಅವಿಶ್ವಾಸಗಳ ಚಿತ್ರಣಗಳಷ್ಟೆ"

ಸ್ಲಂಡಾಗ್ ಚಿತ್ರಕ್ಕೆ ಆಸ್ಕರ್ ಸಿಕ್ಕ ಖುಷಿ ಕರಗಿದ ನಂತರ ನಮ್ಮ ಮುಂದೆ ಉಳಿಯುವ ಚಿತ್ರಣವೂ ಅಷ್ಟೆಯಲ್ಲವೇ? ಆದ್ದರಿಂದಲೇ ಬಾಲಿವುಡ್ ಬೇಜವಾಬ್ದಾರಿ ಯಥಾಸ್ಥಿತಿ ವಾದಕ್ಕೆ ಸಂಕೇತವಾಗಿದ್ದರೆ ಬಾಲಿವುಡ್ಡಿನ ಹಾಲಿವುಡ್ಡೀಕರಣ ದುರಂತದ ಸಂಭ್ರಮಕ್ಕೆ, ರಾಜಕೀಯ ಸಿನಿಕತನಕ್ಕೆ ಮತ್ತು ಒಟ್ಟಾರೆ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ದಾಸ್ಯಕ್ಕೆ ಸಂಕೇತವಾಗುತ್ತದೆ. ಇದು ಹೆಚ್ಚು ಅಪಾಯಕಾರಿ. ■

ಚಿಂತಕರ ಚಾವಡಿ



ಸತ್ಯಂ ಹಗರಣದ ಜಾತಿ ಏನು?

"ಹತ್ತಾರು ಸಾವಿರ ಕೋಟಿ ರೂಪಾಯಿಯಷ್ಟು ಸಾರ್ವಜನಿಕರ ಹಣವನ್ನು ನುಂಗಿಹಾಕಿದ ಸತ್ಯಂ ಕಂಪನಿಯ ನಿರ್ದೇಶಕರನ್ನು ಮತ್ತು ಮ್ಯಾನೇಜರುಗಳನ್ನು ಯಾವ ಮಾನದಂಡದಲ್ಲಿ ಆರಿಸಲಾಗಿತ್ತು ಎಂದು ಈವರೆಗೆ ಯಾರೂ ಕೇಳಿಲ್ಲ. ಮೀಸಲಾತಿಯೆಂದರೆ ಹೀಗಳೆಯುವ, ಪ್ರತಿಭೆಗೆ ಹಾನಿ ಎನ್ನುವ ಇದೇ ಮಾಧ್ಯಮಗಳು ಇಷ್ಟು ದೊಡ್ಡ ಹಗರಣಕ್ಕೆ ಕಾರಣವನ್ನು ಪತ್ತೆಹಚ್ಚಲಾಗದ ಆ ಕಂಪನಿಯ ಅಧಿಕಾರಿಗಳ ಮತ್ತು ಸ್ವತಂತ್ರ ನಿರ್ದೇಶಕರ ಪ್ರತಿಭೆಯ ಬಗ್ಗೆ ಈವರೆಗೆ ಯಾವ ಪ್ರಶ್ನೆಯನ್ನೂ ಎತ್ತಿಲ್ಲವೇಕೆ? ಸತ್ಯಂ ಕಂಪನಿಯ ನಿರ್ದೇಶಕರೆಲ್ಲಾ ರಾಜು ಕುಲಸ್ಥರೇ ಆಗಿರುವುದಕ್ಕೆ ಯಾವ ಪ್ರತಿಭಾತ್ಮಕ ಮಾನದಂಡವಿತ್ತು? ತಮ್ಮ ಕುಟುಂಬದಲ್ಲಿ ಮಹಿಳೆಯರಿಗೆ ಯಾವ ಸ್ಥಾನವನ್ನೂ ಕೊಡದ ಈ ಮೇಲ್ಜಾತಿ ಉದ್ಯಮಿಗಳು ಕಂಪನಿ ನಿರ್ದೇಶಕ ಇನ್ನಿತರ ಹುದ್ದೆಗಳ ವಿಷಯಕ್ಕೆ ಬಂದೊಡನೆ ತಮ್ಮ ಕುಟುಂಬದ ಮಹಿಳೆಯರಲ್ಲಿ ಎಲ್ಲೂ ಇಲ್ಲದ ಪ್ರತಿಭೆಗಳನ್ನು ಕಂಡುಹಿಡಿದುಬಿಡುತ್ತಾರೆ! ಅದೇ ರೀತಿ ಸರ್ಕಾರಿ ಅಧಿಕಾರಿಗಳ ಅದಕ್ಷತೆಯ ಬಗ್ಗೆ ಕೆಂಡಕಾರುವ ಈ ಉದ್ಯಮಿಗಳು ಅದೇ ಅಧಿಕಾರಿಗಳು ನಿವೃತ್ತರಾದೊಡನೆ ಅವರನ್ನು ತಮ್ಮ ಉದ್ಯಮದ ದಕ್ಷ ಅಧಿಕಾರಿಗಳನ್ನಾಗಿ ಮಾಡಿಕೊಂಡುಬಿಡುವ ಗುಟ್ಟೇನು?

ಇನ್ನು ಈ ಪ್ರತಿಭಾನ್ವಿತರ ದಕ್ಷತೆಯ ಬಗ್ಗೆ: ಈ ಸತ್ಯಂ ಕಂಪನಿಯ ಮುಖ್ಯ ಲೆಕ್ಕಾಧಿಕಾರಿಯಾಗಿದ್ದ ವಡ್ಲಮಣಿ ಶ್ರೀನಿವಾಸ ತಾನು ಬ್ಯಾಲೆನ್ಸ್ ಶೀಟ್ ನೋಡುವುದಿಲ್ಲವೆಂದೂ ತನ್ನ ಸಹಾಯಕರು ಸಿದ್ಧಪಡಿಸಿದ ಲೆಕ್ಕಪತ್ರಕ್ಕೆ ಸಹಿ ಹಾಕುವುದಷ್ಟೆ ತನ್ನ ಕೆಲಸವೆಂದು ಹೇಳುವಷ್ಟು ದಕ್ಷ. ಈತನನ್ನು ಮೀಸಲಾತಿ ಆಧಾರದಲ್ಲೇನೂ ನೇಮಕ ಮಾಡಿಕೊಂಡಿರಲಿಲ್ಲ. ಅದೇ ರೀತಿ ಈ ಕಂಪನಿಯ ಲೆಕ್ಕಪತ್ರವನ್ನು ನೋಡಿಕೊಳ್ಳಲು ನೇಮಕವಾಗಿದ್ದ ಪ್ರೈಸ್‌ವಾಟರ್‌ಹೌಸ್ ಕೂಪರ್ಸ್ ಸಂಸ್ಥೆ ತನ್ನ ಆಡಿಟರ್‌ಗಳನ್ನು ಪ್ರತಿಷ್ಠಿತ ಐಐಎಂ ಮತ್ತು ಇತರ ಬಿಸಿನೆಸ್ ಸ್ಕೂಲ್‌ಗಳಿಂದಲೇ ನೇಮಕಮಾಡಿಕೊಳ್ಳುತ್ತದೆ. ಆದರೂ ಅವರು ಅಕೌಂಟಿಂಗ್‌ನಲ್ಲಿ ಅದಕ್ಷತೆ ತೋರಿಸಲು ಕಾರಣವೇನಿರಬಹುದು? ಸತ್ಯಂನ ಸ್ವತಂತ್ರ ನಿರ್ದೇಶಕರಲ್ಲೊಬ್ಬ, ಬರೀ ಪ್ರತಿಭಾನ್ವಿತರನ್ನು ಮಾತ್ರ ನೇಮಕ ಮಾಡಿಕೊಳ್ಳುವ ಇಂಡಿಯನ್ ಸ್ಕೂಲ್ ಆಫ್ ಬಿಸಿನೆಸ್‌ನ ಡೀನ್ ಆಗಿದ್ದವ. ಸತ್ಯಂ ಕಂಪನಿಯಲ್ಲಿ ಈ ಪ್ರಮಾಣದ ಮೋಸವಾಗುತ್ತಿದೆ ಎಂಬುದು ತನ್ನ ಗಮನಕ್ಕೆ ಬಂದೇ ಇರಲಿಲ್ಲವೆಂದು ಈತ ಹೇಳಿದ್ದಾನೆ. ಇವೆಲ್ಲವೂ ಅದಕ್ಷತೆಯಲ್ಲವೇ? ಸಾಮರ್ಥ್ಯದ ಕೊರತೆಯಲ್ಲವೇ? ಕೇವಲ ಮೇಲ್ಜಾತಿ ಎಂಬ ಕಾರಣಕ್ಕೆ ಮರೆಸಲ್ಪಟ್ಟ ಅನರ್ಹತೆಗಳಲ್ಲವೇ? ನಮ್ಮ ದೇಶದ ಪ್ರತಿಷ್ಠಿತ ಉದ್ಯಮಿಗಳು ಹೀಗೆ ಅದಕ್ಷರಾದ ತನ್ನದೇ ಜಾತಿ ಕುಲದವರಿಂದ ನಡೆಸಲ್ಪಡುತ್ತಿರುವುದೇ ಈ ಹಗರಣಗಳಿಗೆ ಒಂದು ಕಾರಣವೂ ಅಲ್ಲವೇ? ಹಾಗೂ ಮೀಸಲಾತಿಗೂ ಪ್ರತಿಭೆಗೂ ಏನೂ ಸಂಬಂಧವಿಲ್ಲವೆಂಬುದು ಇದರಿಂದಲೂ ಸ್ಪಷ್ಟವಾಗುತ್ತದಲ್ಲವೇ?"

- ಪ್ರೊ. ಡಿ. ಪಾರ್ಥಸಾರಥಿ, ಐಐಟಿ, ಮುಂಬೈ.




ಕಂಡಹಾಗೆ

■ ಗೌರಿ ಲಂಕೇಶ್

ಸಾಬು ಎಂಬ ಬಾಲ ನಟನ ಕುರಿತು

ತೆನೆಯ ಮೇಲೆ ಕೂತಿರುವ ಈ ತುಂಟ ಹುಡುಗನ ಬ ನೋಡಿ. ಆತ ಎಷ್ಟು ಮುದ್ದಾಗಿದ್ದಾನಲ್ಲವೇ? ಹುಡುಗ ಬೇರಾರೂ ಅಲ್ಲ ಹಿಂದೊಮ್ಮೆ ಮೈಸೂರು ಮನೆಯಲ್ಲಿ ಆನೆಗಳನ್ನು ಡಿಕೊಳ್ಳುತ್ತಿದ್ದ ಅನಾಥ ಕ. ಆದರೆ ಅದೃಷ್ಟ ಮತ್ತು ದೃಷ್ಟ ಈತನ ಬದುಕಿನಲ್ಲಿ ಹ ಪಾತ್ರ ವಹಿಸಿದ್ದವೆಂದರೆ ಡ ಬಾಲಕ 1940 ಮತ್ತು ರ ದಶಕದಲ್ಲಿ ಬೆಳ್ಳಿತೆರೆಯ ಲೆ ಅಂತರರಾಷ್ಟ್ರೀಯ ಮಟ್ಟ ಮಿಂಚಿದ್ದ. ಆ ಕಾಲಕ್ಕೆ ರಿಕದಲ್ಲಿ ಅತಿ ಶ್ರೀಮಂತ ರಲ್ಲಿ ಒಬ್ಬನೆನಿಸಿಕೊಂಡಿದ್ದ. 3 ಆತ ಆರೋಗ್ಯವಂತವಾಗಿ ತನ್ನ 39 ನೇ ವಯಸ್ಸಿನಲ್ಲೇ ವಾದ ಹೃದಯಾಘಾತಕ್ಕೆ ಮಡಿದ.




ಈತ ಸಾಬು, ಅಲಿಯಾಸ್ ರ್ ಶೇಖ್ ಸಾಬು. ಹಲ ಈತನನ್ನು ತಪ್ಪಾಗಿ ಸಾಬು ಗಿರ್ ಎಂದೂ ಕರೆಯು ತು. (ವಾಸ್ತವದಲ್ಲಿ ದಸ್ತಗಿರ್ ನ ಅಣ್ಣನ ಹೆಸರು).

ಸಾಬುನ ತಾಯಿ ದೂರದ ಅಸ್ಸಾಂ ರಾಜ್ಯದವಳು. ಹೇಗೆ ಆಕೆ ಮೈಸೂರಿಗೆ ಬಂದಳೆಂದು ಯಾರಿಗೂ ತ್ತಿಲ್ಲ. ಆದರೆ ಮೈಸೂರಿಗೆ ಬಂದ ಆಕೆ ಮೈಸೂರಿನ ಮನೆಯಲ್ಲಿ ಮಾವುತನಾಗಿದ್ದ ಸೇಲಾರ್ ಶೇಖ್ ಾತನನ್ನು ಮದುವೆಯಾಗಿ ಹೆಗ್ಗಡದೇವನಕೋಟೆಯ ನಲ್ಲಿರುವ ಕರಪುರ ಎಂಬ ಹಳ್ಳಿಯಲ್ಲಿ ದಾಂಪತ್ಯ ನ ನಡೆಸಲಾರಂಭಿಸಿದಳು. ಸಾಬು ಹುಟ್ಟಿ ಇನ್ನೂ ಹಾಲು ಕುಡಿಯುತ್ತಿದ್ದ ಕೂಸಾಗಿದ್ದಾಗಲೇ ತಾಯಿ ಕೊಂಡಳು. ತನ್ನ ಇಬ್ಬರು ಮಕ್ಕಳಾಗಿದ್ದ ದಸ್ತಗಿರ್ ತ್ತು ಸಾಬುನನ್ನು ನೋಡಿಕೊಳ್ಳುವ ಜವಾಬ್ದಾರಿ ತಂದೆ ರ್ ಶೇಖ್ ಮೇಲೆ ಬಿತ್ತು. ಆತ ಅವರಿಬ್ಬರನ್ನು ಮನೆಯಲ್ಲಿದ್ದ ಆನೆಗಳ ಲಾಯಕ್ಕೆ ಕರೆದುಕೊಂಡು ಗಲಾರಂಭಿಸಿದ. ಸಾಬು ಬದುಕಿನಲ್ಲಿ ಪ್ರಾಣಿಗಳ ತಯವಾಗಿದ್ದು ಹೀಗೆ.

ಆದರೆ ತಂದೆ ಸೇಲಾರ್ ಶೇಖ್ ಕೂಡ ಬಹಳ ಬದುಕಿರಲಿಲ್ಲ. ಸಾಬು ಇನ್ನೂ ಏಳು ವರ್ಷದ ಕನಾಗಿದ್ದಾಗಲೇ ತಂದೆಯೂ ಕಣ್ಣುಮುಚ್ಚಿದ ಸಾಬುವಿನ ರ್ವಜರಲ್ಲಿ ಮೂರು ತಲೆಮಾರುಗಳು ಅರಮನೆಯ ಶಾಲೆಯಲ್ಲಿ ಮಾವುತರಾಗಿ ಜವಾಬ್ದಾರಿಯನ್ನು ಹಿಸಿದ್ದರಿಂದ ಪುಟ್ಟ ಬಾಲಕ ಸಾಬುನನ್ನೂ ಅಲ್ಲೇ ಕ್ಕೆ ಸೇರಿಸಿಕೊಳ್ಳಲಾಯಿತು.

ಒಂದು ಮಧ್ಯಾಹ್ನ ಅಶ್ವಶಾಲೆಯಲ್ಲಿದ್ದ ಹಿರಿಯರೆಲ್ಲ ಕ್ಕೆಂದು ಹೋಗಿ ಆನೆಗಳನ್ನು ಪುಟ್ಟ ಸಾಬುವಿನ ವಾರಿಯಲ್ಲಿ ಬಿಟ್ಟಿದ್ದರು. ಅದೇ ಹೊತ್ತಿಗೆ ರಾಬರ್ಟ್ ರ್ಟ ಮತ್ತು ಫ್ರಾನ್ಸೆಸ್ ಎಂಬ ಬ್ರಿಟಿಷ್ ದಂಪತಿಗಳು ಶಾಲೆಯತ್ತ ಬಂದರು. ಬಿಳಿಯರನ್ನು ನೋಡಿದ ಸಾಬು ರನ್ನು ಮೆಚ್ಚಿಸಲೆಂದು ಆನೆಗಳ ಮೇಲೆ ಆಟವಾಡ ಂಭಿಸಿದ. ಸೊಂಟದ ಸುತ್ತ ಒಂದು ಲಂಗೋಟ ತ್ತು ತಲೆಯ ಮೇಲೆ ಬಿಳಿ ರುಮಾಲು ಮಾತ್ರ ಟ್ಟಿದ್ದ ಈ ಚೋರ ಬೃಹದಾ ನ ಪ್ರಾಣಿಗಳನ್ನು ನಿಭಾಯಿ ತ್ತಿದ್ದ ರೀತಿಯನ್ನು ಕಂಡು ಷ್ ದಂಪತಿಗಳು ಬೆರಗಾ . ಆತನ ಮುಗ್ಧ ಮುಖ, ಣಿಗಳೊಂದಿಗೆ ಸಹಜವಾಗಿ ಯುತ್ತಿದ್ದ ಆತನ ಕಲೆ ಅವರಿಗೆ ವಾಯಿತು.



ಖ್ಯಾತ ಲೇಖಕ ರುಡ್ಯಾರ್ಡ್ ಗ್ ಅವರ ಪುಟ್ಟ ಕಥೆಯನ್ನಾ ಸಿನಿಮಾ ಮಾಡಲು ಬಂದಿದ್ದ ಫ್ಲಾಹರ್ಟಿ ದಂಪತಿ ಸಾಬುನನ್ನೇ ತಮ್ಮ ಚಿತ್ರದ ನಾಯಕನ್ನಾಗಿ ಆರಿಸಿದರು. , ತಾಯಿ ಇಲ್ಲದೆ ಬಡತನದಲ್ಲಿ ಜೀವನ ಸಾಗಿಸುತ್ತಿದ್ದ ುವಿನ ಬದುಕಿನಲ್ಲಿ ಮೊದಲ ಬಾರಿಗೆ ಅದೃಷ್ಟ ಾಯಿಸಿತ್ತು.

'ಎಲಿಫೆಂಟ್ ಬಾಯ್' ಎಂಬ ಚಿತ್ರದ ಬಹುಪಾಲನ್ನು ೂರಿನ ಸುತ್ತಲಿನ ಕಾಡುಗಳಲ್ಲೇ ಚಿತ್ರೀಕರಿಸಲಾಯಿತು. ಹವಾಮಾನದ ತೊಂದರೆಯಿಂದಾಗಿ ಅದನ್ನು ಡ್‌ನಲ್ಲೇ ಸಂಪೂರ್ಣಗೊಳಿಸಲಾಗುವುದೆಂದು ಪಕ ಅಲೆಕ್ಸಾಂಡರ್ ಕೊರ್ಡಾ ನಿರ್ಧರಿಸಿದರು.

ಆಗ ಸಾಬು ಅನಿವಾರ್ಯವಾಗಿ ಇಂಗ್ಲೆಂಡಿಗೆ ಹೋಗಬೇಕಾಯಿತು. ಆತನೊಂದಿಗೆ ಆತನ ಹಿರಿಯಣ್ಣ ಸೇಲಾರ್ ಶೇಖ್ ದಸ್ತಗಿರ್‌ನನ್ನು ಕರೆದುಕೊಂಡು ಹೋದರು. ಆದರೆ ಬ್ರಿಟನ್ನಿನ ಕಸ್ಟಮ್ಸ್ ಅಧಿಕಾರಿಗಳು ದಸ್ತಗಿರ್‌ನ ಹೆಸರನ್ನು ಸಾಬುವಿನ ಹೆಸರಿನೊಂದಿಗೆ ಥಳಕು ಹಾಕಿದ್ದರಿಂದ ಆತನ ಹೆಸರು ಸಾಬು ದಸ್ತಗಿರ್ ಎಂದು ಬದಲಾಯಿತು.

ಸಾಬು ಮತ್ತಾತನ ಅಣ್ಣನ ಜವಾಬ್ದಾರಿಯನ್ನು ವಹಿಸಿಕೊಂಡ ಬ್ರಿಟನ್ನಿನ ಸರ್ಕಾರ ಅವರಿಬ್ಬರಿಗೂ ಉತ್ತಮ ಶಿಕ್ಷಣ ನೀಡುವ ವ್ಯವಸ್ಥೆ ಮಾಡಿತು. ಆ ಶಿಕ್ಷಣದಿಂದ ಇಂಗ್ಲಿಷ್ ಭಾಷೆಯನ್ನು ಸಾಬು ಚೆನ್ನಾಗಿ ಕಲಿತಿದ್ದು ಆತನ ಭವಿಷ್ಯದಲ್ಲಿ ನೆರವಾಯಿತು.

1937ರಲ್ಲಿ ಬಿಡುಗಡೆಗೊಂಡ ಸಾಬುವಿನ ಪ್ರಥಮ ಚಿತ್ರ 'ಎಲಿಫೆಂಟ್ ಬಾಯ್' ಎಷ್ಟು ಯಶಸ್ವಿಯಾಯಿತೆಂದರೆ ಎಲ್ಲರ ಬಾಯಲ್ಲಿ ಸಾಬುವಿನದ್ದೇ ಗುಣಗಾನ. ಇದನ್ನು ನೋಡಿ ನಿರ್ಮಾಪಕ ಕೊರ್ಡಾ ಕೂಡಲೇ ಸಾಬುನೊಂದಿಗೆ ಮೂರು ಚಿತ್ರಗಳ ಒಪ್ಪಂದ ಮಾಡಿಕೊಂಡ. ಆ ಒಪ್ಪಂದದ ಪ್ರಕಾರ 'ದಿ ಡ್ರಮ್', 'ತೀಫ್ ಆಫ್ ಬಾಗ್ದಾದ್' ಮತ್ತು 'ಜಂಗಲ್ ಬುಕ್' ಎಂಬ ಮೂರು ಚಿತ್ರಗಳಲ್ಲಿ ಸಾಬು ನಟಿಸಿದ. ಅದೇ ಹೊತ್ತಿಗೆ ಟಾರ್ಜನ್ ಚಿತ್ರಗಳೂ ಬಿಡುಗಡೆಗೊಂಡು ಎಲ್ಲೆಡೆ ಆಫ್ರಿಕಾ ಮತ್ತು ಭಾರತದಂತಹ 'ನಿಗೂಢ' ಪ್ರದೇಶಗಳ ಬಗ್ಗೆ ವಿಲಕ್ಷಣ ಆಸಕ್ತಿ ಕೆರಳಿಸಿತ್ತು. ಸಾಬು ನಟಿಸಿದ್ದ ಮೂರೂ ಚಿತ್ರಗಳು ಬಾಕ್ಸ್ ಆಫೀಸಿನಲ್ಲಿ ಭರ್ಜರಿ ಹಿಟ್‌ಗಳಾದವು.

ಅದರಲ್ಲೂ, ಆಗಿನ್ನು ಕಪ್ಪು ಬಿಳುಪು ಚಿತ್ರಗಳ ಬದಲಾಗಿ ಕಲರ್ ಸಿನಿಮಾಗಳ ಬರಲಾರಂಭಿಸಿದ್ದು, 'ತೀಫ್ ಆಫ್ ಬಾಗ್ದಾದ್' ಚಿತ್ರ ತನ್ನ ಅದ್ಭುತ ವರ್ಣಗಳಿಂದಾಗಿ, ತಾಂತ್ರಿಕ ಶ್ರೇಷ್ಠತೆಯಿಂದಾಗಿ ಯೂರೋಪ್ ಮತ್ತು ಅಮೆರಿಕದಲ್ಲೂ ಭರ್ಜರಿ ಹಿಟ್ ಆಯಿತು. ಈ ಚಿತ್ರದ ತಾಂತ್ರಿಕತೆಗೆ ಆನಂತರ ಮೂರು ಆಸ್ಕರ್ ಪ್ರಶಸ್ತಿಗಳೂ ಲಭಿಸಿದವು.

ಸಾಬುವಿನ ಸೌಂದರ್ಯ ಮತ್ತು ಸಹಜವಾದ ನಟನಾ ಪ್ರತಿಭೆಯನ್ನು ಎಲ್ಲರೂ ಮೆಚ್ಚಿದರು. ಓರ್ವ ವಿಮರ್ಶಕನಂತೂ "ಗಂಗೆ ನದಿಯಷ್ಟು ಅಗಲವಾದ ನಗೆ ಮತ್ತು ಹುಲಿಯೊಂದರ ಮೈಮೇಲಿನ ಪಟ್ಟಿಗಳನ್ನೇ ಸೆಳೆಯುವಷ್ಟು ಮೋಹಕತೆ ಹೊಂದಿರುವ ಬಾಲಕ'' ಎಂದು ಇವನನ್ನು ಬಣ್ಣಿಸಿದ್ದರು. ಹೀಗೆ ಸಾಬು ಅನಿರೀಕ್ಷಿತವಾಗಿ ಭಾರತ ಮೂಲದ ಮೊತ್ತಮೊದಲ ಅಂತರರಾಷ್ಟ್ರೀಯ ಸ್ಟಾರ್ ಆದ. ಆಗ ಆತನಿಗಿನ್ನೂ 18 ವರ್ಷ ವಯಸ್ಸು ತುಂಬಿರಲಿಲ್ಲ!

ಇಂಗ್ಲೆಂಡಿನ ಚಿತ್ರೋದ್ಯಮ ಸಾಬುಗೆ ಸಾಕಷ್ಟು ಯಶಸ್ಸು ತಂದಿದ್ದರೂ ಅಮೆರಿಕ ಆತನನ್ನು ಸೆಳೆಯುತ್ತಿತ್ತು. ಆಗ ಕಾರ್ಖಾನೆಯಂತೆ ಚಿತ್ರಗಳನ್ನು ನಿರ್ಮಿಸುತ್ತಿದ್ದ ಯೂನಿವರ್ಸಲ್ ಸ್ಟುಡಿಯೋ ಎಂಬ ದೈತ್ಯ ಕಂಪನಿ ಸೇರಿಕೊಂಡರೆ ತಾನು ಇನ್ನೂ ಹೆಚ್ಚು ಚಿತ್ರಗಳಲ್ಲಿ ನಟಿಸಿ ಇನ್ನೂ ಹೆಚ್ಚು ಹಣ ದುಡಿಯಬಹುದೆಂದು ಸಾಬು ಲೆಕ್ಕಹಾಕಿದ.


ಅಲ್ಲಿಯತನಕ ಸಾಬುವಿನ ವೃತ್ತಿಜೀವನ ಸುಗಮವಾಗಿ ಸಾಗುವಂತೆ ಜವಾಬ್ದಾರಿ ವಹಿಸಿದ್ದ ಕೊರ್ಡಾಗೆ ಇದು ಗೊತ್ತಾದಾಗ "ಬೇಡ, ಯೂನಿವರ್ಸಲ್ ಕಂಪನಿ ಸೇರಿಕೊಳ್ಳಬೇಡ. ಅದು ನಿನ್ನನ್ನೇ ಆಪೋಶನ ಮಾಡಿ ನಿನ್ನ ವೃತ್ತಿ ಜೀವನವನ್ನು ಮುಗಿಸುತ್ತದೆ'' ಎಂದು ಎಚ್ಚರಿಸಿದ್ದರು. ಆದರೆ ಅವರ ಮಾತನ್ನು ಕೇಳಿಸಿಕೊಳ್ಳದ ಸಾಬು ಅಮೆರಿಕಕ್ಕೆ ಹಾರಿ ಹೋದ. ಯೂನಿವರ್ಸಲ್ ಸ್ಟುಡಿಯೋ ನಿರ್ಮಿಸುವ ಚಿತ್ರಗಳಲ್ಲಿ ನಟಿಸುವಂತೆ ಒಪ್ಪಂದ ಮಾಡಿಕೊಂಡ.

ಮೊದಮೊದಲು ಸಾಬುಗೆ ಅಮೆರಿಕದಲ್ಲೂ ಉತ್ತಮ ಅವಕಾಶಗಳು ಸಿಕ್ಕಿ ಆತ ಅಲ್ಲೂ ಹಿಟ್ ಚಿತ್ರಗಳಲ್ಲಿ ನಟಿಸಿದ. ಅದರೊಂದಿಗೆ ಸಾಕಷ್ಟು ಹಣವನ್ನು ಸಂಪಾದಿಸಿ ಆಗಿನ ಕಾಲದ ಅತಿ ಶ್ರೀಮಂತ ನಟರಲ್ಲಿ ಒಬ್ಬ ಎನಿಸಿಕೊಂಡ. ಜೊತೆಗೆ ಜೇಮ್ಸ್ ಸ್ಟೀವರ್ಟ್ ತರಹದ ದೈತ್ಯ ನಟರ ಮತ್ತು ಆನಂತರ ಅಮೆರಿಕದ ಅಧ್ಯಕ್ಷನಾದ ರೋನಾಲ್ಡ್ ರೇಗನ್ ತರಹದ ಮಾಮೂಲಿ ನಟರ ಗೆಳೆತನವನ್ನೂ ಸಂಪಾದಿಸಿದ.

ಆದರೆ ಕೆಲವರ್ಷಗಳ ನಂತರ ಕೊರ್ಡಾ ಎಚ್ಚರಿಸಿದ್ದಂತೆಯೇ ಎಲ್ಲವೂ ನಡೆದು ಸಾಬುವಿನ ವೃತ್ತಿಜೀವನ ಡೋಲಾಯಮಾನ ಸ್ಥಿತಿ ತಲುಪಿತು. ಆರಂಭದಲ್ಲಿ ಯೂನಿವರ್ಸಲ್ ಸ್ಟುಡಿಯೋ ಸಾಬುವಿಗೆ ಪ್ರಮುಖ ಪಾತ್ರಗಳನ್ನು ನೀಡಿತ್ತಾದರೂ ನಾಲ್ಕೈದು ಚಿತ್ರಗಳ ನಂತರ ಆತನಿಗೆ ಜೋಕರ್ ಅಥವಾ ಪೋಷಕ ನಟನ ಪಾತ್ರಗಳನ್ನು ನೀಡಲಾರಂಭಿಸಿತು. ಇದರೊಂದಿಗೆ ಸಾಬುವಿನ ಜನಪ್ರಿಯತೆ ಮತ್ತು ಆದಾಯ ಕುಸಿಯಲಾರಂಭಿಸಿದವು.

ಅದೇ ಹೊತ್ತಿಗೆ ಎರಡನೆ ಮಹಾಯುದ್ಧವನ್ನು ಅಮೆರಿಕ ಕೂಡ ಪ್ರವೇಶಿಸಿತು. ಅಷ್ಟೊತ್ತಿಗಾಗಲೇ ಅಮೆರಿಕದ ಪ್ರಜೆಯಾಗಿದ್ದ ಸಾಬು ಅಮೆರಿಕದ ಸೈನ್ಯ ಸೇರಿ 42 ಯುದ್ಧ ಪ್ರಕರಣಗಳಲ್ಲಿ ಭಾಗವಹಿಸಿದ. ಆತನ ಈ ಸೇವೆಯನ್ನು ಮೆಚ್ಚಿ ಅಮೆರಿಕದ ಸರ್ಕಾರ ಹಲವಾರು ಶೌರ್ಯ ಪದಕಗಳನ್ನು ನೀಡಿತು.

ಯುದ್ಧ ಭೂಮಿಯಿಂದ ಸಿನಿಮಾ ಜಗತ್ತಿಗೆ ಸಾಬು ಹಿಂದಿರುಗುವ ಹೊತ್ತಿಗೆ ಪರಿಸ್ಥಿತಿ ಬದಲಾಗಿತ್ತು. ಸಾಬು ನಟಿಸುತ್ತಿದ್ದ 'ಎಕ್ಸಾಟಿಕ್' ಚಿತ್ರಗಳು ಜನರಿಗೆ ಇಷ್ಟವಾಗುವ ಕಾಲ ಮುಗಿದಿತ್ತು. ಆದರೂ ಸಾಬು ನೋಡಲು ಚೆನ್ನಾಗಿದ್ದರಿಂದ ಐದಾರು ಸಿನಿಮಾಗಳಲ್ಲಿ ಆತನಿಗೆ ಅವಕಾಶಗಳು ಸಿಕ್ಕಿದವು. ಅಂತಹ ಒಂದು ಅವಕಾಶ 'ದಿ ಸಾಂಗ್ ಆಫ್ ಇಂಡಿಯಾ'. ಈ ಚಿತ್ರದಲ್ಲಿ ಸಾಬುವಿನೊಂದಿಗೆ ನಟಿಸಿದ ಮೆರಿಲನ್ ಕೂಪರ್‌ಳೊಂದಿಗೆ ಪ್ರೇಮಾಂಕುರವಾಗಿ ಅವರಿಬ್ಬರೂ ಮದುವೆಯಾದರು.



ತನ್ನ ಸಿನಿಮಾ ಬದುಕು ಅಂತ್ಯಗೊಳ್ಳುವ ಹಂತಕ್ಕೆ ಬರುತ್ತಿದೆ ಎಂದು ಅರಿತ ಸಾಬು ರಿಯಲ್ ಎಸ್ಟೇಟ್‌ನಲ್ಲಿ ಹಣ ಹೂಡಿ ಅದರಲ್ಲೂ ಅಪಾರ ಯಶಸ್ಸು ಕಂಡು ಇನ್ನಷ್ಟು ಸಾಹುಕಾರನಾದ. ಆದರೆ ಸಿನಿಮಾ ಮತ್ತು ಜನಪ್ರಿಯತೆಯ ಗೀಳು ಅಷ್ಟು ಸುಲಭವಾಗಿ ಕಳೆದುಕೊಳ್ಳಬಹುದಾದದ್ದಲ್ಲ. ಆದ್ದರಿಂದ ಯೂರೋಪಿನ ಕಡಿಮೆ ಬಜೆಟ್ ಸಿನಿಮಾಗಳಲ್ಲೂ ಸಾಬು ನಟಿಸಲಾರಂಭಿಸಿದ. ತನ್ನ ಬದುಕನ್ನೇ ಆಧರಿಸಿ ಟಿವಿ ಸೀರಿಯಲ್ ಮಾಡಲು ಯತ್ನಿಸಿ ವಿಫಲನಾದ. ಇದೆಲ್ಲ ಆದ ನಂತರ ಸಾಬು ತನ್ನ ಮೂಲ ಕಸುಬಾಗಿದ್ದ ಮಾವುತನ ಕೆಲಸಕ್ಕೂ ಒಂದು ರೀತಿಯಲ್ಲಿ ಹಿಂದಿರುಗಿದ.

ಹಾರಿಂಗೆ ಸರ್ಕಸ್ ತಂಡವನ್ನು ಸೇರಿಕೊಂಡು ಆನೆಯ ಮೇಲೆ ಹಲವು ಸರ್ಕಸ್‌ಗಳನ್ನು ಮಾಡಲಾರಂಭಿಸಿದ. ಮೊದಮೊದಲು ಈ ಸರ್ಕಸ್ ಶೋಗಳಲ್ಲಿ ಸಾಬು 'ತೀಫ್ ಆಫ್ ಬಾಗ್ದಾದ್' ಚಿತ್ರದ ಉಡುಪುಗಳನ್ನು ಧರಿಸಿದನಾದರೂ ಜನರಿಗೆ ಅದು ಇಷ್ಟವಾಗಲಿಲ್ಲ. ಆಗ ಆತ ಮಾವುತನ ಪಂಚೆ ತೊಟ್ಟು ಭಾಗವಹಿಸಲಾರಂಭಿಸಿದ. ಹೀಗೆ ಒಂದು ವರ್ಷ ಕಾಲ ಸರ್ಕಸ್‌ನಲ್ಲಿ 'ಮಾವುತ'ನಾಗಿ ಯುರೋಪ್ ದೇಶಗಳನ್ನು ಸುತ್ತಿದ ಸಾಬು.

ಹದಿಮೂರು ವರ್ಷದ ಬಾಲಕನಾಗಿದ್ದಾಗಲೇ 'ಎಲಿಫೆಂಟ್ ಬಾಯ್' ಎಂಬ ಯಶಸ್ವಿ ಚಿತ್ರದ ಮೂಲಕ ಎಲ್ಲರ ಗಮನ ಸೆಳೆದ ಸಾಬು ಆನಂತರದ ಇಪ್ಪತ್ತುಮೂರು ವರ್ಷಗಳಲ್ಲಿ ಹತ್ತೊಂಬತ್ತು ಸಿನಿಮಾಗಳಲ್ಲಿ ನಟಿಸಿದ. ಆದರೆ ಕೊನೆ ಎರಡು ಚಿತ್ರಗಳಲ್ಲಿ ಸಾಬು ಎಷ್ಟು ಚಿಕ್ಕ ಪಾತ್ರಗಳಲ್ಲಿ ನಟಿಸಿದ್ದನೆಂದರೆ ಆತನ ಇರುವಿಕೆಯೇ ಜನರ ಗಮನಕ್ಕೆ ಬರಲಿಲ್ಲ.

ಇಂತಹ ಸಾಬು 1963 ರಲ್ಲಿ ತೀವ್ರ ಹೃದಯಾಘಾತಕ್ಕೆ ತುತ್ತಾಗಿ ತೀರಿಕೊಂಡ. ಆಗ ಆತನಿಗಿನ್ನೂ 39 ವರ್ಷ ವಯಸ್ಸು.

ಹೀಗೆ ಅನಿರೀಕ್ಷಿತವಾಗಿ ಭಾರತವನ್ನು ತೊರೆದು ಇಂಗ್ಲೆಂಡ್, ಅಮೆರಿಕ ದೇಶದಲ್ಲಿ ನೆಲೆಸಿದ ಸಾಬು ಎಂದೂ ಭಾರತಕ್ಕೆ, ಮೈಸೂರಿಗೆ ಹಿಂದಿರುಗಲಿಲ್ಲವೇ? ಎಂಬ ಪ್ರಶ್ನೆ ಕಾಡುತ್ತದೆ. ಆತ ಒಮ್ಮೆ ಭಾರತಕ್ಕೆ ಬಂದಿದ್ದ. ಆದರೆ ಆಗ ಆತ ಮೈಸೂರಿನ ಅರಮನೆಯ ಆನೆಗಳ ಲಾಯದಲ್ಲಿದ್ದ ಬಾಲ ಮಾವುತನಾಗಿ ಉಳಿದಿರಲಿಲ್ಲ.

1936ರಲ್ಲಿ ಸಾಬುನನ್ನು 'ಎಲಿಫೆಂಟ್ ಬಾಯ್' ಚಿತ್ರಕ್ಕೆ ಆಯ್ಕೆ ಮಾಡಿದ ಸಂದರ್ಭದಲ್ಲಿ ಎ.ಕೆ.ಶೆಟ್ ಎಂಬುವವರು ಅಂದಿನ ಮೈಸೂರು ಸಾಮ್ರಾಜ್ಯದ ಪ್ರಧಾನಿಯಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್ ಅವರ ಆಪ್ತ ಕಾರ್ಯದರ್ಶಿಯಾಗಿದ್ದರು. ಅವರು ಸಾಬುವನ್ನು ಮೊದಲ ಬಾರಿಗೆ ನೋಡಿದ್ದನ್ನು ಹೀಗೆ ದಾಖಲಿಸಿದ್ದಾರೆ.

"ಅದು 1935ರ ಜೂನ್ ತಿಂಗಳು. ಅವತ್ತು 'ಎಲಿಫೆಂಟ್ ಬಾಯ್' ಚಿತ್ರದ ತಂಡವನ್ನು ಎಲ್ಲರಿಗೆ ಪರಿಚಯಿಸಲು ಸೇರಿದ್ದೆವು. ಸಾಬುನನ್ನು ಪರಿಚಯಿಸಿದ ರೀತಿ ನನ್ನ ಮನಸ್ಸಿನಲ್ಲಿ ಇನ್ನೂ ಅಚ್ಚಳಿಯದೆ ನೆನಪಿದೆ. ಆತನನ್ನು ನಾವಿದ್ದಲ್ಲಿಗೆ ಕರೆತಂದು ಎಲ್ಲರ ಕೈಕುಲುಕಿಸುವ ಮೂಲಕ ಪರಿಚಯಿಸಲಿಲ್ಲ. ಬದಲಾಗಿ ಆತ ಆನೆಯ ಮೇಲೆ ಕೂತು ನಿಧಾನವಾಗಿ ನಾವಿದ್ದ ಅರಮನೆಯ ಅಂಗಳಕ್ಕೆ ಬಂದ. ಅಂಗಳದ ಮಧ್ಯೆ ನಿಂತು ಜಗತ್ತೇ ತನ್ನತ್ತ ತಿರುಗಿ ನೋಡುವಂತೆ ಮಾಡಿದ. ಆಗ ಆತನಿಗೆ ಇನ್ನೂ ಏಳು ಅಥವಾ ಎಂಟು ವರ್ಷ ವಯಸ್ಸಿರಬೇಕು. ಸಣ್ಣಗಿದ್ದ ಆತ ಒಂದು ಲಂಗೋಟಿಯನ್ನು ಮತ್ತು ಪೇಟವನ್ನು ಧರಿಸಿದ್ದ. ಆತ ಆ ದೈತ್ಯಾಕಾರದ ಆನೆಯನ್ನು ನಿಭಾಯಿಸಿದ ರೀತಿಯೇ ಆತನ ಬಗ್ಗೆ ವಿಶ್ವಾಸ ಮೂಡಿಸುವಂತಿತ್ತು.

ಶೆಟ್ ಅವರು ನಿವೃತ್ತಿ ಹೊಂದಿದ ನಂತರ ಮುಂಬೈಯಲ್ಲಿನ ತಮ್ಮ ಪೂರ್ವಜರ ಮನೆಯಲ್ಲಿ ತಂಗಿದ್ದಾಗ 50ರ ದಶಕದಲ್ಲಿ ಭಾರತಕ್ಕೆ ಒಮ್ಮೆ ಬಂದಿದ್ದ ಸಾಬು ಅವರ ಮನೆಗೆ ಭೇಟಿ ನೀಡಿದ.


ಆ ಸಂದರ್ಭವನ್ನು ಶೇಟ್ ಹೀಗೆ ದಾಖಲಿಸಿದ್ದಾರೆ:

"ಸಾಬು ನನ್ನ ಮನೆಗೆ ಬಂದಾಗ ನಾವಿಬ್ಬರೂ ಊಟಕ್ಕೆ ಮುನ್ನ ಸ್ಕಾಚ್ ಮತ್ತು ಊಟದೊಂದಿಗೆ ಷ್ಯಾಂಪೇನ್ ಸೇವಿಸಿದೆವು. ಆಗ ನಾನು ಆತನನ್ನು ಪ್ರಥಮ ಬಾರಿ ನೋಡಿದ್ದ ಸಂದರ್ಭವನ್ನು ನೆನಪಿಸಿಕೊಂಡೆ. ನಾವಿಬ್ಬರೂ ಹಳೆಯ ಕಾಲದ ನೆನಪುಗಳನ್ನು, ಆದಾಗಲೇ ಮಡಿದವರನ್ನು, ಅಜ್ಞಾತರಾಗಿ ಕಣ್ಮರೆಯಾದವರನ್ನು ಕುರಿತು ಚರ್ಚಿಸಿದೆವು. ಈ ಬಾರಿ ಸಾಬು ಆನೆಯ ಮೇಲೆ ಕೂತು ಪ್ರತ್ಯಕ್ಷವಾಗಿರಲಿಲ್ಲ, ಬದಲಾಗಿ ಐಶಾರಾಮಿ ಕ್ಯಾಡಿಲಾಕ್ ಕಾರ್‌ನಲ್ಲಿ ಬಂದಿದ್ದ. ಹಾಗೆಯೇ ಆತ ಪೇಟ ಮತ್ತು ಲುಂಗಿ ಧರಿಸಿರಲಿಲ್ಲ, ಸೂಟು ಬೂಟು ಧರಿಸಿದ್ದ. ಜೊತೆಗೆ ಅಮೆರಿಕನ್ ಶೈಲಿಯಲ್ಲಿ ಇಂಗ್ಲಿಷ್‌ನಲ್ಲಿ ಮಾತನಾಡಿದ.''

ಚಿಕ್ಕವಯಸ್ಸಿನಲ್ಲೇ ಅಪಾರ ಯಶಸ್ಸು ಕಂಡು ಅಕಾಲಿಕವಾಗಿ ಮರಣ ಹೊಂದಿದ ಸಾಬು ಬಗ್ಗೆ ಕುತೂಹಲಗೊಂಡ ನಾನು ಆತನ ಬಗ್ಗೆ ಓದಿದ್ದನ್ನು ನಿಮಗೆ ಸುಮ್ಮನೆ ಹಾಗೆ ನೀಡಿದ್ದೇನೆ. ■

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ಇವರು ನಮ್ಮ ಜನಪ್ರತಿನಿಧಿಗಳು




ಮತ್ತೊಮ್ಮೆ ಲೋಕಸಭಾ ಚುನಾವಣೆ ಎದುರಾಗಿದೆ. ಹತ್ತು ಹಲವು ವೇಷಗಳಲ್ಲಿ ಜುಬ್ಬದಾರಿ ರಾಜಕಾರಣಿಗಳು ಕೈಮುಗಿದುಕೊಂಡು ನಮ್ಮೆದುರು ಓಟು ಕೇಳಲು ಬರುವವರಿದ್ದಾರೆ. ಈ ಸಂದರ್ಭದಲ್ಲಿ ನಾವು ಕಳೆದ ಬಾರಿ ಎಂತೆಂಥಾ ರಾಜಕಾರಣಿಗಳನ್ನು ಆರಿಸಿ ಸಂಸತ್ತಿಗೆ ಕಳಿಸಿದ್ದೇವೆಂಬುದನ್ನು ಒಮ್ಮೆ ಪರಾಮರ್ಶೆ ಮಾಡಿಕೊಳ್ಳುವುದೊಳ್ಳೆಯದು.

ನಾವು ಕಳೆದ 2004ರ ಲೋಕಸಭಾ ಚುನಾವಣೆಯಲ್ಲಿ ಆರಿಸಿ ಕಳಿಸಿದ ಒಟ್ಟು 543 ಸಂಸದರಲ್ಲಿ 125 ಸಂಸದರು ಕೊಲೆ, ಸುಲಿಗೆ, ದರೋಡೆ... ದಕಾಯತಿ, ಕಿಡ್ನಾಪ್, ರೇಪ್‌ಗಳಂಥ ಗಂಭೀರ ಅಪರಾಧಗಳಲ್ಲಿ ಸಿಕ್ಕಿಹಾಕಿಕೊಂಡು ಕೇಸ್ ಜಡಿಸಿಕೊಂಡಿದ್ದಾರೆ! ಅಂದರೆ ಹೆಚ್ಚೂ ಕಡಿಮೆ ಲೋಕಸಭೆಯ ಕಾಲು ಭಾಗ ಕ್ರಿಮಿನಲ್ಲುಗಳಿಂದ ತುಂಬಿಕೊಂಡಿದೆ. ಇದು ಸುಮ್ಮನೇ ರಂಜಿಸುವುದಕ್ಕೋಸ್ಕರ ಹೇಳುತ್ತಿರುವ ಕತೆಯಲ್ಲ. ಕಳೆದ 2004ರ ಲೋಕಸಭಾ ಚುನಾವಣೆಗೆ ಸ್ಪರ್ಧಿಸುವಾಗ ಇವರೇ ಸಲ್ಲಿಸಿರುವ ಅಫಿಡವಿಟ್ಟುಗಳು ಇವರ ಕ್ರಿಮಿನಲ್‌ಗಾಥೆಯನ್ನು ಸಾರಿಸಾರಿ ಹೇಳುತ್ತವೆ. ಇದು ಬೆಳಕಿಗೆ ಬಂದಿರುವ ಸತ್ಯ. ಕೊಲೆ, ಸುಲಿಗೆ, ರೇಪ್‌ಗಳನ್ನು ಮಾಡಿಯೂ ತಮಗಿರುವ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಕೇಸು ಜಡಿಸಿಕೊಳ್ಳದ ಎಂಪಿಗಳು ಇನ್ನೆಷ್ಟಿದ್ದಾರೋ?

ಈ 125 ಕ್ರಿಮಿನಲ್ಲುಗಳಲ್ಲಿ 96 ಜನರು ಎರಡು ವರ್ಷಕ್ಕಿಂತ ಹೆಚ್ಚು ಕಾಲ ಜೈಲುಶಿಕ್ಷೆಗೆ ಅರ್ಹವಾಗಿರುವ ಗಂಭೀರ ಅಪರಾಧಗಳನ್ನು ಎಸಗಿದ್ದಾರೆ.

ಪಕ್ಷವಾರು ನೋಡುವುದಾದರೆ ಅತಿಹೆಚ್ಚು ಕ್ರಿಮಿನಲ್ಲುಗಳನ್ನು ಗೆಲ್ಲಿಸಿಕೊಂಡು ಬಂದ ಅಪಕೀರ್ತಿ ಬಿಜೆಪಿಗೆ ಸಲ್ಲುತ್ತದೆ. 23 ಕ್ರಿಮಿನಲ್ಲುಗಳನ್ನು ಅದು ಲೋಕಸಭೆಗೆ ಕಳುಹಿಸಿ ಪ್ರಥಮ ಸ್ಥಾನದಲ್ಲಿದ್ದರೆ 17 ಕ್ರಿಮಿನಲ್ಲುಗಳನ್ನು ಗೆಲ್ಲಿಸಿಕೊಂಡು ಹೋಗಿರುವ ಕಾಂಗ್ರೆಸ್ ಎರಡನೇ ಸ್ಥಾನದಲ್ಲಿದೆ. ಉಳಿದಂತೆ ಸಮಾಜವಾದಿ ಪಕ್ಷ, ರಾಷ್ಟ್ರೀಯ ಜನತಾದಳ, ಸಿಪಿಎಂ, ಬಿಎಸ್‌ಪಿ ಮತ್ತು ಜೆಎಂಎಂ ಪಕ್ಷಗಳು ಕ್ರಮವಾಗಿ 9, 7, 6, 5, 5 ಕ್ರಿಮಿನಲ್ಲುಗಳನ್ನು ಲೋಕಸಭೆಗೆ ಕಳಿಸಿವೆ.



ರಾಜ್ಯವಾರು ನೋಡುವುದಾದರೆ 17 ಜನ ಕ್ರಿಮಿನಲ್ಲುಗಳನ್ನು ಲೋಕಸಭೆಗೆ ಆರಿಸಿಕಳಿಸಿರುವ ಉತ್ತರ ಪ್ರದೇಶ ಮೊದಲನೇ ಸ್ಥಾನದಲ್ಲಿದ್ದರೆ 11 ಕ್ರಿಮಿನಲ್ಲುಗಳನ್ನು ಆರಿಸಿಕಳಿಸಿರುವ ಬಿಹಾರ ಎರಡನೇ ಸ್ಥಾನದಲ್ಲಿದೆ. ತಲಾ ಏಳು ಕ್ರಿಮಿನಲ್ಲುಗಳನ್ನು ಆಯ್ಕೆ ಮಾಡಿರುವ ಮಧ್ಯಪ್ರದೇಶ ಮತ್ತು ಜಾರ್ಖಂಡ್ ಮೂರನೇ ಸ್ಥಾನದಲ್ಲಿದ್ದರೆ ಆರು ಜನ ಕ್ರಿಮಿನಲ್ಲುಗಳನ್ನು ಆಯ್ಕೆ ಮಾಡಿಕಳಿಸಿರುವ ಕರ್ನಾಟಕ ನಾಲ್ಕನೇ ಸ್ಥಾನದಲ್ಲಿದೆ.

ಈ ಅಂಕಿಅಂಶಗಳನ್ನು ನೋಡಿದರೆ ಸಂಸತ್ತು ಕೊಲೆಗಡುಕರಿಂದ, ಸುಲುಗೆಕೋರರಿಂದ, ರೇಪಿಸ್ಟುಗಳಿಂದ ತುಂಬಿದೆ ಎನ್ನಿಸುವುದಿಲ್ಲವೆ? ಈ ಬಾರಿಯಾದರೂ ಮತದಾರರು ಇಂಥ ಕ್ರಿಮಿನಲ್ಲುಗಳನ್ನು ಸಂಸತ್ತಿನಿಂದ ಹೊರಗಿಡುತ್ತಾರಾ? ಕಾದುನೋಡಬೇಕಷ್ಟೆ.

ಸುತ್ತ ಮುತ್ತ



▸▸ ಕುಮಾರ್ ಬುರಡಿಕಟ್ಟಿ

ಸಿಪಿಎಂ ಇದನ್ನು ಹೇಗೆ ಸಮರ್ಥಿಸುತ್ತದೆ?



'From wrong to wrong, the exasperated spirit proceeds. ಇದು ಟಿ.ಎಸ್.ಈಲಿಯಟ್‌ನ ಕಾವ್ಯದ ಸಾಲು. ಒರಿಸ್ಸಾದ ಬಿಜು ಜನತಾ ದಳ (ಬಿಜೆಡಿ) ಜೊತೆಗೆ ಸಿಪಿಎಂನ ಕಮ್ಯೂನಿಸ್ಟರು ಚುನಾವಣಾ ಪೂರ್ವ ಹೊಂದಾಣಿಕೆ ಮಾಡಿಕೊಂಡಿರುವ ಈ ಸಂದರ್ಭದಲ್ಲಿ ಸಿಪಿಎಂಗೆ ಈ ಕಾವ್ಯದ ಸಾಲು ಬಹಳ ಚೆನ್ನಾಗಿ ಒಪ್ಪುತ್ತದೆ.

ಒರಿಸ್ಸಾದ ಕಂದಮಾಲ್ ಜಿಲ್ಲೆಯಲ್ಲಿ ಸಂಘಪರಿವಾರದ ರಾಕ್ಷಸರು ಕ್ರಿಶ್ಚಿಯನ್ನರ ಮೇಲೆ, ಚರ್ಚುಗಳ ಮೇಲೆ ತಿಂಗಳುಗಟ್ಟಲೇ ದಾಳಿಗಳು ನಡೆದಾಗ ಇದೇ ಬಿಜು ಜನತಾದಳ ಅಧಿಕಾರದಲ್ಲಿತ್ತು. ತನ್ನ ಸರ್ಕಾರಕ್ಕೆ ಹಿಂದೂತ್ವವಾದಿ ಬಿಜೆಪಿಗಳು ಬೆಂಬಲ ಕೊಟ್ಟಿದ್ದರಿಂದ ದಾಳಿಕೋರರ ಮೇಲೆ ಬಿಜೆಡಿಯ ಮುಖ್ಯಮಂತ್ರಿ, ನವೀನ್ ಪಟ್ನಾಯಕ್ ಯಾವುದೇ ಕ್ರಮ ಕೈಗೊಳ್ಳದೇ ಬಿಜೆಪಿಯ ಋಣ ತೀರಿಸಿದ್ದರು. ಪರಿಣಾಮವಾಗಿ ಹಿಂದೂತ್ವವಾದಿ ಭಯೋತ್ಪಾದಕರು ಹಚ್ಚಿದ ಬೆಂಕಿಗೆ 32 ಅಮಾಯಕ ಕ್ರಿಶ್ಚಿಯನ್ನರು ಬಲಿಯಾದರು; 140 ಚರ್ಚುಗಳು ಸುಟ್ಟು ಭಸ್ಮವಾದವು; 2000ಕ್ಕಿಂತ ಹೆಚ್ಚು ಕ್ರಿಶ್ಚಿಯನ್ನರ ಮನೆಗಳು ಗುರುತಿಲ್ಲದಂತೆ ನಾಶವಾದವು.

ಅತ್ತ ಒರಿಸ್ಸಾದಲ್ಲಿ ಈ ದಾಳಿಗಳು ನಡೆಯುತ್ತಿದ್ದಾಗ ಇದೇ ಸಿಪಿಎಂ ಕಮ್ಯೂನಿಸ್ಟರು ಇತ್ತ ಕೇರಳದ ಮೂಲೆ ಮೂಲೆಯಲ್ಲಿ ನವೀನ್ ಪಟ್ನಾಯಕ್ ವಿರುದ್ಧ, ಬಿಜೆಪಿ ವಿರುದ್ಧ, ಸಂಘಪರಿವಾರದ ವಿರುದ್ಧ ದೊಡ್ಡ ದೊಡ್ಡ ಪ್ರತಿಭಟನೆಗಳನ್ನು ನಡೆಸಿದ್ದರು. ಒರಿಸ್ಸಾದಲ್ಲಿ ಮಾತ್ರವಲ್ಲ, ಕೇರಳದಲ್ಲೂ ಮುಂಬರುವ ಲೋಕಸಭಾ ಚುನಾವಣೆಯನ್ನು ಎದುರಿಸಲು ಕಂದಮಾಲ್ ಮಾರಣ ಹೋಮವನ್ನೇ ಪ್ರಧಾನ ಅಸ್ತ್ರವಾಗಿ ಬಳಸಲು ನಿರ್ಧರಿಸಿದ್ದರು. ಈಗ ಅದೆಲ್ಲಾ ತಲೆಕೆಳಗಾಗಿದೆ. ಮಾರಣ ಹೋಮ ನಡೆಸಿದ ಸಂಘಪರಿವಾರಿಗಳೊಂದಿಗೆಕೈಜೋಡಿಸಿದ ಬಜೆಡಿಯೊಂದಿಗೆ ಸಿಪಿಎಂ ಕಮ್ಯೂನಿಸ್ಟರೂ ಕೈಜೋಡಿಸಿ ದ್ದಾರೆ.




ಹಾಗೆನೋಡಿದರೆ ಕೇರಳದಲ್ಲಿ ಶೇ.20 ಕ್ರಿಶ್ಚಿಯನ್ನರಿದ್ದಾರೆ. ಮುಸ್ಲಿಮರೂ ಹೆಚ್ಚೂಕಡಿಮೆ ಶೇ.20ರಷ್ಟಿದ್ದಾರೆ. ತಮ್ಮ ಬದ್ಧವೈರಿಯಾಗಿರುವ ಬಿಜೆಪಿಗೆ ಅವರೆಂದೂ ಓಟು ಕೊಟ್ಟಿಲ್ಲ. ಅವರ ನಿಷ್ಠೆ ಏನಿದ್ದರೂ ಒಂದೋ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮೈತ್ರಿಕೂಟಕ್ಕೆ, ಇಲ್ಲವೇ ಎಡಪಕ್ಷಗಳ ಮೈತ್ರಿಕೂಟವಾದ ಎಲ್‌ಡಿಎಫ್‌ಗೆ. ಈಗ ಕಮ್ಯೂನಿಸ್ಟರೂ ಕ್ರಿಶ್ಚಿಯನ್ನರ ಮಾರಣ ಹೋಮ ನಡೆಸಿದ ಬಿಜು ಜನತಾದಳದೊಂದಿಗೆ ಕೈಜೋಡಿಸಿದ್ದರಿಂದ, ಅದೂ ಲೋಕಸಭಾ ಚುನಾವಣೆ ಹತ್ತಿರವಾಗುತ್ತಿರುವ ಈ ಸಂದರ್ಭದಲ್ಲಿ, ಕೇರಳದ ಕ್ರಿಶ್ಚಿಯನ್ ಮತ್ತು ಮುಸ್ಲಿಮರ ಮತಗಳು ಈ ಬಾರಿ ಯುಡಿಎಫ್ ಪಾಲಾಗುವ ನಿರೀಕ್ಷೆಯೇ ಜಾಸ್ತಿ.

ಪಟ್ಟನಮ್‌ತಿಟ್ಟ, ಕೊಟ್ಟಯಂ, ಎರ್ನಾಕುಲಂ, ತ್ರಿಸೂರ್, ಚಲಕ್ಕುಡಿ ಲೋಕಸಭಾ ಕ್ಷೇತ್ರಗಳಲ್ಲಿ ಕ್ರಿಶ್ಚಿಯನ್ನರೇ ನಿರ್ಣಾಯಕರು. ಕಂದಮಾಲ್‌ನ ಗಾಯವಿನ್ನೂ ಅವರ ಮನಸ್ಸಿನಿಂದ ಮಾಯವಾಗಿಲ್ಲ. ಅಷ್ಟರಲ್ಲೇ ಸಿಪಿಎಂ ಬಿಜೆಡಿಯೊಂದಿಗೆ ಕೈಜೋಡಿಸಿದ್ದು ಅವರಲ್ಲಿ ಅಸಮಾಧಾನ ಮೂಡಿಸಿದೆ. ಈಗಾಗಲೇ ಹಲವಾರು ಚರ್ಚುಗಳ ಫಾದರ್‌ಗಳು ಸಿಪಿಎಂ ನಿರ್ಧಾರದ ವಿರುದ್ಧ ಬಹಿರಂಗವಾಗಿ ಮಾತನಾಡಲಾರಂಭಿಸಿದ್ದಾರೆ. ಅದು ಚುನಾವಣೆಯ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಕೇರಳದ ಮುಖ್ಯಮಂತ್ರಿ, ಸಿಪಿಎಂನ ವಿ.ಎಸ್.ಅಚ್ಯುತಾನಂದನ್ ಮತ್ತು ಸಿಪಿಎಂನ ರಾಜ್ಯ ಘಟಕದ ಕಾರ್ಯದರ್ಶಿ ಪಿಣರಾಯಿ ವಿಜಯನ್ ನಡುವಿನ ತಿಕ್ಕಾಟದ ಪರಿಣಾಮವಾಗಿ ಈಗಾಗಲೇ ಕೇರಳದ ಸಿಪಿಎಂನಲ್ಲಿ ದೊಡ್ಡದಾದ ಬಿರುಕು ಮೂಡಿದೆ. ಪಕ್ಷವೇ ಇಬ್ಭಾಗವಾಗುವ ಅಪಾಯ ಎದುರಾಗಿದೆ. ಅಂತಹದ್ದರಲ್ಲಿ ಈಗ ಅದು ನಿರ್ಣಾಯಕ ಸಮುದಾಯಗಳಾಗಿರುವ ಮುಸ್ಲಿಮ್ ಮತ್ತು ಕ್ರಿಶ್ಚಿಯನ್ನರ ವಿರೋಧವನ್ನೂ ಕಟ್ಟಿಕೊಂಡಿದೆ.

ಒಂದಂತೂ ಸ್ಪಷ್ಟ. ಕಳೆದ 2004ರ ಲೋಕಸಭಾ ಚುನಾವಣೆಯಲ್ಲಿ ಕೇರಳದ ಒಟ್ಟು 20 ಸ್ಥಾನಗಳ ಪೈಕಿ 19 ಸ್ಥಾನಗಳು ಎಡಪಕ್ಷಗಳ ಪಾಲಾಗಿದ್ದವು. ಆದರೆ, ಈ ಬಾರಿ ಅದು ಪುನರಾವರ್ತನೆಯಾಗುವುದಿಲ್ಲ.

ಮತ್ತೆ ಸೇನಾ ತೆಕ್ಕೆಗೆ ಪಾಕ್?

ಪಾಕಿಸ್ತಾನದಲ್ಲಿ ಮತ್ತೆ ಸೈನ್ಯದ ಸರ್ವಾಧಿಕಾರ ಪ್ರಾರಂಭವಾಗುವ ಸಾಧ್ಯತೆ ದಟ್ಟವಾಗಿ ಆವರಿಸ ತೊಡಗಿದೆ. ಭದ್ರತೆ ಮತ್ತು ಉತ್ತಮ ಆಡಳಿತ ನೀಡಲು ಆಸೀಫ್ ಅಲಿ ಜರ್ದಾರಿ ನೇತೃತ್ವದ ಚುನಾಯಿತ ಸರ್ಕಾರ ವಿಫಲವಾಗಿದೆಯೆಂದು ಹೇಳುತ್ತಾ ಒಂದು ವಾರದೊಳಗೆ ಎಲ್ಲವೂ ಸರಿಹೋಗಬೇಕೆಂದು ಸೇನಾ ಮುಖ್ಯಸ್ಥ ಜನರಲ್ ಅಷ್ಫಾಕ್ ಪರ್ವೇಜ್ ಕಯಾನಿ ಮೊನ್ನೆ ಗಡುವು ನೀಡಿದ್ದಾರೆ. ಸರಿಹೋಗದಿದ್ದರೆ ದೇಶದ ಆಡಳಿತವನ್ನು ಸೇನಾ ವಶಕ್ಕೆ ತೆಗೆದುಕೊಳ್ಳಲಾಗುತ್ತದೆ ಎಂದು ಯಾವ ಮುಚ್ಚುಮರೆಯಿಲ್ಲದೇ ಬೆದರಿಕೆಯೊಡ್ಡಿದ್ದಾರೆ.



ಕಯಾನಿಯವರ ಈ ಬೆದರಿಕೆಯನ್ನು ಪ್ರತ್ಯೇಕವಾದ, ಬಿಡಿಯಾದ ಒಂದು ಬೆದರಿಕೆ ಎಂದಷ್ಟೇ ನೋಡಲು ಬರುವುದಿಲ್ಲ, ಇದಕ್ಕೂ ಮೊದಲು ಶ್ರೀಲಂಕಾ ಕ್ರಿಕೆಟ್ ತಂಡದ ಮೇಲೆ ಪಾಕಿಸ್ತಾನದಲ್ಲಿ ಭಯೋತ್ಪಾದಕ ದಾಳಿ ನಡೆದಿರುವುದು, ನಂತರ ಕಯಾನಿಯವರು ಅಮೆರಿಕಕ್ಕೆ ಹೋಗಿಬಂದಿರುವುದು ಮತ್ತು ಈಗ ಅವರು ಈ ಗಡುವಿನ ಬೆದರಿಕೆಯೊಡ್ಡಿರುವುದು – ಈ ಮೂರಕ್ಕೂ ಪರಸ್ಪರ ಸಂಬಂಧವಿದೆ.

ಪಾಕಿಸ್ತಾನದಲ್ಲಿ ಜನರಲ್ ಪರ್ವೇಜ್ ಮುಷರಫ್ ಯುಗ ಕೊನೆಗೊಂಡು ಆಸೀಫ್ ಅಲಿ ಜರ್ದಾರಿ ನೇತೃತ್ವದ ಚುನಾಯಿತ ಸರ್ಕಾರ ಅಧಿಕಾರಕ್ಕೇರಿತ್ತು. ಪಾಕ್‌ನಲ್ಲಿ ದಿನೇ ದಿನೇ ತಮ್ಮ ನೆಲೆಯನ್ನು ಭದ್ರಪಡಿಸಿಕೊಳ್ಳುತ್ತಿರುವ, ವಿಸ್ತರಿಸಿಕೊಳ್ಳುತ್ತಿರುವ ಆಲ್‌ಕೈದಾ, ಲಷ್ಕರ್-ಎ-ತೊಯ್ಬಾ, ಜೈಷೇ ಮೊಹ್ಮದ್ ಮುಂತಾದ ಇಸ್ಲಾಮಿಕ್ ಭಯೋತ್ಪಾದಕ ಸಂಘಟನೆಗಳನ್ನು, ಅವುಗಳ ವಿಚ್ಛಿದ್ರಕಾರಿ ಕೃತ್ಯಗಳನ್ನು ತಡೆಯುವುದಕ್ಕೆ ಜರ್ದಾರಿ ನೇತೃತ್ವದ ಸರ್ಕಾರ ವಿಫಲವಾಗಿದ್ದು ನಿಜ. ಪಾಕ್‌ನಲ್ಲಿ ಈ ಭಯೋತ್ಪಾದಕ ಸಂಘಟನೆಗಳು ಎಷ್ಟರಮಟ್ಟಿಗೆ ಬೇರೂರಿವೆ ಎಂದರೆ ಅವುಗಳನ್ನು ನಿಯಂತ್ರಿಸುವುದಕ್ಕೆ ಸರ್ಕಾರದಿಂದ ಸಾಧ್ಯವಾಗುತ್ತಿಲ್ಲ. ಅಂತಹದ್ದೊಂದು ಪ್ರಾಮಾಣಿಕ ಪ್ರಯತ್ನಕ್ಕೆ ಸರ್ಕಾರವೇನಾದರೂ ಮುಂದಾದರೆ ಮರುದಿನವೇ ಅದು ಉರುಳಿಹೋಗುತ್ತದೆಂಬ ಭಯ ಆಡಳಿತಗಾರರಿಗೆ ಇದ್ದೇ ಇದೆ. ಈಗ ಇದನ್ನೇ ನೆಪ ಮಾಡಿಕೊಂಡು ಅಮೆರಿಕ ಚುನಾಯಿತ ಸರ್ಕಾರವನ್ನು ಉರುಳಿಸಿ ಪಾಕ್ ಸೈನ್ಯದ ಸರ್ವಾಧಿಕಾರಿ ಆಡಳಿತ ಹೇರಲು ಮುಂದಾಗಿದೆ. ಶ್ರೀಲಂಕಾ ಕ್ರಿಕೆಟ್ ತಂಡದ ಮೇಲೆ ದಾಳಿ ನಡೆದದ್ದು ಪಾಕಿಸ್ತಾನದಲ್ಲಿ ಚುನಾಯಿತ ಸರ್ಕಾರ ಆಂತರಿಕ ಭದ್ರತೆ ಮತ್ತು ಉತ್ತಮ ಆಡಳಿತ ನಡೆಸಲು ವಿಫಲವಾಗಿದೆ ಎಂಬುದನ್ನು ಮತ್ತೊಮ್ಮೆ ಜಗತ್ತಿನ ಮುಂದೆ ತೋರಿಸುವ ಮತ್ತು ಅದನ್ನೇ ನೆಪಮಾಡಿಕೊಂಡು ಸೇನಾಡಳಿತವನ್ನು ಹೇರುವ ಗೇಮ್‌ಪ್ಲಾನ್ ಭಾಗವಾಗಿಯೇ.



ಸುಮಾರು ಹತ್ತು ಲಕ್ಷದಷ್ಟು ಸಕ್ರಿಯ ಸೈನಿಕರನ್ನು ಹೊಂದಿರುವ ಪಾಕಿಸ್ತಾನದ ಸೇನೆ ವಿಶ್ವದ ಏಳನೇ ಅತಿದೊಡ್ಡ ಸೇನೆಯಾಗಿದೆ. ಅಣು ಬಾಂಬ್‌ಗಳನ್ನು ಹೊಂದಿ ರುವ ವಿಶ್ವದ ಕೆಲವೇ ಕೆಲವು ದೇಶಗಳ ಪೈಕಿ ಪಾಕ್ ಕೂಡ ಒಂದು. ಇದಲ್ಲದೇ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು, ಯುದ್ಧ ವಿಮಾನಗಳನ್ನು, ಯುದ್ಧ ಹಡಗುಗಳನ್ನು ಅದು ಹೊಂದಿದೆ.

ಚಾರಿತ್ರಿಕವಾಗಿ ನೋಡುವುದಾದರೆ ಇಷ್ಟೊಂದು ಬಲಿಷ್ಠವಾಗಿರುವ ಪಾಕ್ ಸೇನೆ ಅಲ್ಲಿನ ಚುನಾಯಿತ ಸರ್ಕಾರಗಳಿಗೆ ಬದ್ಧವಾಗಿದ್ದದ್ದು ಇಲ್ಲವೇ ಇಲ್ಲ. ಅದರ ಬದ್ಧತೆಯೇನಿದ್ದರೂ ಅಮೆರಿಕಕ್ಕೆ; ಅಮೆರಿಕ[...] ಗುಪ್ತಚರ ಇಲಾಖೆ ಸಿ.ಐ.ಎ.ನ ಮಾರ್ಗದರ್ಶನದಲ್ಲಿಯೇ ಪಾಕ್ ಸೈ[...] ತನ್ನೆಲ್ಲಾ ಕಾರ್ಯಾಚರಣೆಗಳನ್ನು ನಡೆಸುತ್ತದೆ. ಆದ್ದರಿಂದಲೇ ಅಮೆರಿ[...] ಯಾವಾಗ ಬೇಕಾದರೂ, ಏನು ಕಾರಣ ಕೊಟ್ಟಾದರೂ ಪ್ರಜಾತಾಂತ್ರಿಕವಾ[...] ಚುನಾಯಿತಗೊಂಡ ಸರ್ಕಾರಗಳನ್ನು ಉರುಳಿಸಿ ಸೇನಾಡಳಿತವನ[...] ಪ್ರತಿಷ್ಠಾಪಿಸಿಬಿಡುತ್ತದೆ.


ಮೊದಲ ಬಾರಿಗೆ 1958ರಲ್ಲಿ ಅಂದಿ[...] ಸೇನಾ ಮುಖ್ಯಸ್ಥರಾಗಿದ್ದ ಜನರಲ್ ಅಯೂಬ[...] ಖಾನ್ ಚುನಾಯಿತ ಸರ್ಕಾರವನ್ನು ಉರುಳಿ[...] ಆಡಳಿತವನ್ನು ಕೈವಶಕ್ಕೆ ತೆಗೆದುಕೊಳ್ಳುವು[...] ರೊಂದಿಗೆ ಪಾಕಿಸ್ತಾನದಲ್ಲಿ ಸೇನಾ ಸರ್ವಾಧಿಕಾರ[...] ಕೆಟ್ಟ ಪರಂಪರೆ ಪ್ರಾರಂಭವಾಯಿತು. ಅಯೂಬ[...] ಖಾನ್ ದೇಶದ ಸಂವಿಧಾನವನ್ನೇ ಧಿಕ್ಕರಿ[...] 1969ರ ತನಕ ಸರ್ವಾಧಿಕಾರಿಯಾಗಿ ಮೆರೆದರು[...]

1969ರ ಹೊತ್ತಿಗೆ ಇಡೀ ಪಾಕಿಸ್ತಾನದಲ್ಲಿ ಅಯೂಬ್ ಖಾನ[...] ಸರ್ವಾಧಿಕಾರದ ವಿರುದ್ಧ ದೊಡ್ಡ ಮಟ್ಟದ ಪ್ರತಿರೋಧವೆದ್ದಾಗ ತ[...] ಬಲಗೈ ಭಂಟ, ಪಾಕ್ ಸೇನೆಯ ಕಮ್ಯಾಂಡರ್ ಇನ್ ಚೀಫ್ ಜನರಲ[...] ಯಾಹ್ಯಾ ಖಾನ್‌ಗೆ ಅಧಿಕಾರ ಹಸ್ತಾಂತರಿಸಿದರು. ಭಾರತದೊಂದಿಗಿ[...] ಯುದ್ಧದಲ್ಲಿ ಪಾಕ್ ಸೇನೆ ಹೀನಾಯವಾಗಿ ಸೋತಿದ್ದು, ಬಾಂಗ್ಲಾದೇಶ[...] ಪಾಕ್‌ನಿಂದ ಬೇರ್ಪಟ್ಟು ಸ್ವತಂತ್ರ ದೇಶವಾಗಿ ಹೊ[...] ಹೊಮ್ಮಿದ್ದು ವಾಸ್ತವದಲ್ಲಿ ಯಾಹ್ಯಾ ಖಾನ್ ವಿರುದ್ಧ[...] ಜನಾಂದೋಲನ ಭುಗಿಲೇಳಲು ಕಾರಣವಾಯಿತು[...] ಅಂತಿಮವಾಗಿ 1971ರಲ್ಲಿ ಅವರು ಜುಲ್ಫಿಕರ್ ಅ[...] ಭುಟ್ಟೋಗೆ ಅಧಿಕಾರ ಹಸ್ತಾಂತರಿಸಬೇಕಾಯಿತು.

ಮತ್ತೆ 1978ರಲ್ಲಿ ಅಂದಿನ ಸೇನಾ ಮುಖ್ಯಸ್ಥನಾಗಿ[...] ಜನರಲ್ ಜಿಯಾ ಉಲ್ ಹಕ್ ಭುಟ್ಟೋ ಅವ[...] ಸರ್ಕಾರವನ್ನು ಉರುಳಿಸಿ ಸೇನಾಸರ್ವಾಧಿಕಾರವನ[...] ಹೇರಿದರು. 1988ರಲ್ಲಿ ಅವರು ವಿಮಾನ ಅಪಘಾತದ[...] ಸಾವನ್ನಪ್ಪುವವರೆಗೂ ಅಧಿಕಾರದಲ್ಲಿ ಮುಂದುವರೆದರು[...] ಆ ನಂತರ ಪ್ರಜಾತಾಂತ್ರಿಕವಾಗಿ ಚುನಾಯಿತಗೊಂ[...] ಸರ್ಕಾರ ಅಧಿಕಾರಕ್ಕೆ ಬಂದಿತಾದರೂ ಅದು ಬಹ[...] ವರ್ಷ ಮುಂದುವರೆಯಲಿಲ್ಲ. 1999ರಲ್ಲಿ ಪ್ರಧಾ[...] ನವಾಜ್ ಷರೀಫ್ ಅವರ ಸರ್ಕಾರವನ್ನು ಉರುಳಿ[...] ಸೇನಾ ಮುಖ್ಯಸ್ಥ ಜನರಲ್ ಪರ್ವೇಜ್ ಮುಷರಫ[...] ಮತ್ತೆ ಸೇನಾ ಸರ್ವಾಧಿಕಾರ ಹೇರಿದರು. ರಾಷ್ಟ್ರದೊಳಗೆ ಮಾತ್ರವಲ್ಲದ[...] ಅಂತಾರಾಷ್ಟ್ರೀಯವಾಗಿಯೂ ಮುಷರಫ್ ವಿರುದ್ಧ ಭಾರಿ ಪ್ರತಿರೋಧ[...] ಅಲೆ ಎದ್ದ ಕಾರಣ ಅನಿವಾರ್ಯವಾಗಿ ಅವರೂ ತೊಲಗಬೇಕಾಯಿತ[...] ಅವರ ನಿರ್ಗಮನದಿಂದ ಪಾಕ್ ಜನತೆ ನೆಮ್ಮದಿಯ ನಿಟ್ಟುಸಿ[...] ಬಿಡುತ್ತಿದ್ದಂತೆಯೇ ಈಗ ಅಷ್ಫಾಕ್ ಪರ್ವೇಜ್ ಕಯಾನಿ ಮ[...] ಸರ್ವಾಧಿಕಾರಿಯಾಗಲು ಹೊರಟಿದ್ದಾ[...] ಅದಕ್ಕೆ ಅಮೆರಿಕ ಕಯಾನಿಯ ಬೆನ್ನಿಗಿ[...]

ಅಫಘಾನಿಸ್ತಾನದಲ್ಲಿ ಪ್ರಜಾಪ್ರಭು[...] ವಿಲ್ಲ, ಅಲ್ಲಿ ಪ್ರಜಾಪ್ರಭುತ್ವ ಸ್ಥಾಪ[...] ಮಾಡುತ್ತೇನೆಂದು ಅದರ ಮೇಲೆ ಯು[...] ಮಾಡಿದ್ದು ಇದೇ ಅಮೆರಿಕ. ಇರಾಕ್‌ನ[...] ಸದ್ದಾಂ ಹುಸೇನನ ಸರ್ವಾಧಿಕಾರವ[...] ತೊಲಗಿಸಿ ಅಲ್ಲಿ ಪ್ರಜಾಪ್ರಭುತ್ವವ[...] ಸ್ಥಾಪಿಸುತ್ತೇನೆಂದು ಅದರ ಮೇಲ[...] ಅನ್ಯಾಯವಾಗಿ ಯುದ್ಧ ಮಾಡಿದ್ದು ಇ[...] ಅಮೆರಿಕ. ತನ್ನ ಯುದ್ಧಕೋರತನ[...] ಸಮರ್ಥನೆಯಾಗಿ 'ಇಡೀ ವಿಶ್ವದಾದ್ಯಂತ ಪ್ರಜಾಪ್ರಭುತ್ವ ಸ್ಥಾಪನೆಯ[...] ತನ್ನ ಗುರಿ' ಎಂದು ಕಂಡ ಕಂಡ ಕಡೆಯಲ್ಲೆಲ್ಲಾ ಯುದ್ಧ ಮಾಡುತ್ತಿರು[...] ಇದೇ ಅಮೆರಿಕ ಪಾಕಿಸ್ತಾನದಲ್ಲಿ ಪ್ರಜಾಪ್ರಭುತ್ವದ ವಿರುದ್ಧವಾಗಿ, ಸೇ[...] ಸರ್ವಾಧಿಕಾರ ಪರವಾಗಿ ಯುದ್ಧ ಮಾಡುತ್ತಿದೆ!

...ತ್ಯ ಹೇಳಿದರೆ ನಾಲಿಗೆ ಕಟ್!




ರಾಮಚಂದ್ರಾಪುರ ಮಠದ ಸಗಣಿ ಸ್ವಾಮಿ ರಾಘವೇಶ್ವರ ರಾಜಕೀಯ ಮಾಡುತ್ತಾರೆ ...ಬುದು ಎಲ್ಲರಿಗೂ ಗೊತ್ತಿರುವ ವಿಷಯ. ಯಡ್ಡಿ ಮಗ ರಾಘವೇಂದ್ರಗೆ ಟಿಕೆಟ್ ...ಡುವಂತೆ ಸ್ವಾಮೀಜಿ ಬಹಿರಂಗವಾಗಿಯೇ ಅಥ್ವಾಣಿ ಜೊತೆ ದೂರವಾಣಿಯಲ್ಲಿ ಮಾತನಾಡಿದ್ದನ್ನು ...ಕಾದಷ್ಟು ಮಂದಿ ಕೇಳಿಸಿಕೊಂಡಿದ್ದಾರೆ. ಈ ವಿಷಯವನ್ನು ಇತ್ತೀಚೆಗೆ ಪ್ರಸ್ತಾಪಿಸಿದ ಬಂ, ...ಜಕಾರಣ ಮಾಡುವ ಈ ಸ್ವಾಮೀಜಿಯನ್ನು ಸಹಜವಾಗಿಯೇ ತರಾಟೆಗೆ ತೆಗೆದುಕೊಂಡಿದ್ದಾರೆ.

ಇದೀಗ ಶಿವಮೊಗ್ಗದ ಕೆಲಸವಿಲ್ಲದ ಕೆಲ ಬಜೆಪಿ ನಾಯಕರಿಗೆ ಇದೇ ಚುನಾವಣಾ ...ಷಯವಾಗಿ ಗೋಚರಿಸಿದ. ತಮ್ಮ ಚೆಡ್ಡಿ ಪಕ್ಷದಲ್ಲಿನ ವಂಶಪಾರಂಪರ್ಯ ರಾಜಕೀಯವನ್ನು ವಿರೋಧಿಸಲಾಗದ, ...ಡ್ಡಿಯಿಂದ ಲೋಕಸಭೆಗೆ ಸ್ಪರ್ಧಿಸಲು "ಲಾಯಕ್ಕಲ್ಲದವರು" ಎಂದು ಕರೆಸಿಕೊಂಡಿದ್ದರೂ ಚಕಾರವೆತ್ತುವ ಧೈರ್ಯವಿಲ್ಲದ ... ನಾಯಕರು ಈಗ ಹೋದಲ್ಲಿ ಬಂದಲ್ಲಿ ಬಂರ ಹೇಳಿಕೆಯನ್ನು ಪ್ರಸ್ತಾಪಿಸಿ, ಬಾಯಿಗೆ ಬಂದಹಾಗೆ ಮಾತನಾಡುತ್ತಾ ...ಮ್ಮ 'ಶೌರ್ಯ'ವನ್ನು ಪ್ರದರ್ಶಿಸುತ್ತಿದ್ದಾರೆ.


"ಈತ ವಿದ್ಯುತ್ ಮಂತ್ರಿಯಲ್ಲ, ವಿದ್ಯುತ್ ಕಟ್ ಮಂತ್ರಿ" ಎಂದು ಈಗ ಸಾರ್ವಜನಿಕರ ಅಪಹಾಸ್ಯಕ್ಕೆ ಗುರಿಯಾಗಿರುವ ...ಎಸ್. ಈಶ್ವರಪ್ಪ ಎಂಬ ಅವಿವೇಕಿಯಂತೂ ಬಂಗಾರಪ್ಪನವರ ನಾಲಿಗೆ ಕತ್ತರಿಸುವ ಸೊಕ್ಕಿನ ಮಾತನಾಡಿದ್ದಾನೆ. ...ಒಮ್ಮೆ ಇದೇ ಈಶ್ವರಪ್ಪ "ದನ ಕಡಿಯುವವರ ಕೈಗಳನ್ನು, ದನದ ಮಾಂಸ ತಿನ್ನುವವರ ನಾಲಿಗೆಯನ್ನು ...ತ್ತರಿಸುತ್ತೇವೆ" ಎಂದಿದ್ದ. ಈ ಹರಕು ಬಾಯಿ ಸಚಿವನಿಗೆ ಮಾನ-ಮರ್ಯಾದೆ ಎರಡೂ ಇಲ್ಲ. ತನಗೆ ನೀಡಿರುವ ...ವಾಬ್ದಾರಿಯನ್ನೇ ಸರಿಯಾಗಿ ನಿಭಾಯಿಸಲಾಗದ ಈತ ಸದ್ಯದಲ್ಲೇ "ಕರೆಂಟನ್ನು ಸರಿಯಾಗಿ ಕೊಡಿ ಎಂದರೆ ರೈತರ ...ಲಿಗೆಗೇ ಕರೆಂಟ್ ಶಾಕ್ ನೀಡುತ್ತೇನೆ" ಎಂದರೂ ಆಶ್ಚರ್ಯವಿಲ್ಲ. ಈಶ್ವರಪ್ಪನ 'ಪವರ್'ಅನ್ನು ಯಡ್ಡಿ ಈಗಾಗಲೇ ...ರ್ಧ ಕಟ್‌ಮಾಡಿದ್ದಾರೆ. ಉಳಿದ ಕೆಲಸ ಶಿವಮೊಗ್ಗದ ಪ್ರಜ್ಞಾವಂತರಿಗೆ ಬಿಟ್ಟಿದ್ದು.

...ಶಿವಮೊಗ್ಗ ...ಕು.ಬಂ. ...ಕಾಂಗ್ರೆಸ್ ...ಅಭ್ಯರ್ಥಿ?



ಪಾಪ, ಮಾಜಿ ಮುಖ್ಯಮಂತ್ರಿ 'ಬಂ' ...ಬಯಸಿದುಕೊಂಡಂತೆ ಯಾವುದೂ ನಡೆಯುವಂತೆ ...ಕಾಣುತ್ತಿಲ್ಲ. ಶಿವಮೊಗ್ಗದ ಕಾಂಗ್ರೆಸ್ ಟಿಕೆಟ್ ...ನಗೇ ಎಂದು ಬಂಗಾರಪ್ಪ ಟಾಂಟಾಂ ...ಹೊಡೆಯುತ್ತಿದ್ದರೂ ಅದಿನ್ನೂ ಖಚಿತಪಟ್ಟಿಲ್ಲ.

ಮುಖ್ಯಮಂತ್ರಿ ಯಡ್ಡಿ ತಮ್ಮ ಮಗ ...ರಾಘವೇಂದ್ರನನ್ನೇ ಶಿವಮೊಗ್ಗದಿಂದ ಕಣಕ್ಕಿಳಿಸಿದ್ದಾರೆ; ...ಹೀಗಾಗಿ ಸಮರ್ಥ ಅಭ್ಯರ್ಥಿಯನ್ನು ಕಣಕ್ಕಿಳಿಸಿ ...ಯಡ್ಡಿಗೆ ಹೊಡೆತ ನೀಡಬೇಕೆಂಬುದು ಕಾಂಗ್ರೆಸ್ ...ಹೈಕಮಾಂಡ್‌ನ ಚಿಂತನೆ. ರಾಘವೇಂದ್ರನಿಗೆ ...ಸ್ಪರ್ಧಾಪೋಟಿ ನೀಡುವ ಶಕ್ತಿ ಈಗ ಬಂ ...ಅವರಲ್ಲಿದೆಯೇ ಎಂಬ ಅನುಮಾನ ...ಪಕ್ಷದ ನಾಯಕರನ್ನು ಕಾಡುತ್ತಿದೆಯಂತೆ. ...ಹೀಗಾಗಿ ಹೈಕಮಾಂಡ್ ಅವರನ್ನು ...ಪಕ್ಷಕ್ಕೆ ಸೇರಿಸಿಕೊಳ್ಳಲು ಹಿಂದೆ-ಮುಂದೆ ...ನೋಡುತ್ತಿದೆ.



ಒಂದು ವೇಳೆ 'ಬಂ' ಪುತ್ರ, ಮಾಜಿ ...ಶಿವ ಕುಮಾರ್ ಬಂಗಾರಪ್ಪರನ್ನು ...ಗೆಲ್ಲಿಸುವ ಕುರಿತು ಅಂತಿಮ ನಿರ್ಧಾರಕ್ಕೆ ...ಬಂದಲ್ಲಿ, ಬಂ ಅಡ್ಡಗಾಲು ಹಾಕಬಹುದು. ಅದಕ್ಕೆ ...ಕೆಲವು ಷರತ್ತುಗಳನ್ನು ಹಾಕಿಯೇ ಬಂರನ್ನು ...ಪಕ್ಷದೊಳಗೆ ಬಿಟ್ಟುಕೊಳ್ಳಲು ಪಕ್ಷದ ಹೈಕಮಾಂಡ್ ...ನಿರ್ಧರಿಸಿದೆಯಂತೆ.

ಈ ನಡುವೆ "ಈಗ ಬಂ ರಾಜಕೀಯವಾಗಿ ಹೈರಾಣಾಗಿದ್ದಾರೆ. ಅವರ ಆರೋಗ್ಯ ಕೂಡ ಚೆನ್ನಾಗಿಲ್ಲ, ಕ್ಷೇತ್ರ ಬೇರೆ ದೊಡ್ಡದಾಗಿದ್ದು, ಬಂಗೆ ನಿಭಾಯಿಸಲು ಸಾಧ್ಯವಾಗುತ್ತದಾ ಎಂಬುದೇ ದೊಡ್ಡ ಅನುಮಾನವಾಗಿದೆ" ಎಂದು ಕಾಂಗ್ರೆಸ್‌ನ ಎರಡನೇ ಹಂತದ ನಾಯಕರು ಆತಂಕ ವ್ಯಕ್ತಪಡಿಸಲಾರಂಭಿಸಿದ್ದಾರೆ. ಅದಕ್ಕೆ ಸರಿಯಾಗಿ ಚೆಡ್ಡಿಗಳು ಕೂಡ ಬಂರ ಆರೋಗ್ಯ ಸ್ಥಿತಿಯನ್ನೇ ಮುಂದಿಟ್ಟುಕೊಂಡು ರಾಜಕೀಯ ಲಾಭ ಪಡೆದುಕೊಳ್ಳಲು ಹೊರಟಿದ್ದಾರೆ. "ಬಂಗಾರಪ್ಪ ಇನ್ನೇನು ಶೀಟಿ ಹೊಡೆಯುತ್ತಾರೆ. ಅವರನ್ನೇಕೆ ಗೆಲ್ಲಿಸುತ್ತೀರಿ? ಬಂ ಗೆದ್ದರೆ ಬೈ ಎಲೆಕ್ಷನ್ ಗ್ಯಾರಂಟಿ" ಎಂದೆಲ್ಲಾ ಬಿಜೆಪಿ ನಾಯಕರು ಬಹಿರಂಗವಾಗಿಯೇ ಪ್ರಚಾರ ನಡೆಸಿದ್ದಾರೆ.

ಇದನ್ನೆಲ್ಲಾ ಪರಿಗಣಿಸಿರುವ ಎಐಸಿಸಿ ಒಂದು ಹೊಸ ತಂತ್ರವನ್ನು ಹೂಡಿದೆ. ಅದರ ಪ್ರಕಾರ ಬಂರನ್ನು ಪಕ್ಷಕ್ಕೆ ಬರಮಾಡಿಕೊಂಡು ಅವರನ್ನು ರಾಜ್ಯಸಭಾ ಸದಸ್ಯರನ್ನಾಗಿಸುವುದು. ಸದ್ಯಕ್ಕೆ ಯಡ್ಡಿ ಪುತ್ರ ರಾಘವೇಂದ್ರನ ವಿರುದ್ಧ ಕುಮಾರ್ ಬಂಗಾರಪ್ಪಗೆ ಟಿಕೆಟ್ ನೀಡಿ ಕಣಕ್ಕಿಳಿಸುವುದು. ಮುಂದೆ ವಿಧಾನಸಭಾ ಚುನಾವಣೆಯಲ್ಲಿ ಬಂರ ಇನ್ನೋರ್ವ ಪುತ್ರ ಮಧು ಬಂಗಾರಪ್ಪನನ್ನು ಸೊರಬದಲ್ಲಿ ಕಣಕ್ಕಿಳಿಸುವುದು ಎಂಬುದಾಗಿದೆಯಂತೆ. ಈ ಕುರಿತು ಬಂ ಜೊತೆಯಲ್ಲಿಯೂ ಮಾತುಕತೆ ನಡೆಸಲಾಗಿದೆ ಎನ್ನಲಾಗಿದೆ.

ಇದಕ್ಕೆಲ್ಲಾ ಬಂ ಒಪ್ಪಿಗೆ ನೀಡಿದಲ್ಲಿ ಅವರನ್ನು ಪಕ್ಷಕ್ಕೆ ಬರಮಾಡಿಕೊಳ್ಳುವ ಸಾಧ್ಯತೆಗಳಿವೆ. ಇವತ್ತು (ಗುರುವಾರ) ಬಂ ದೆಹಲಿಗೆ ತೆರಳಿದ್ದು, ಪಕ್ಷದ ಹೈಕಮಾಂಡ್ ಜೊತೆ ಮಾತುಕತೆ ನಡೆಸಲಿದ್ದಾರೆ. ಆನಂತರವಷ್ಟೇ ಶಿವಮೊಗ್ಗದ ಕಾಂಗ್ರೆಸ್ ಅಭ್ಯರ್ಥಿ ಅಪ್ಪನೋ-ಮಗನೋ ಎಂಬುದು ಖಚಿತವಾಗಲಿದೆ. ■

ಲಂಕೇಶ್ ಪ್ರಕಾಶನದ ಹೊಸ ಪುಸ್ತಕ



ಈ ನರಕ ಈ ಪುಲಕ

ಪಿ. ಲಂಕೇಶರ ಸಿನಿಮಾ ಬರಹಗಳ ಸಂಕಲನ

ಸಂಗ್ರಹ : ಪಾರ್ವತೀಶ

ರೂ. 125/-


ಪ್ರತಿಗಳಿಗಾಗಿ ಸಂಪರ್ಕಿಸಿ

ಲಂಕೇಶ್ ಪ್ರಕಾಶನ

ನಂ. 9, ಇ.ಎ.ಟಿ. ರಸ್ತೆ, ಬಸವನಗುಡಿ, ಬೆಂಗಳೂರು-4

080-26676427, 9880302817

ಯಡ್ಡಿ ಚೆಡ್ಡಿಗೆ ಮುಚ್ಚಲಾಗದ ತೂತು ಬಿದ್ದವಂತಲ್ಲಾ!



ಸದ್ಯದ ಪರಿಸ್ಥಿತಿಯಿಂದ ಬಳಲುವಾಗುವ ರಾಜಕಾರಣವನ್ನೇ ಮಾಡಿಕೊಂಡು ಬಂದ ಎಡೂರಪ್ಪನ ಚೆಡ್ಡಿಗೆ ಮುಚ್ಚಲಾಗದಷ್ಟು ತೂತುಬಿದ್ದು ಹೋಗಿದೆಯಂತಲ್ಲಾ, ಕುಮಾರಿ ಶೋಭಾ ಕರಂದ್ಲಾಜೆಯವರು ಎಡೂರಪ್ಪನ ತೂತು ಬಿದ್ದ ಚೆಡ್ಡಿಯನ್ನು ನೋಡಿ "ಇದು ನಮ್ಮ ಪಕ್ಷದವರು ಮಾಡಿದ್ದಲ್ಲ, ಕಾಂಗ್ರೆಸ್ಸಿಗರು ಮಾಡಿರುವ ಕೆಲಸ. ಚುನಾವಣೆಯ ಸಮಯದಲ್ಲಿ ಕಾಂಗ್ರೆಸ್ಸಿಗರಿಗೆ ಹೇಳಿಕೊಳ್ಳಲು ಯಾವ ಸಾಧನೆಗಳೂ ಇರಲಿಲ್ಲ, ಅದಕ್ಕಾಗಿ ಹೀಗೆ ಮಾಡಿದ್ದಾರೆ" ಎನ್ನುತ್ತಿದ್ದಾಳಂತಲ್ಲಾ, ಇತ್ತ ಯಡ್ಡಿ ಚೆಡ್ಡಿಯ ಲಾಡಿಗೇ ಕೈಹಾಕಿರುವ ಯತ್ನಾಳ್, "ಬಜೆಪಿ ಪಾರ್ಟಿಯ ಮೂಲ ಚೆಡ್ಡಿಗಳನ್ನು ಕಡೆಗಣಿಸಿ, ಮೊನ್ನೆ ಮೊನ್ನೆ ಪಾರ್ಟಿಗೆ ಬಂದು ಸರಿಯಾಗಿ ಲಾಡಿ ಕಟ್ಟಲು, ದೊಣ್ಣೆ ಹಿಡಿಯಲು ಬಾರದ ಮಂದಿಗೆ ನಿಗಮ ಮಂಡಲಿ ಹಂಚಿಕತ್ತಿಯೇನಲೇ, ಬದ್ಮಾಷ್! ನಾ ಏನು ಮಾಡತೀನಿ ನೋಡು!" ಎಂದು ಬಿಜಾಪುರದ ನಿಜಾಮನ ಗತ್ತಿನಲ್ಲಿ ಗುಟುರು ಹಾಕಿದರಂತಲ್ಲಾ, ಥೂತ್ತೇರಿ!

*****

ಇದ್ದಕ್ಕಿದ್ದಂತೆ ಬಜೆಪಿ ಪಾಳಯದಲ್ಲಿ ಹತ್ತಿಕೊಂಡ ಬೆಂಕಿಯನ್ನು ಆರಿಸಲು ಚೆಡ್ಡಿಗಳು ದಶದಿಕ್ಕಿಗೂ ಎಡತಾಕುತ್ತಿವೆ ಯಂತಲ್ಲಾ, ಅತ್ತ ಮಲ್ಲಿಕಾರ್ಜುನಯ್ಯ, ಇತ್ತ ಬಿ.ಬಿ. ಶಿವಪ್ಪ ಮತ್ತೊಂದತ್ತ ಯತ್ನಾಳ್ ಮನೆಗೆಲ್ಲಾ ಎಡತಾಕುತ್ತಿರುವ ಚೆಡ್ಡಿಗಳು "ಭಾರತಮಾತೆಯ ಭಾಗ್ಯದ ಪುತ್ರ ಅಥ್ವಾಣಿ ಪ್ರಧಾನಿಯಾಗುವವರೆಗಾದರೂ ಸುಮ್ಮನಿರಿ. ಆಗ ನೀವು ಕೇಳಿದ್ದನ್ನು ಕೊಡಿಸುತ್ತೇವೆ. ಬಿ.ಬಿ. ಶಿವಪ್ಪನವರಿಗಂತೂ ಎಡೂರಪ್ಪನಿಗೆ ಸಮನಾದ ಹುದ್ದೆಯನ್ನೇ ಸೃಷ್ಟಿಸಿ ಕೊಡುತ್ತೇವೆ" ಎಂದು ಆಶ್ವಾಸನೆ ಕೊಟ್ಟವಂತಲ್ಲಾ, ಇದರಿಂದ ಸ್ಫೂರ್ತಿಗೊಂಡ ಶಿವಪ್ಪ "ಅಥ್ವಾಣಿಯನ್ನು ಪ್ರಧಾನಿ ಮಾಡಬಲ್ಲಂತ ಲೋಕಸಭಾ ಅಭ್ಯರ್ಥಿ ಗೆಲ್ಲಿಸಲು ಹಗಲುರಾತ್ರಿ ಸಕಲೇಶಪುರದ ಏರಿಯಾದಲ್ಲಿ ಕೆಲಸ ಮಾಡುತ್ತೇನೆ" ಎಂದರಂತಲ್ಲಾ, ಥೂತ್ತೇರಿ!

*****

ಅಷ್ಟಕ್ಕೂ ಭಿನ್ನಮತೀಯ ಚೆಡ್ಡಿಗಳ ಡಿಮ್ಯಾಂಡೇನು ಎಂದು ಎಡೂರಪ್ಪ ತಮ್ಮ ಹಿಂಬಾಲಕರ ಮೂಲಕ ಕೇಳಿಸಲಾಗಿ, ಬಂಡಾಯದ ಚೆಡ್ಡಿಗಳ ಡಿಮ್ಯಾಂಡು ಯಡ್ಡಿ ಬಡ್ಡೆಗೆ ನೀರು ಬಿಡುವಂತಿದೆಯಂತಲ್ಲಾ, "ಮೊಟ್ಟ ಮೊದಲನೆಯದಾಗಿ ಮಗನಿಗೆ ಕೊಟ್ಟ ಟಿಕೆಟ್ ವಾಪಸು ಪಡೆಯಬೇಕು ಮತ್ತು ಮಗ ನಿಲ್ಲುವುದಿಲ್ಲ ಎಂದು ಮಾಡಿರುವ ಪ್ರಮಾಣವನ್ನು ಹಿಂತೆಗೆಯಬೇಕು. ಅನ್ಯಪಾರ್ಟಿಯಿಂದ ಬಂದವರಿಗೆ ಕೊಟ್ಟ ನಿಗಮದ ಕುರ್ಚಿ ಕಸಿದು ನಮ್ಮವರಿಗೆ ಕೊಡಬೇಕು. ಶೋಭಾ ಕರಂದ್ಲಾಜೆ ಮಾತಿಗೆ ಮತ್ತು ನಗುವಿಗೆ ಕಡಿವಾಣ ಹಾಕಬೇಕು" ಎಂದು ಹಾಕಿರುವ ಶರತ್ತಿಗೆ ಯಡ್ಡಿ ಚೆಡ್ಡಿಯಲ್ಲಿ ಬೆಂಕಿ ಹೊತ್ತಿಕೊಂಡು, ಕೋಡೀಮಠಕ್ಕೂ ಹೋಗದೆ, ಕೇಶವಕೃಪಕ್ಕೂ ಹೋಗದೆ ಶೋಭಾ ಕರಂದ್ಲಾಜೆಯನ್ನು ಹುಡುಕಿದರಂತಲ್ಲಾ, ಚೆಡ್ಡಿಗಳ ಇಂತಹ ಕಿತ್ತಾಟ ಗಮನಿಸಿದ ಕೋಡೀಮಠದ ಸ್ವಾಮಿಗಳು "ಎಡೂರಪ್ಪನ ಕಾಲ ಹತ್ತಿರ ಬರುತ್ತಿದೆ" ಎಂದು ಭವಿಷ್ಯ ಹೇಳಿದರಂತಲ್ಲಾ, ಈ ಹೇಳಿಕೆಯುಂಟು ಮಾಡುವ ಅನಾಹುತವನ್ನು ಗ್ರಹಿಸಿದ ಅನಂತ ಚೆಡ್ಡಿಗಳು, ಶಾನೆ ಹುರುಪಿನಿಂದ ಓಡಾಡುತ್ತ ಇರಲಾಗಿ, ಇನ್ನೂ ಹುರುಪಿನಿಂದ ಚೆಡ್ಡಿ ಪತ್ರಕರ್ತರು ಇನ್ನೇನು ಅನಂತಯುಗ ಬಂದೇಬಿಟ್ಟಿತು ಎನ್ನುವಂತೆ ತೀರಾ ಒಳನೋಟದ ವರದಿ ಕೆರೆಯುತ್ತ ಕುಳಿತಿವೆಯಂತಲ್ಲಾ, ಥೂತ್ತೇರಿ!

ಥೂತ್ತೇರಿ ▸ಯಾಹೂ

*****

ಘಟಾನುಘಟಿ ತರುಡು ಫುಂಟಿನ ನಾಯಕರೆಲ್ಲಾ ಸ್ವರ್ಗವಾಸಿಗಳಾದ ಮೇಲೆ ಅಳಿದುಳಿದ ಪುಡಿ ರಾಜಕಾರಣಿಗಳನ್ನು ದಾಬಸ್‌ಪೇಟೆಗೆ ಕರೆದು ಸಭೆ ಮಾಡಿದ ದೇವೇಗೌಡರು ಅಕಸ್ಮಾತ್ ಕೇಂದ್ರದಲ್ಲಿ ಕೆಲವೊತ್ತು ಕುರ್ಚಿ ಖಾಲಿ ಬಿದ್ದಿದ್ದರೆ ಕೂತಿದ್ದು ಬರುವ ಕನಸು ಕಾಣುತ್ತಿದ್ದಾರಂತಲ್ಲಾ, ಇತ್ತ ಮನೆಯಲ್ಲಿ ಭವಾನಿ ಎಂಬ ಸೊಸೆ ನಿಜಕ್ಕೂ ಭವಾನಿಯೇ ಆಗಿ "ಮರಿಯಾದಿಯಾಗಿ ನನಗೊಂದು ಕ್ಷೇತ್ರ ಹುಡುಕಿ ಗೆಲ್ಲಿಸಿ ಕೊಡದಿದ್ದರೆ ದೇವೇಗೌಡರ ತಲೆಯ ಮೇಲೆ ಹಾಲೂದು ಮನೆಬಿಟ್ಟು ಹೋಗುತ್ತೇನೆ" ಎಂದಳಂತಲ್ಲಾ, ಇದರಿಂದ ಕಂಗಾಲಾದ ಚೆನ್ನವ್ವ "ಅಂಗ್ಯಾಕಂದಿ ತಗಿಮಗ, ನನ್ನ ನಾದ್ನಿ ಮಗ ನನ್ನ ಮ್ಯಾಲೆ ಹೂದ ಆಸಿಡ್ಡಗಾಯ ವಾಸಿ ಮಾಡಿಕಳದೇ ಈಟು ದಿನಾಯ್ತು, ಇನ್ನು ಅವಯ್ಯನಿಗೆ ಹಾಲೂದು ಏನು ಮಾಡ್ತಿ ನೀನು?" ಎಂದರಂತಲ್ಲಾ, ಥೂತ್ತೇರಿ!

*****

ಇದ್ದಕ್ಕಿದ್ದಂತೆ ಅಲ್ಲಲ್ಲಿ ಒಕ್ಕಲಿಗರ ಸಭೆ ನಡೆದು ಎಡೂರಪ್ಪನ ಬಗ್ಗೆ ಕಿಡಿಕಾರಿದವಂತಲ್ಲಾ, "ನಮ್ಮ ಜನಾಂಗವನ್ನು ಈ ಸರ್ಕಾರ ಕಡೆಗಣಿಸಿದೆ. ನಮಗೆ ಬೇಕಿರುವ ಸಬ್ ಇನ್ಸ್‌ಪೆಕ್ಟರನ್ನು ಹಾಕಿಕೊಡುತ್ತಿಲ್ಲ, ನಮ್ಮ ಮಾತು ಕೇಳುವ ತಹಸೀಲ್ದಾರನನ್ನು ಹಾಕುತ್ತಿಲ್ಲಾ. ಹಾಗೇ ನೋಡುತ್ತಿದ್ದರೆ, ಈ ಸರ್ಕಾರವೇ ನಮ್ಮದಲ್ಲ ಎನ್ನುವ ಭಾವನೆ ನಮಗೆ ಬರುತ್ತಿದೆ" ಎಂಬ ಕೂಗನ್ನು ಎಡೂರಪ್ಪನಿಗೆ ಮುಟ್ಟಿಸಿದರಂತಲ್ಲಾ. ಅದಕ್ಕೆ ಎಡೂರಪ್ಪ "ಅವರ ಅಭಿಪ್ರಾಯ ಸಹಜವಾದದ್ದೆ, ಅಷ್ಟಕ್ಕೂ ಈ ಜನ ನನಿಗೆ ಓಟು ಮಾಡಿದ್ದಾರೆ? ಕುಮಾರಸ್ವಾಮಿಗೆ ಓಟು ಮಾಡಿದ್ರಿಂದ ಅವರ ಅಹವಾಲನ್ನು ಅವ್ರಿಗೇ ಹೇಳಿಕಳೋದು ಒಳ್ಳೆದು" ಎಂದರಂತಲ್ಲಾ, ಥೂತ್ತೇರಿ!

*****

ಅಪ್ಪ ಬಂಗಾರಿಯ ಕತೆ ರಂಜಕವಾಗಿದೆಯಂತಲ್ಲಾ, ರಾಮಚಂದ್ರಾಪುರದ ಮಠದಲ್ಲಿ ಕೆಲಸಕ್ಕೆ ಬಾರದ ದನ ಸಾಕಿಕೊಂಡು ಸರ್ಕಾರದ ಕಾಸು ನೆಕ್ಕುತ್ತ ಕುಳಿತಿರುವ ರಾಘವೇಶ್ವರನನ್ನು ಹಿಗ್ಗಾಮುಗ್ಗಾ ಆಡಿಕೊಂಡಿರುವ 'ಬಂ' "ಎರಡು ಗೊಡ್ಡೆಮ್ಮೆ, ಮೂರು ಮುದಿ ಹಸ ಬಿಟ್ರೆ ಅವ್ರುನತ್ರ ಯಾವ ಓಟು ಇಲ್ಲ" ಎಂದರಂತಲ್ಲಾ, ಇದರಿಂದ ಬಲರಾಮನ ಆಕಳಿನಂತಹ ವಿಪ್ರರ ಕೋಪಕ್ಕೆ ತುತ್ತಾಗಿದ್ದಾರಲ್ಲಾ, ಥೂತ್ತೇರಿ!

*****

ಭಯೋತ್ಪಾದನೆ ವಿರೋಧಿ ಚಳವಳಿ ಮಾಡಿದ ಚೆಡ್ಡಿಗಳು "ಉಷಾರು, ಭಯೋತ್ಪಾದಕ ನಿಮ್ಮ ಹಿಂದೆಯೇ ಇರಬಹುದು" ಎಂಬ ಸ್ಲೋಗನ್ ಪ್ರಚಾರ ಮಾಡುತ್ತಿರುವಂತೆಯೇ ಇದನ್ನು ಕೇಳಿಸಿಕೊಂಡ ಮಂಗಳೂರು ಕಡೆ ಸಾಬರ ಹುಡುಗರು "ಹುಷಾರು, ನಿಮ್ಮ ಹಿಂದೆ ಚೆಡ್ಡಿಯಿದ್ದಾನು" ಎಂಬ ಸ್ಲೋಗನ್ ಜಾರಿ ಮಾಡಿದರಂತಲ್ಲಾ, ಥೂತ್ತೇರಿ!! ■

ಆದಿಚುಂಚನಗಿರಿಯಲ್ಲಿ ಅಮಾಯಕರ ಗೋಳು

ಬಾಲಗಂಗಾಧರ ಸ್ವಾಮಿಗಿದು ಶೋಭೆಯೆ?



ಆದಿಚುಂಚನಗಿರಿ ಮಠದ ಬಾಲಗಂಗಾಧರನಾಥ ಸ್ವಾಮಿ ಈಗ ಡೆತ್‌ಬೆಡ್‌ನಲ್ಲಿದ್ದಾರೆ. ಬದುಕಿರುವಷ್ಟು ದಿನ ಅದೇನು ಸಮಾಜ ಉದ್ಧಾರ ಮಾಡಿದ್ದಾರೋ ನಮಗಂತೂ ಗೊತ್ತಿಲ್ಲ. ಇನ್ನೇನು ದಿನ ಎಣಿಸುತ್ತಿರುವ ಈ ಕಡೆಗಳಿಗೆಯಲ್ಲಾದರೂ ಒಂದಿಷ್ಟು ಒಳ್ಳೇ ಕೆಲಸಗಳನ್ನು ಮಾಡುತ್ತಾರೆ ಎಂದು ಜನ ಕಾದಿದ್ದರು. ಈಗ ಅದೂ ಸುಳ್ಳಾಗಿದೆ. ಚುಂಚನಗಿರಿ ಮಠದಲ್ಲಿ ಪುಕ್ಕಟೆ ಉಂಡು, ತೇಗಿ ಕೊಬ್ಬಿರುವ ಗೂಂಡಾಗಳು ಬಡಬಗ್ಗರನ್ನು ಹೀರಿ ಹಿಪ್ಪೆ ಮಾಡುತ್ತಿರುವುದನ್ನು ನಿಲ್ಲಿಸಿಲ್ಲ; ಅದೆಲ್ಲವನ್ನು ಕಣ್ಣಾರೆ ನೋಡುತ್ತಿದ್ದರೂ ಸ್ವಾಮಿಗಳು ಮಾತ್ರ ಮೌನಿಯಾಗಿ ಅನ್ಯಾಯಕ್ಕೆ ಬೆಂಬಲವಾಗಿ ನಿಂತಿದ್ದಾರೆ. ಆದಿಚುಂಚನಗಿರಿ ಮಠ ಅದೆಷ್ಟು ಬಡಜೀವಗಳನ್ನು ಹಿಂಡಿ ಕೊಬ್ಬಿಹೋಗಿದೆ ಎಂಬುದಕ್ಕೆ ಒಂದು ಉದಾಹರಣೆಯನ್ನು ನೋಡಿ.


ಕಳೆದವಾರ ಆದಿಚುಂಚನಗಿರಿ ಭೈರವನ ರಥೋತ್ಸವ ನಡೆಯಿತು. ಪ್ರತಿವರ್ಷ ಬರುವ ಭಕ್ತಾದಿಗಳಿಗಿಂತ ಎರಡು ಪಟ್ಟು ಜನ ನಾಡಿನ ಮೂಲೆಮೂಲೆಯಿಂದ ಬಂದು ಜಮಾಯಿಸಿದ್ದರು. ಪ್ರಾಯಶಃ ಮುಂದಿನ ವರ್ಷ ಸ್ವಾಮಿ ಬದುಕಿರುತ್ತಾರೋ ಇಲ್ಲವೋ ಎಂಬ ಅನುಮಾನದಿಂದ ಈ ಬಾರಿಯೇ ಕೊನೆಯದಾಗಿ ನೋಡಿಕೊಂಡು ಬರೋಣ ಎಂದು ಅಷ್ಟೊಂದು ಸಂಖ್ಯೆಯಲ್ಲಿ ಜನ ಬಂದದ್ದಿರಬೇಕು. ಜನಸ್ತೋಮವನ್ನು ನೋಡಿದಷ್ಟೂ ಖುಷಿಗೊಳ್ಳುವ ಬಾಲಗಂಗಾಧರನಾಥ ಸ್ವಾಮಿಗಳು ಬಹಳ ಉಲ್ಲಾಸಭರಿತರಾಗಿಯೇನೋ ಇದ್ದರು. ಆದರೆ, ಆರೋಗ್ಯ ಮಾತ್ರ ಕೈಕೊಟ್ಟಿತ್ತು. ಆದರೂ ಮಂದಸ್ಮಿತರಾಗಿ ಕಾಣಿಸಿಕೊಳ್ಳಲು ಅವರು ಮಾಡುತ್ತಿದ್ದ ಹರಸಾಹಸ ಅವರ ಮುಖದಲ್ಲೇ ಎದ್ದು ಕಾಣುತ್ತಿತ್ತು. ಇದು ಚುಂಚನಗಿರಿ ಮಠದ ಒಂದು ಮುಖ.

ಅದೇ ಸಮಯದಲ್ಲಿ ಇತ್ತ ಬೆಟ್ಟದ ತಪ್ಪಲಿನಲ್ಲೊಂದು ಅನಾಥ ಕುಟುಂಬ ಬಾಲಗಂಗಾಧರರ ಜೆಸಿಬಿ ಯಂತ್ರ ಬಂದು ಯಾವ ಸಮಯದಲ್ಲಿ ತಮ್ಮ ಮನೆ ನೆಲಸಮ ಮಾಡುತ್ತದೋ ಎಂದು ಆತಂಕದಿಂದ ಅಕ್ಷರಶಃ ಬೀದಿಗೆ ಬಿದ್ದವರಂತೆ ಗೋಳಾಡುತ್ತಿತ್ತು. ಇದು ಮಠದ ಇನ್ನೊಂದು ಮುಖ. ಆದಿಚುಂಚನಗಿರಿ ಮಠ ಈ ಹೊತ್ತು ಇಷ್ಟೊಂದು ದೊಡ್ಡ ಮಟ್ಟಕ್ಕೆ ಬೆಳೆದಿದೆಯೆಂದರೆ ಅದಕ್ಕೆ ಎಷ್ಟು ಅಮಾಯಕರ ಜೀವಗಳು ಬಲಿಯಾಗಿವೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕೆಂದರೆ ಈ ಅನಾಥ ಕುಟುಂಬದ ಕತೆಯನ್ನು ಕೇಳಲೇಬೇಕು.


ಹಾಸನದ ರಂಗಮ್ಮ ಮತ್ತು ನಂಜುಂಡಯ್ಯ ಎಂಬ ದಂಪತಿಗಳು ಹೂ ಕಟ್ಟುವ ಕಲೆಗಾರಿಕೆಯಲ್ಲಿ ಹೆಸರು ಮಾಡಿದ್ದರು. ಇವರು ಹೂವಿನಹಾರಗಳನ್ನು ಕಟ್ಟುವ ಕಲಾತ್ಮಕತೆ ಮೈಸೂರು ಅರಸು ಮನೆತನಕ್ಕೂ ತಲುಪಿ, ಅವರಿಂದ ಪುರಸ್ಕೃತಗೊಂಡ ದಾಖಲೆಯೂ ಇದೆ. ಈ ಹೂಗಾರಿಕೆಯಿಂದಲೇ ಹಣ ಮತ್ತು ಒಡವೆ ಸಂಪಾದಿಸಿದ ಈ ದಂಪತಿಗಳ ಕೊನೆಯ ಆಸೆಯೆಂದರೆ ಆದಿಚುಂಚನಗಿರಿ ಬೆಟ್ಟದ ತಪ್ಪಲಿನಲ್ಲಿ ಸಮಾಧಿಯಾಗುವುದು. ಆ ಕಾಲದಲ್ಲಿ ವಸ್ತುಶಃ ಭೈರವನ ಮಸಣದಂತೆಯೇ ಕಾಣುತ್ತಿದ್ದ ಚುಂಚನಗಿರಿ ಬೆಟ್ಟದ ತಪ್ಪಲಲ್ಲಿ ಯಾರಾದರೂ ಬಂದು ನೆಲೆಸಲು ಯಾರ ಅಡ್ಡಿಯೂ ಇರಲಿಲ್ಲ. ಆದರೂ ದಂಪತಿಗಳು ಮಠಕ್ಕೆ ಹೋಗಿ ತಮ್ಮಲ್ಲಿದ್ದ ಒಡವೆ, ಹಣವನ್ನು ಮಠಕ್ಕೆ ಕೊಟ್ಟು ತಮ್ಮ ಬದುಕು ಮತ್ತು ಸತ್ತ ನಂತರದ ಸಮಾಧಿಗಾಗಿ ಒಂದಿಷ್ಟು ಜಾಗ ಪಡೆದರು. ಅದೇ ಅವರ ಪೀಳಿಗೆಗಿಂದು ಮುಳುವಾಗಿ ನಿಂತಿದೆ.

ಆ ದಂಪತಿಗಳು ಮಠದಿಂದ ಕೊಂಡುಕೊಂಡಿದ್ದ ಜಾಗ ಈಗ ರಥ ನಿಲ್ಲಿಸುವ ಜಾಗದ ಪಕ್ಕದಲ್ಲಿದೆ. ನಂಜುಂಡಯ್ಯ ತೀರಿಕೊಂಡ ನಂತರ ಆತನ ಇಚ್ಛೆಯಂತೆ ಅದೇ ಜಾಗದಲ್ಲಿ ಸಮಾಧಿ ಮಾಡಲಾಯಿತು. ತನ್ನ ಗಂಡ ಅವನ ಇಚ್ಛೆಯಂತೆ ಭೈರವನ ಸನ್ನಿಧಿಯಲ್ಲಿ ಬಂದು ಮಲಗಿದ್ದನ್ನ ಕಂಡ ರಂಗಜ್ಜಿ ಧನ್ಯತೆಯಿಂದ ದಿನ ದೂಡುತ್ತಿರಬೇಕಾದರೆ, ಇದ್ದಕ್ಕಿದ್ದಂತೆ ಒಂದು ದಿನ ಮಠದವರು ನಂಜುಂಡಯ್ಯನ ಸಮಾಧಿಯನ್ನು ನಾಶ ಮಾಡಿ ಚಪ್ಪಡಿ ಎಳೆದರು. ರಂಗಜ್ಜಿ ಅಸಹಾಯಕತೆಯಿಂದ ಏನೂ ಮಾಡಲಾಗದೆ ಸಹಿಸಿಕೊಂಡು ಸುಮ್ಮನಾದಳು. ನಂತರ ಬದುಕಿನ ನಿರ್ವಹಣೆ ಕಷ್ಟವಾದಾಗ 1976ರ ಏಪ್ರಿಲ್ ತಿಂಗಳಲ್ಲಿ ಮಠದಿಂದ ಹತ್ತು ಸಾವಿರ ಸಾಲ ಪಡೆದು ಮನೆಯನ್ನು ಮಠಕ್ಕೆ ಕ್ರಯ ಮಾಡಿದಳು. ಹತ್ತು ಸಾವಿರ ಮರಳಿ ಕೊಟ್ಟಾಗ ಮನೆ ವಾಪಸ್ಸು ಮಾಡುವಂತಹ ನಂಬಿಕೆಯ ಕ್ರಯ ಅದು. ಈ ನಡುವೆ ರಂಗಜ್ಜಿ ಲಕ್ಷ್ಮಿರಂಗನಾಥನೆಂಬ ದತ್ತು ಮಗನನ್ನು ಸಾಕಿದ್ದಳು. ಆ ಮಗನಿಗೊಂದು ನೆಲೆಯಿರಲೆಂಬ ಕಾರಣಕ್ಕೆ ಪುನಃ ಹತ್ತು ಸಾವಿರ ಜೋಡಿಸಿಕೊಂಡು ಹೋಗಿ ಮಠಕ್ಕೆ ಕೊಟ್ಟು ಮನೆಯನ್ನು ವಾಪಸು ಬಿಟ್ಟುಕೊಡಿ ಎಂದು ಕೇಳಿದಳು. ಆದರೆ, ಕಂಡವರ ಜಮೀನನ್ನು ನುಂಗುವ ಕಲೆಯನ್ನಾಗಲೇ ಮಠ ಸಿದ್ಧಿಸಿಕೊಂಡಿದ್ದರಿಂದ ರಂಗಜ್ಜಿಯ ನಂಬಿಕೆ ಕ್ರಯವನ್ನೇ ಸಕ್ರಮ ಮಾಡಿಕೊಂಡು ಮಠ ಕಟ್ಟುವ ಪುಣ್ಯ ಕೆಲಸವನ್ನು ಪ್ರಾರಂಭಿಸಿಬಿಟ್ಟಿತ್ತು. ರಂಗಜ್ಜಿಗೆ ಮನೆ ವಾಪಸ್ಸು ಸಿಗಲಿಲ್ಲ. ಆದರೂ ಮೂಲ ಹಕ್ಕು, ಸ್ವಾಧೀನ ಪತ್ರವೆಲ್ಲಾ ತನ್ನಲ್ಲೇ ಉಳಿದಿದ್ದರಿಂದ ಆಕೆಯೂ ಹೆಚ್ಚು ತಲೆಕೆಡಿಸಿಕೊಳ್ಳದೆ ಒಂದು ದಿನ ತೀರಿಹೋದರು. ತಮ್ಮ ದುಡಿಮೆಯ ಧನಕನಕ ವಸ್ತುಗಳನ್ನೆಲ್ಲಾ ಮಠಕ್ಕೆ ದಾನ ಮಾಡಿ ಆ ಪ್ರಾಂತ್ಯದ ಎಲ್ಲರಿಗೂ ಬೇಕಾಗಿ ಬದುಕಿದ್ದ ರಂಗಜ್ಜಿಗೆ ಅಲ್ಲಾರೂ ಕಳ್ಳು-ಬಳ್ಳಿಗಳಿಲ್ಲದಿದ್ದರೂ ಎಲ್ಲರೂ ಆಕೆಯನ್ನು ಮಹಾಮಾತೆಯಾಗಿ ಗೌರವಿಸಿದ್ದರು. ಇಂಥವಳ ಸಾವಿಗೆ ಖುದ್ದು ಸ್ವಾಮಿಯೇ ಬರುತ್ತಾರೆಂದು ಜನ ನಿರೀಕ್ಷಿಸಿ ಸ್ವಾಮಿಯನ್ನು ಕರೆದುಬಂದರೂ ಅವರು ಬರಲಿಲ್ಲ. ಮಾತ್ರವಲ್ಲ, ಆಕೆ ಮತ್ತು ಅವಳ ಗಂಡನ ಕೋರಿಕೆಯಂತೆ ಹಿಂದೆ ನಿಗದಿ ಮಾಡಿಕೊಂಡಿದ್ದ ಜಾಗದಲ್ಲಿ ಶವಸಂಸ್ಕಾರ ಮಾಡುವುದಕ್ಕೂ ಮಠದವರು ಅವಕಾಶ ಕೊಡಲಿಲ್ಲ. ರಂಗವ್ವನಿಗಾಗುತ್ತಿರುವ ಅನ್ಯಾಯವನ್ನು ಕಣ್ಣಾರೆ ಕಂಡ ಜನ ಮಠದ ವಿರುದ್ಧ ರೊಚ್ಚಿಗೆದ್ದು ಆಕೆಯ ಗಂಡನ ಸಮಾಧಿ ಪಕ್ಕದಲ್ಲೇ ಸಂಸ್ಕಾರ ಮಾಡಿದರು. ವಾಸ್ತವದಲ್ಲಿ ಇದು ಆ ಭಾಗದ ಜನಕ್ಕೆ ಮಠದ ಬಗ್ಗೆಯಿರುವ ಅಸಹನೆಯನ್ನು ಸೂಚಿಸುವ ಒಂದು ಸಣ್ಣ ಉದಾಹರಣೆಯಾಗಿತ್ತು.

ಆದರೆ ನಂತರದ ದಿನಗಳಲ್ಲಿ ಮಠದವರು ರಂಗಜ್ಜಿಯ ಸಮಾಧಿಯನ್ನೂ ಬುಲ್ಡೋಜರ್ ಕಳಿಸಿ ನಾಶ ಮಾಡಿದರು; ಆ ಜಾಗವನ್ನು ಖಾತೆ ಮಾಡಿಸಿಕೊಂಡರು. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ನಂಜುಂಡಯ್ಯ ಮತ್ತು ರಂಗಜ್ಜಿ ತಮ್ಮ ಜೀವಮಾನವಿಡೀ ಬೆವರು, ರಕ್ತ ಹರಿಸಿ ದುಡಿದು ಕೂಡಿಟ್ಟ ಹಣ, ಒಡವೆ, ಭೂಮಿ – ಎಲ್ಲವನ್ನೂ ಆದಿಚುಂಚನಗಿರಿ ಮಠ ನುಂಗಿ ನೀರು ಕುಡಿದು ತೇಗಿತು.



1998ರಲ್ಲಿ ಡೆಮಾಲಿಷ್ ಆದ ಮನೆ......



ಸ್ವಾಮಿಗಳ ಬುಲ್ಡೋಜರ್‌ಗೆ ಕಾದಿರುವ ಮನೆ....

ರಂಗಜ್ಜಿ ನೆಲವನ್ನು ಅನ್ಯಾಯಯುತವಾಗಿ ಮಠದವರು ಖಾತೆ ಮಾಡಿಸಿಕೊಂಡ ಕ್ರಮವನ್ನು ಪ್ರಶ್ನಿಸಿ ಆಕೆಯ ಸಾಕುಮಗ ಲಕ್ಷ್ಮಿರಂಗನಾಥ್ 1998ರಲ್ಲಿ ತಾಲ್ಲೂಕು ಪಂಚಾಯತಿಯಲ್ಲಿ ಅಪೀಲು ಹೋದರು. ತಾಲ್ಲೂಕು ಪಂಚಾಯತಿ ಜನರನ್ನು ನೋಡಿದರೆ ಯಾರಿಗಾದರೂ ನ್ಯಾಯ ದೊರಕಿಸಿಕೊಡುವವರಂತೆ ಕಾಣುತ್ತಾರೆಯೇ? ಅವರೆಲ್ಲಾ ಮಠದ ಕ್ರಮವನ್ನೇ ಎತ್ತಿಹಿಡಿದರು. ನಂತರ ಲಕ್ಷ್ಮಿರಂಗನಾಥ್ ಜಿಲ್ಲಾ ಪಂಚಾಯತಿಯ ಮೊರೆಹೋದರು. ಜಿಲ್ಲಾ ಪಂಚಾಯತಿಯವರು ಆಮೂಲಾಗ್ರವಾಗಿ ಎಲ್ಲವನ್ನು ವಿಶ್ಲೇಷಿಸಿ ಮಠದ ಕ್ರಮವನ್ನು ತಪ್ಪೆಂದು ಪರಿಗಣಿಸಿ, ಸದರಿ ಜಾಗವನ್ನು ಲಕ್ಷ್ಮಿರಂಗನಾಥರ ಹೆಸರಿಗೆ ಮಾಡಿಕೊಡಬೇಕೆಂದು ಸ್ಪಷ್ಟ ಆದೇಶ ನೀಡಿದರು. ಆದರೂ ಲಕ್ಷ್ಮಿರಂಗನಾಥರ ಹೆಸರಿಗೆ ನಿವೇಶನದ ಜಾ[...] ಸಿಗಲಿಲ್ಲ. ಬದಲಿಗೆ ಮಠೋಪಜೀವಿಗಳಿಂದ ಹಾಗೂ ಪಂಚಾಯತಿಯಿಂದ ಕಿರುಕುಳ ಆರಂಭವಾಯಿತು. ಆದ್ದರಿಂದ ಲಕ್ಷ್ಮಿರಂಗನಾಥ ಹೈಕೋರ್ಟ್‌ಗೆ ಹೋದರು. (ರಿಟ್ ಪಿಟಿಷನ್ 184/99) ಈ ಸಮಸ್ಯೆ ಸಿವಿಲ್ ಸ್ವರೂಪದಾದ್ದರಿಂದ ಸದರಿ ಅರ್ಜಿದಾರ ಅಲ್ಲಿ ವಾಸವಿರುವುದರಿಂದ ಸ್ಥಳೀಯವಾಗಿ ಸಮಸ್ಯೆ ಬಗೆಹರಿಸಿಕೊಳ್ಳಲು ಹೈಕೋರ್ಟ್ ಆದೇಶ ಇತ್ತಿತ್ತು. ಇಂತಹ ಆದೇಶಗಳು ಸಾಮಾನ್ಯವಾಗಿ ಮಠದ ಅಮಾನುಷ ಮಾನದಂಡಗಳಿಗೆ ಸಹಾಯಕವಾಗುತ್ತವೆ. ಅದರಂತೆ ಮಠದ ರಕ್ಷ[...] ರಾಮಕೃಷ್ಣೇಗೌಡ, ಶಾಸಕ, ಸರ್ಕಲ್ ಇನ್ಸ್‌ಪೆಕ್ಟರ್‌ಗಳು ಲಕ್ಷ್ಮಿರಂಗನಾಥನನ್ನು ಮಠಕ್ಕೆ ಕರೆಸಿಕೊಂಡರು; ತಮಗೆ ಬೇಕಾದಂತೆ ಬರೆಸಿಕೊಂಡ ಪತ್ರಕ್ಕೆ ಬಲವಂತವಾಗಿ ಸಹಿ ಪಡೆದರು. ಇದನ್ನೆಲ್ಲಾ ನೋಡುತ್ತಿದ್ದ ಲಕ್ಷ್ಮಿರಂಗನಾಥ[...] ಮಗ ಈ ಅಕ್ರಮ ಕೂಟದವರಿಗೆ ಸರಿಯಾಗಿ ಕ್ಯಾಕರಿ[...] ಉಗಿದು ಎದ್ದುಬಂದ.

ಸದರಿ ನಿವೇಶನ ಜಾಗ 1976ರಲ್ಲಿ ಕ್ರಯವಿದ್ದರೂ ಈವರೆವಿಗೂ ವಾಸವಿರುವ ಪ್ರಯುಕ್ತ ಅವರೇ ಹಕ್ಕುದಾರರಾಗುತ್ತಾರೆ. ಒಬ್ಬ ವ್ಯ[...] ಅಕ್ರಮಿತ ಜಾಗದಲ್ಲಿ 12 ವರ್ಷ[...] ವಾಸವಿದ್ದರೇ ಅವನದೇ ಆಗುತ್ತದೆ. ಆದರೂ ಕಳೆದ 30 ವರ್ಷಗಳಿಂದ ಇದ್ದವರನ್ನು ಒಕ್ಕಲೆಬ್ಬಿಸಲು ಈ[...] ಮಠದ ಸ್ವಾಮಿ ನಡೆಸಿರುವ ಕ್ರೌರ್ಯ[...] ಇಲ್ಲಿನ ಒಕ್ಕಲು ಮಕ್ಕಳಲ್ಲಿ ಮಠದ ಮೇಲಿನ ಅಭಿಮಾನವನ್ನೇ ಹಾಳು ಮಾಡಿದೆ. ಸದರಿ ಜಾಗಕ್ಕೆ 5 ಲಕ್ಷ[...] ಬೆಲೆ ನಿಗದಿ ಮಾಡಿರುವ ಮಠದವರು, ಪತ್ರದಲ್ಲಿ ಡಿ.ಡಿ. ನಂಬರ್ ಕೂಡ ನಮೂದಿಸಿದ್ದಾರೆ. ಆದರೆ ಡಿ.ಡಿ. ಮಾತ್ರ ಇಲ್ಲ. ಕಳೆದ 7ರಂದು ಈ[...] ಬಗ್ಗೆ ಬಾಲಗಂಗಾಧರಸ್ವಾಮಿಯನ್ನು ಕಂಡು ಮಾತನಾಡಲು ಹೋದಾಗ ಸ್ವಾಮಿಗಳು ಬಹಳ ತಣ್ಣನೆಯ ದನಿಯಲ್ಲಿ ಮನೆ ಖಾಲಿ ಮಾಡಿಹೋಗಲು ಹೇಳಿದ್ದಾರೆ. ಆಗ ಸ್ವಾಮಿಗಳ ಕೈಕಾಲು ಬಾತುಕೊಂಡು ಕತ್ತು ತಿರುಗಿಸಲೂ ಆಗುತ್ತಿರಲಿಲ್ಲ. ಆದರೂ ಮನೆ ಕೆಡವಿ ಆ ಜಾಗದಲ್ಲಿ ಸರ್ಕಲ್ ಮಾಡಿ 4 ಕೋಟಿ ರೂ.ಗಳ ರ[...] ಮಾಡಲು ಹೊರಟಿದ್ದಾರೆ. ಅಲ್ಲೇನು ರಸ್ತೆ ಮಾಡುವ ಅವಶ್ಯಕತೆಯೇ ಇಲ್ಲ. ಇವರ ಹಠಕ್ಕೆ ತುತ್ತಾಗಿ ಈಗ ಸುಸ್ಥಿತಿಯಲ್ಲಿರುವ ರಸ್ತೆಯೇ ನಾಶವಾಗುವ ಅಪಾಯದಲ್ಲಿದೆ. ಮಠದ ಹಠ, ಜೆಡಿಎಸ್‌ನ ಕಾಂಟ್ರಾಕ್ಟರ್‌ಗಳಿಗೆ ದುಡ್ಡಿನ ಆಶೆ, ಸ್ವಾಮಿಗೆ ಅಭಿವೃದ್ಧಿ ಮಾಡಿಸಿದೆ ಎಂಬ ಹಮ್ಮು – ಎಲ್ಲಾ ಸೇರಿಕೊಂಡು ಒಂದು ಅಮಾಯಕ ಕುಟುಂಬವನ್ನು ಬೀದಿ ಪಾಲು ಮಾಡಲು ಹೊರಟಿದ್ದಾರೆ.

ಮಠದವರು ಪತ್ರ ತಯಾರಿಸಿ, ಲಕ್ಷ್ಮಿರಂಗನಾಥರಿಂದ ಬಲವಂತವಾಗಿ ಸಹಿ ಪಡೆದ ಪತ್ರದಲ್ಲಿ 'ನಾವು ಯಾವುದೇ ಕೋರ್ಟ್, ಕಚೇರಿಯಲ್ಲಿ ದಾವೆ ಹೂಡಿಲ್ಲ. ಹೂಡಿದ್ದರೆ ವಾಪಸ್ಸು ತೆಗೆದುಕೊಳ್ಳುತ್ತೇವೆ. ಮಠದ ಆಸ್ತಿ ಎಂದು ಗೊತ್ತಿರದೆ ನಾವೇ ಅನಧಿಕೃತವಾಗಿ ಅಲ್ಲಿ ವಾಸವಾಗಿದ್ದೆವು. ಈಗ ತೆರವು ಮಾಡುತ್ತೇವೆ' ಎಂದೆಲ್ಲಾ ಹಸಿಹಸಿ ಸುಳ್ಳು ಬರೆದಿದ್ದಾರೆ. ನ್ಯಾಯ, ನೀತಿ, ಧರ್ಮಗಳ ಬಗ್ಗೆ ಪುಂಖಾನುಪುಂಖವಾಗಿ ಬೋಧನೆ ಮಾಡುವ ಬಾಲಗಂಗಾಧರನಾಥರು ಬರೆದ ಅನ್ಯಾಯ, ಅನೀತಿ, ಅಧರ್ಮಗಳ ಪತ್ರ ಇದು.

ಇದು ಆದಿಚುಂಚನಗಿರಿ ಮಠದ ಅನ್ಯಾಯ ಸಮುದ್ರದ ಒಂದು ಸಣ್ಣ ಹನಿ. ಮಠದ ಒಂದೊಂದು ಕಲ್ಲಿನ ಕಂಬಗಳು ಇಂತಹ ಅನ್ಯಾಯದ ಅನೇಕ ಕತೆಗಳನ್ನು ಹೇಳುತ್ತವೆ. ತೆವರೆಕಟ್ಟೆಯ ಬಳಿಯ ಜಮೀನು, ಸಸ್ಯಕಾಶಿ ಇರುವ ಜಾಗದ ಜಮೀನುಗಳು ವಾಸ್ತವದಲ್ಲಿ ಹರಿಜನರದ್ದು. ಮಠ ಅವರನ್ನೆಲ್ಲಾ ಒದ್ದೋಡಿಸಿ ತನ್ನ ವಶಕ್ಕೆ ತೆಗೆದುಕೊಂಡಿದೆ. ಬಿ.ಜೆ.ಎಸ್ ವೃತ್ತಿ ತರಬೇತಿ ಕೇಂದ್ರ, ಬಿ.ಜಿ.ನಗರದ ಗುರುದರ್ಶನ್ ಹೋಟೆಲ್, ಬೆಳ್ಳೂರು ಕಾಂಪ್ಲೆಕ್ಸ್–ಹೀ[...] ಒಕ್ಕಲು ಮಕ್ಕಳ ಅಸ್ಥಿಯ ಮೇಲೆ ಎದ್ದು ನಿಂತ ಈ[...] ಕಟ್ಟಡಗಳು ಭೈರವನ ಬೆಟ್ಟಕ್ಕೆ ಕಳಂಕ ತಂದಿವೆ.

ಇಷ್ಟೊಂದು ಅನ್ಯಾಯ, ಅಕ್ರಮಗಳನ್ನು ಮಾ[...] ಮಠಕಟ್ಟಿದ್ದಾದರೂ ಯಾವ ಪುರುಷಾರ್ಥಕ್ಕೆ? ಇದು ಜನರ ಪ್ರಶ್ನೆ. ಇದಕ್ಕೆ ಬಾಲಗಂಗಾಧರರು ಉತ್ತರಿಸುತ್ತಾರೆಯೆ[...]

● ವರದಿಗಾ[...]

ಗೌರಿ ಲಂಕೇಶ್

ನಮ್ಮ ಓದುಗ ಮತ್ತು ಏಜೆಂಟ್ ಮಿತ್ರರಿಗೆ ತಿಳಿಸುವುದೇನೆಂದರೆ, ಇನ್ನು ಮುಂದೆ 'ಲಂಕೇಶ್' ವಾರಪತ್ರಿಕೆಯು ಬೆಂಗಳೂರು ಮತ್ತು ಸುತ್ತಮುತ್ತ ಏರಿಯಾಗಳಲ್ಲಿ ಶುಕ್ರವಾರವೇ ಮಾರುಕಟ್ಟೆ ತಲುಪುತ್ತದೆ. ಹಾಗೆಯೇ ಇತರೆ ಪ್ರದೇಶಗಳಲ್ಲಿ ಶನಿವಾರ ಲಭ್ಯವಿರುತ್ತದೆ.

ಈ ಹೊಸ ಯೋಜನೆ ಪ್ರಕಾರ ಈ ಸಂಚಿಕೆ ಮಾರ್ಚ್ 13ರಂದು ಬೆಂಗಳೂರಿನಲ್ಲಿ ಸಿಗುತ್ತದೆ. ಆದಾದ ನಂತರ ಪ್ರತಿ ಶುಕ್ರವಾರ ನಮ್ಮ ನಿಮ್ಮ ಭೇಟಿ.


ದಯವಿಟ್ಟು ಸಹಕರಿಸಬೇಕೆಂದು ಕೋರಿಕೆ. –ಸಂ

ಓದುಗರ, ಏಜೆಂಟರ ಗಮನಕ್ಕೆ

ಶುಕ್ರವಾರವೇ ಮಾರುಕಟ್ಟೆಯಲ್ಲಿ

ಭಾಷ್ಯಂಸ್ವಾಮಿ ಉರ್ಫ್ ಎನ್. ವೆಂಕಟಾಚಾರ್ ಎಂಬಾತ ಗಂಧದ ಮರ ಕದ್ದು ಸಾಗಿಸುತ್ತಾನೆ. ಭ್ರಷ್ಟ ಅಧಿಕಾರಿಗಳಿಗೆ ಲಂಚ ...ಸುತ್ತಾನೆ. ಕಳ್ಳ ಲೆಕ್ಕ ಬರೆದು ಸರ್ಕಾರಿ ಬೊಕ್ಕಸ ದೋಚಿದ್ದಾನೆ. ಸರ್ಕಾರಿ ವಾಹನಗಳ ಪೆಟ್ರೋಲು, ಡೀಸೆಲ್ ಕದ್ದು ...ರಿಕೊಳ್ಳುವುದರಲ್ಲೂ ಈತ ನಿಸ್ಸೀಮ! ಇಂಥವನ ಕಾಲಿಗೆ ಬಿದ್ದು ಆಶೀರ್ವಾದ ಪಡೆದು 'ಧನ್ಯೋಸ್ಮಿ' ಎಂದ ಮುಖ್ಯಮಂತ್ರಿಗೆ ...ದ್ಧಿ ಮಂಕೋ ಅಥವಾ ಚಿತ್ತಕಪಟವೋ ಗೊತ್ತಾಗುತ್ತಿಲ್ಲ.

...ಳ್ಳನ ಕಾಲಿಗೆ ಬಿದ್ದ ಮುಖ್ಯಮಂತ್ರಿ



ಮೇಲುಕೋಟೆಯ ಸೈತಾನ್ ಭಾಷ್ಯಂಸ್ವಾಮಿ



...ಮದುವೆಯಾಗಿದ್ದಾನೆ. ಮಕ್ಕಳ ಮೇಲೆ ಮಕ್ಕಳನ್ನು ...ತ್ತಲೇ ಇದ್ದಾನೆ. ಸಾಲದ್ದಕ್ಕೆ ಗಂಧದ ಮರ ಕದ್ದು ...ತ್ತಾನೆ. ಭ್ರಷ್ಟ ಅಧಿಕಾರಿಗಳಿಗೆ ಲಂಚ ತಿನ್ನಿಸುತ್ತಾನೆ. ...ಕ್ಕ ಬರೆದು ಸರ್ಕಾರಿ ಬೊಕ್ಕಸ ದೋಚಿದ್ದಾನೆ. ... ವಾಹನಗಳ ಪೆಟ್ರೋಲು, ಡೀಸೆಲ್ ಕದ್ದು ಮಾರಿ ...ವುದರಲ್ಲೂ ಈತ ನಿಸ್ಸೀಮ!

...ಂಥವನ ಕಾಲಿಗೆ ಬಿದ್ದು ಆಶೀರ್ವಾದ ಪಡೆದು '...ಸ್ಮಿ' ಎಂದ ಮುಖ್ಯಮಂತ್ರಿಗೆ ಬುದ್ಧಿ ಮಂಕೋ ... ಚಿತ್ತಕಪಟವೋ ಗೊತ್ತಾಗುತ್ತಿಲ್ಲ. ಇತ್ತೀಚೆಗಷ್ಟೇ ...ಾ ಸಮೇತರಾಗಿ ಮೇಲುಕೋಟೆಗೆ ಭೇಟಿ ಕೊಟ್ಟು ... ಮಹಾನ್ ವಂಚಕ ಭಾಷ್ಯಂಸ್ವಾಮಿ ಎಂಬಾತನ ... ಬಿದ್ದ ಮುಖ್ಯಮಂತ್ರಿ ಯಡಿಯೂರಪ್ಪನ ಕಣ್ಣಿಗೆ ... ಪೊರೆ ಬಂದಿದ್ದಂತೂ ಗ್ಯಾರಂಟಿಯಾಗಿತ್ತು.

... ಭಾಷ್ಯಂಸ್ವಾಮಿ ಉರ್ಫ್ ಎನ್. ವೆಂಕಟಾಚಾರ್ ...ತನ ಬಗ್ಗೆ ಮೈಸೂರು, ಮಂಡ್ಯ ಅಥವಾ ...ಕೋಟೆಯ ಯಾರೇ ಬುದ್ಧಿ ನೆಟ್ಟಗಿರುವಾತನನ್ನು ...ದೂ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ತನ್ನ ...ರ್ತನದ ಅರಿವಾಗುತ್ತಿತ್ತು. ಕೆಲ ವರ್ಷಗಳ ಹಿಂದೆ ...ರಿನ ಖ್ಯಾತ ವಕೀಲರೊಬ್ಬರ ಮಗಳ ಜೊತೆ ...ಡಿ ಮಾಡಿಕೊಂಡ ಇದೇ ಭಾಷ್ಯಂಸ್ವಾಮಿ ಮೈಸೂರಿನ ...ಬ್ಬ ವಂಚಕ ಗಣಪತಿ ಸಚ್ಚಿದಾನಂದನಿಗೆ ಪೈಪೋಟಿ ...ಯ ಹೋಗಿ ಸನ್ಯಾಸಿ ಎನ್ನಿಸಿಕೊಂಡವನು.


...ಂಥವನನ್ನು ಮೇಲುಕೋಟೆಯ 'ಸಂಸ್ಕೃತ ...ಧನಾ ಸಂಸತ್' ಎಂಬ ಪ್ರತಿಷ್ಠಿತ ಸಂಸ್ಥೆಗೆ ನಿರ್ದೇಶಕ ... ಮಾಡಿದ್ದೂ ಅಲ್ಲದೇ ಸರ್ಕಾರಿ ಬೊಕ್ಕಸದ ಐದು ... ರೂಪಾಯಿಗಳನ್ನೂ ಮಂಜೂರು ಮಾಡಿದ ಯಡ್ಡಿ ... ಪಿಶಾಚಿಗಳಷ್ಟೇ 'ತಥಾಸ್ತು' ಎಂದಿರಬೇಕು!

...ನ್ನಡಿಗರಿಗೆ ಮೇಲುಕೋಟೆಯೂ ಗೊತ್ತು, ಅಲ್ಲಿನ ...ನಾರಾಯಣಸ್ವಾಮಿಯೂ ಗೊತ್ತು. ರಾಮಾನುಜಾ...ರ ವಿಶಿಷ್ಟಾದ್ವೈತ ಸಿದ್ಧಾಂತದ ಹುತ್ತವಾದ ಈ ...ಕೋಟೆಯ ಅಯ್ಯಂಗಾರ್‌ಗಳ ಪೈಕಿ ಸದ್ಯದ ಮಟ್ಟಿಗೆ ... ನಿರ್ಲಜ್ಜ ಮತ್ತು ಪಾಖಂಡಿ ಬುದ್ಧಿಯವನಾದ ...ಭಾಷ್ಯಂಸ್ವಾಮಿ ಅದೇ ಮೇಲುಕೋಟೆಯಲ್ಲಿರುವ ... ಸಂಶೋಧನಾ ಸಂಸತ್‌ಗೆ ನಿರ್ದೇಶಕನಾಗಲು ...ದ ಷಡ್ಯಂತ್ರ, ವಾಮಾಚಾರ ಮತ್ತು ದುರಾಚಾರದ ...ಯಾಗಲೇಬೇಕಿದೆ. ಅಕಾಡೆಮಿ ಆಫ್ ಸ್ಯಾನ್‌ಸ್ಕ್ರಿಟ್ ...ರ್ಚ್ ಎಂಬುದು ದೇಶದ ಪ್ರತಿಷ್ಠಿತ ಸಂಸ್ಕೃತ ...ೋಧನಾ ಕೇಂದ್ರಗಳಲ್ಲೊಂದು ಎಂಬ ಬಗ್ಗೆ ಎರಡು ...ಲಕ್ಷ್ಮಿ ತಾತಾಚಾರ್ ಎಂಬ ಪ್ರಾಮಾಣಿಕ ವಿದ್ವಾನ್ ... ಇದನ್ನು ಕಟ್ಟಿ ಬೆಳೆಸಿದ್ದಾರೆ. ಮಾಜಿ ರಾಷ್ಟ್ರಪತಿ ... ಕಲಾಂರಿಂದ ಹಿಡಿದು ಮಾಜಿ ಚುನಾವಣಾ ...ನರ್ ಟಿ.ಎನ್. ಶೇಷನ್ ತನಕ ಈ ಸಂಸ್ಥೆಯ ...ಕರೇ. ಸಂಸ್ಕೃತದ ಪೋಷಣೆಗೆಂದೇ ಕೇಂದ್ರ ಸರ್ಕಾರ ...ರ್ಷ ಒಂದು ಕೋಟಿಯಷ್ಟು ಅನುದಾನ ಕೊಡುತ್ತದೆ. ... ರಾಜ್ಯ ಸರ್ಕಾರವೂ ಅಷ್ಟೇ ಮೊತ್ತದ ಸಹಾಯ ...ತ್ತದೆ.

...ಂಥ ಸಂಸ್ಥೆಯ ನಿರ್ದೇಶಕ ಹುದ್ದೆಗೆ ಸಂಸ್ಕೃತ ಎಂ.ಎ. ...ರಬೇಕೆಂಬುದು ಅಧಿಕೃತ ಕಾಯ್ದೆ. ಹುದ್ದೆಯ ...ತಿಗೆಂದೇ ಪತ್ರಿಕೆಗಳಿಗೆ ಜಾಹೀರಾತು ಕೊಡಬೇಕು. ...ಕ ನಡೆಸಬೇಕು. ಅದಕ್ಕೆಂದೇ ಆಯ್ಕೆ ಸಮಿತಿ ...ೇಕು. ಇತ್ಯಾದಿ ಏನೇನೋ ನಿಯಮಾವಳಿಗಳಿವೆ. ...ವುದೇ ಕಾಯ್ದೆ ಕಾನೂನನ್ನೂ ಲೆಕ್ಕಿಸದೆ ಈ ... ವಕ್ಕರಿಸಿದವನು ಭಾಷ್ಯಂಸ್ವಾಮಿ!

...ಸೂರಿನ ವಿಜಯನಗರದಲ್ಲಿ ತನ್ನದೇ ಯೋಗಾನರಸಿಂಹಸ್ವಾಮಿ ದೇವಸ್ಥಾನವನ್ನು ಕಟ್ಟಿಸಿಕೊಂಡು ಅಲ್ಲಿಗೆ ಬರುವ ಭಕ್ತಾದಿಗಳನ್ನು ಯಾಮಾರಿಸಿಕೊಂಡಿದ್ದ ಎನ್. ವೆಂಕಟಾಚಾರ್ ಕ್ರಮೇಣ ಭಾಷ್ಯಂಸ್ವಾಮಿಯಾದ ಕತೆಯೇ ವಿಚಿತ್ರ. 2004 ರ ತನಕ ಮೈಸೂರಿನ ಮಹಾರಾಜಾ ಸಂಸ್ಕೃತ ಪಾಠಶಾಲೆಯಲ್ಲಿ ವೇದಪಂಡಿತನಾಗಿ ಕೆಲಸ ಮಾಡಿಕೊಂಡಿದ್ದ ವೆಂಕಟಾಚಾರ್ ಮೂಲತಃ ಮಂಡ್ಯದ ಪಾಂಡವಪುರ ತಾಲ್ಲೂಕು ಮೇಲುಕೋಟೆಯವನು. ಈತನ ತಮ್ಮನ ಹೆಸರು ತಿರುಮಲೈ. ಈತ ಪಾಂಡವಪುರದ ಜೆಡಿಎಸ್ ಶಾಸಕ ಪುಟ್ಟೇಗೌಡರ ಪಕ್ಕಾ ಬಂಟ. ಮೇಲುಕೋಟೆಯ ಗ್ರಾಮ ಪಂಚಾಯ್ತಿ ಸದಸ್ಯನಾಗಿದ್ದ ತಿರುಮಲೈ ಪ್ರತಿ ಚುನಾವಣೆಯಲ್ಲೂ ತಪ್ಪದೇ ಹೆಂಡ-ಸಾರಾಯಿ ಹಂಚುತ್ತಾನೆ.

ಇಂಥ ಘಾಟಿ ತಮ್ಮನನ್ನು ಮುಂದಿಟ್ಟುಕೊಂಡೇ ಆಗಿದ್ದ ಮುಖ್ಯಮಂತ್ರಿ ಕುಮಾರಸ್ವಾಮಿ ಮತ್ತವರ ಅಣ್ಣ ರೇವಣ್ಣನ ತಲೆ ತಿಕ್ಕಿದ ವೆಂಕಟಾಚಾರ್ ಆ ಹೊತ್ತಿಗಾಗಲೇ ತನ್ನ ವೆಂಕಟಾಚಾರ್ ಎಂಬ ಹೆಸರನ್ನು ಬದಲಿಸಿ ಭಾಷ್ಯಂ ಸ್ವಾಮಿ ಎಂಬ ಸೋಗು ಹಾಕಲಾರಂಭಿಸಿದ್ದ. ಮೈಸೂರಿನ ಮಹಾರಾಜಾ ಸಂಸ್ಕೃತ ಪಾಠಶಾಲೆಯಲ್ಲಿ ಸರ್ಕಾರಿ ಸಂಬಳಕ್ಕಿದ್ದೂ ವಿಜಯನಗರದಲ್ಲಿ ಯೋಗಾನರಸಿಂಹಸ್ವಾಮಿ ದೇವಸ್ಥಾನ ಕಟ್ಟಿಸಿ ಅಲ್ಲಿ ಶಾಸ್ತ್ರ ಜ್ಯೋತಿಷ್ಯ, ಮಾಟ ಇತ್ಯಾದಿ ಶುರುಹಚ್ಚಿಕೊಂಡಿದ್ದ. ಬಿಟ್ಟ ಗಡ್ಡ, ಸಂಸ್ಕೃತ ಮಂತ್ರ ಮತ್ತು ಹಾಕಿದ ವೇಷ ಕಂಡೇ ಬುಟ್ಟಿಗೆ ಬಿದ್ದ ಕುಮಾರಸ್ವಾಮಿ ಮೇಲುಕೋಟೆಗೆ ಬಂದು ಭಾಷ್ಯಂ ಸ್ವಾಮಿಯ ಕಾಲಿಗೆ ಬಿದ್ದಿದ್ದೇ ಬಂತು. ಆತನಕ ಸಾಂಗವಾಗಿ ನಡೆಯುತ್ತಿದ್ದ ಸಂಸ್ಕೃತ ಸಂಶೋಧನಾ ಸಂಸ್ಥೆಗೆ ಹೊಸ ನಿರ್ದೇಶಕನಾಗಿ ಭಾಷ್ಯಂಸ್ವಾಮಿ ಅವತರಿಸಿದ್ದ. ಹಿಂದಿದ್ದ ನಿರ್ದೇಶಕರಿಗೆ ಸಣ್ಣದೊಂದು ನೋಟೀಸ್ ಕೂಡ ನೀಡದೆ ರಾತ್ರೋರಾತ್ರಿ ನಿರ್ದೇಶಕ ಹುದ್ದೆಗೆ ಬಂದ ಭಾಷ್ಯಂಸ್ವಾಮಿ ಅದಕ್ಕೆಂದು ಆಗ ಮಂಡ್ಯ ಜಿಲ್ಲಾಧಿಕಾರಿಯಾಗಿದ್ದ ಸಿ.ಎನ್. ಸೀತಾರಾಮ್‌ಗೆ ದೊಡ್ಡ ಮೊತ್ತದ ಗಂಟನ್ನೇ ಕೊಟ್ಟಿದ್ದ!



ಯಾರದೋ ಶ್ರಮಕ್ಕೆ ತನ್ನ ಹೆಸರು

ತಾನು ಸಂಸ್ಕೃತ ಎಂ.ಎ. ಮುಗಿಸಿದ್ದೇನೆಂದು ಕಳ್ಳ ದಾಖಲೆಗಳನ್ನು ಕೊಟ್ಟು ನಿರ್ದೇಶಕ ಹುದ್ದೆಗೆ ವಕ್ಕರಿಸಿದ ಭಾಷ್ಯಂ ಕ್ರಮೇಣ ತಾನು ಎಂ.ಎ.ಗೆ ತತ್ಸಮಾನವಾದ ಮೂರು ಪರೀಕ್ಷೆಗಳನ್ನು ಮುಗಿಸಿದ್ದೆ ನೆಂದು ರೈಲು ಬಿಡಲಾರಂಭಿಸಿದ್ದ. ಅಲ್ಲಿಗೆ ಭಾಷ್ಯಂ ಸುಳ್ಳು ದಾಖಲೆ ಕೊಟ್ಟು ನಿರ್ದೇಶಕ ಸ್ಥಾನಕ್ಕೆ ವಕ್ಕರಿಸಿದ್ದು ಗ್ಯಾರಂಟಿಯಾಗಿತ್ತು. ಈ ಬಗ್ಗೆ ಮೇಲುಕೋಟೆಯಿಂದಷ್ಟೇ ಅಲ್ಲ ಮೈಸೂರು, ಮಂಡ್ಯಗಳಿಂದಲೂ ದೂರುಗಳು ಬಂದವು.

ಆದರೆ ಜಿಲ್ಲಾಧಿಕಾರಿ ಸೀತಾರಾಮ್ ರಕ್ಷೆಯಿತ್ತಿಲ್ಲ. ತಮಾಷೆಯೆಂದರೆ ನೆಟ್ಟಗೆ ಎಂ.ಎ. ಪದವಿಯನ್ನೇ ಪಡೆಯದ ಭಾಷ್ಯಂ ತಾನು ಪಿಎಚ್‌ಡಿ ಮತ್ತು ಡಿಲಿಟ್ ಪದವಿ ಪಡೆದಿದ್ದೇನೆಂದು ಮತ್ತಷ್ಟು ನಕಲಿ ದಾಖಲೆ ಸೃಷ್ಟಿಸಿಕೊಟ್ಟಿದ್ದ. ಹಾಗೇ ಹಿಂಬಾಗಿಲಿನಿಂದ ವಕ್ಕರಿಸಿದ ಭಾಷ್ಯಂ ಮಾಡಿದ ಮೊದಲ ಕೆಲಸವೆಂದರೆ ತಪ್ಪದೇ ಒಂದಷ್ಟು ಮಂದಿ ಕುಲಬಾಂಧವರನ್ನು ಕರೆತಂದು ಸಂಸ್ಕೃತ ಅಕಾಡೆಮಿಗೆ ನೇಮಿಸಿದ್ದು. ನೇಮಕಾತಿ ನಿಯಮಾವಳಿಯೂ ಇಲ್ಲ, ಮೀಸಲಾತಿ ಲೆಕ್ಕಕ್ಕಿಲ್ಲ.

ಈಗ ಮಠಮಾನ್ಯಗಳಿಗೆ ಕೊಟ್ಟ ಸರ್ಕಾರಿ ಸಹಾಯದ ಲೆಕ್ಕದ ಐದು ಕೋಟಿಯನ್ನು ಹೊರತುಪಡಿಸಿ ಕಳೆದ ಮೂರೂವರೆ ವರ್ಷದಿಂದ ಮೇಲುಕೋಟೆಯ ಸಂಸ್ಕೃತ ಅಕಾಡೆಮಿಗೆ ಬಂದ ಮೂರು ಕೋಟಿಯ ರೊಕ್ಕ ವಿಶ್ವಾಯಿತು, ಎಲ್ಲಿಗೆ ಹೋಯಿತೆಂಬುದೇ ಗೊತ್ತಿಲ್ಲ. ಈಗಾಗಲೇ ಮೈಸೂರು ಸಂಸ್ಕೃತ ಪಾಠಶಾಲೆಯ ವೇದಪಂಡಿತ ಹುದ್ದೆಗೆ ಹೆಚ್ಚುವರಿಯಾಗಿ ಅಧಿಕ ಪ್ರಭಾರದ ಮೇಲೆ ಗಿಟ್ಟಿಸಿದ ನಿರ್ದೇಶಕ ಹುದ್ದೆಗೆ ವಾರಕ್ಕೆ ಮೂರು ದಿನವಷ್ಟೇ ಬರಲು ಸರ್ಕಾರದಿಂದ ಆದೇಶ ಮಾಡಿಸಿಕೊಂಡ ಭಾಷ್ಯಂ ಹೆಚ್ಚುಕಾಲ ಕಳೆಯುತ್ತಿರುವುದು ತನ್ನ ಮೈಸೂರಿನ ಯೋಗಾನಾರಾಯಣ ದೇವಸ್ಥಾನದಲ್ಲಿ.

ಮಿಕ್ಕಂತೆ ಅಕಾಡೆಮಿಯ ವಾಹನವನ್ನು ತನ್ನ ಸ್ವಂತಕ್ಕೆ ಬಳಸುತ್ತಾನೆ. ಸಂಸ್ಕೃತ ಅಕಾಡೆಮಿಗೆ ತಾನೇ ನೇಮಿಸಿಕೊಂಡವರನ್ನು ತನ್ನ ಮೈಸೂರಿನ ದೇವಸ್ಥಾನದ ಚಾಕರಿಗೆ ಬಿಟ್ಟಿದ್ದಾನೆ. ಹಿಂದಿದ್ದ ನಿರ್ದೇಶಕರ ಕಾಲದಲ್ಲಿ ಸರಿಸುಮಾರು 30 ಸಂಸ್ಕೃತ ಕೃತಿಗಳನ್ನು ಮುದ್ರಿಸಲಾಗಿತ್ತು. ಇವೆಲ್ಲ ವೈಜ್ಞಾನಿಕ ಕೃತಿಗಳು. ಜೊತೆಗೆ ಉಗ್ರಾಣದಲ್ಲಿ ಅನೇಕ ಹಳೇ ಸಂಸ್ಕೃತ ಗ್ರಂಥಗಳಿವೆ. ಇಲ್ಲಿನ ಗ್ರಂಥಾಲಯವೊಂದರಲ್ಲೇ 25,000 ಕ್ಕೂ ಅಧಿಕ ಗ್ರಂಥಗಳೂ ಹತ್ತು ಸಾವಿರಕ್ಕೂ ಅಧಿಕ ತಾಳೆಪತ್ರಗಳ ನಿಧಿಯಿದೆ.

ಆದರೆ ಇದೆಲ್ಲವನ್ನೂ ಕಾಯುವವರು ಖದೀಮ ಭಾಷ್ಯಂನ ದುರುಳ ಶಿಷ್ಯೋತ್ತಮರೇ. ಈ ಪೈಕಿ ಉಪಕುಲಸಚಿವ ಎಂ.ಡಿ. ರಂಗರಾಜನ್ ಮಹಾನ್ ಪಾಖಂಡಿ. ಮತ್ತೊಬ್ಬ ಕುಲಸಚಿವ ಬಿ.ಎಸ್. ಕೃಷ್ಣಪ್ರಸಾದ್ ಹುಟ್ಟಾ ವಂಚಕ. ಫೈನಾನ್ಶಿಯಲ್ ಅಡ್ವೈಸರ್ ಕುಮಾರ್ ಮತ್ತು ಜಯತೀರ್ಥ ಎಂಬಿಬ್ಬರೂ ಪಕ್ಕಾ ತಿಂಡಿಪೋತರು.

ವಾಮಾಚಾರಿ ಭಾಷ್ಯಂಸ್ವಾಮಿ ಉರ್ಫ್ ವೆಂಕಟಾಚಾರ್‌ನಂಥ ಕಪಟಿಯೇ ಮೇಲುಕೋಟೆಯ ಸಂಸ್ಕೃತ ಅಕಾಡೆಮಿಗೆ ಅಧ್ಯಕ್ಷನಾಗುತ್ತಾನೆಂದರೆ ಇನ್ನು ಆತನ ಶಿಷ್ಯರು ಹೇಗೆ ಸುಮ್ಮನಿರಲು ಸಾಧ್ಯ? ಸದ್ಯ ಉಗ್ರಾಣದಲ್ಲಿರುವ ಅಮೂಲ್ಯ ಗ್ರಂಥಗಳು ಮತ್ತು ತಾಳೆ ಪತ್ರಗಳನ್ನು ಕದ್ದು ಮಾರಿಕೊಳ್ಳುವುದೇ ಇಂಥ ಭಾಷ್ಯಂ ಶಿಷ್ಯರ ಪಾರ್ಟ್‌ಟೈಂ ದಂಧೆ!


ಮತ್ತೊಂದೆಡೆ ಹಿಂದಿದ್ದ ನಿರ್ದೇಶಕರು ಮಾಡಿಟ್ಟ ಸಂಶೋಧನಾ ಕೃತಿಗಳನ್ನೇ ಕದ್ದು ಅದನ್ನು ತಾನೇ ಮಾಡಿದ ಸಂಶೋಧನೆ ಎಂದು ಭಾಷ್ಯಂ ಕತೆ ಕಟ್ಟುತ್ತಾನೆ. ಇಂಥ ಹತ್ತು ಕೃತಿಗಳನ್ನು ಕದ್ದು ಅದಕ್ಕೆ ತನ್ನ ಹೆಸರು ಅಚ್ಚು ಹಾಕಿಸಿದ್ದಾನೆ. ಇಂಥ ಕಳ್ಳಾಟಗಳಿಗೆ ಅನುವಾಗಲೆಂದು ಒಂದಷ್ಟು ಮಂದಿ ತನ್ನ ಚೇಲಾಗಳನ್ನೇ ಸಂಸ್ಕೃತ ಅಕಾಡೆಮಿಗೆ ನೇಮಿಸಿಕೊಂಡಿದ್ದಾನೆ. ಈ ಪೈಕಿ ಶ್ರೀರಂಗ ಶೆಲ್ವನಾರಾಯಣ ಆಡಳಿತ ಸಮಿತಿ ಸದಸ್ಯ ಮತ್ತು ಆಂತರಿಕ ಲೆಕ್ಕ ಪರಿಶೋಧಕ. ಅಕಾಡೆಮಿಗೆ ಮುಂಡಾ ಮೋಚಿದ್ದರಲ್ಲಿ ಈತನ ಪಾತ್ರವೇ ಹೆಚ್ಚು. ಈತನ ತಮ್ಮ ಆನಂದಾಳ್ವಾರ್ ಎಂಬ ಅಯ್ಯಂಗಾರಿಗೆ ಕಿರಿಯ ಸಂಶೋಧಕ ಹುದ್ದೆ. ಈತನ ಸೋದರಳಿಯ ರಾಮಾನುಜ ಕೂಡ ಮತ್ತೊಬ್ಬ ಅಧಿಕಾರಿ. ಈತನ ಮತ್ತೊಬ್ಬ ನೆಂಟ ಕೃಷ್ಣಯ್ಯಂಗಾರ್ ಕೂಡ ಇಲ್ಲಿ ಸಂಶೋಧಕನಂತೆ!

ಕುಲಸಚಿವ ಎಸ್. ಕುಮಾರ್‌ನ ಮಗ ಸಂಪತ್, ಸಂಬಂಧಿಗಳಾದ ಮುಕುಂದ, ರಂಗಪ್ರಿಯ, ಮೈಸೂರಿನ ಸಂಸ್ಕೃತ ಪಾಠಶಾಲೆಯ ನಿವೃತ್ತ ಪ್ರಿನ್ಸಿಪಾಲ್ ವೆಂಕಟಾಚಾರ್ಯ, ಕರಣಿಕ್, ಡಾ. ಪ್ರಭಾಕರ್ ಆಪ್ಟೆ ಮುಂತಾದ ನೆಂಟರಿಷ್ಟರನ್ನೆಲ್ಲ ಸಂಶೋಧಕರಾಗಿ ನೇಮಕ ಮಾಡಿಕೊಂಡು ಅವರ ಹೆಸರಲ್ಲಿ ಸಂಬಳ ನುಂಗುತ್ತಾನೆ ಭಾಷ್ಯಂಸ್ವಾಮಿ. ಸಂಸ್ಥೆಯ ಒಂದು ಅಂಬಾಸಿಡರ್ ಮತ್ತೊಂದು ಬೊಲೆರೋ ಗಾಡಿಗಳನ್ನು ಮೈಸೂರಿನ ತನ್ನ ದೇವಸ್ಥಾನದ ಚಾಕರಿಗೆ ಬಿಟ್ಟಿದ್ದಾನೆ. ಮತ್ತೊಂದು ಕಾರನ್ನು ಬೆಂಗಳೂರಿನಲ್ಲಿ ಓದುತ್ತಿರುವ ತನ್ನ ಮಗನ ಚಾಕರಿಗೆ ಬಿಟ್ಟಿದ್ದಾನೆ. ಅದರ ಡ್ರೈವರ್ ನಾಗರಾಜ ಎಂಬಾತ ಸಂಬಳ ಪಡೆಯುವುದು ಸರ್ಕಾರಿ ದುಡ್ಡಲ್ಲೇ. ಖದೀಮ ಭಾಷ್ಯಂ ಮತ್ತು ಕುಲಸಚಿವ ಕೃಷ್ಣಪ್ರಸಾದ್ ಇಬ್ಬರೂ ಪ್ರತಿವರ್ಷ ಒಂದು ಲಕ್ಷದಂತೆ ಪ್ರಯಾಣಭತ್ಯೆ ನುಂಗಿದ್ದಾರೆ. ಓರ್ವ ಜಿಲ್ಲಾಧಿಕಾರಿಯೇ ಇಷ್ಟು ಪ್ರಯಾಣ ಭತ್ಯೆ ಪಡೆಯುವುದಿಲ್ಲ. ಇಂಥ ಅನೇಕ ದುರಾಚಾರಗಳ ಹುತ್ತದಂತಿರುವ ಮೇಲುಕೋಟೆಯ ಸಂಸ್ಕೃತ ಅಕಾಡೆಮಿಗೆ ಭಾಷ್ಯಂಸ್ವಾಮಿಯಂಥ ಪಟಾಯಿತನನ್ನು ತಂದಿದ್ದೂ ಸಾಲದೇ ಮತ್ತೆ ಐದು ಕೋಟಿ ಮಂಜೂರು ಮಾಡಿದ ಮುಖ್ಯಮಂತ್ರಿ ಯಡ್ಡಿಗೆ ಹುಚ್ಚು ಹಿಡಿದಿಲ್ಲ ತಾನೆ?

● ರಾ. ಸೋಮನಾಥ್

ಅಣ್ಣ ನೆಲಕದ್ದ ತಮ್ಮ ಮರಕದ್ದ

ಏಕಕಾಲದಲ್ಲಿ ಥರೇವಾರಿ ವಂಚಕ ಕಸುಬಿಗೆ ಕೈಯಿಟ್ಟ ಭಾಷ್ಯಂಸ್ವಾಮಿ ಮೈಸೂರಿನ ಮಹಾರಾಜ ಸಂಸ್ಕೃತ ಪಾಠಶಾಲೆಯ ವೇದ ಪಂಡಿತನಾದರೂ ತನ್ನ ಹೆಚ್ಚು ಕಾಲವನ್ನು ವಿಜಯನಗರದ ಯೋಗಾನಾರಾಯಣ ದೇವಸ್ಥಾನದಲ್ಲೇ ಕಳೆಯುತ್ತಾನೆ. ಅದೇ ಆತನ ಕರ್ಮಸ್ಥಾನ. ಈಗ ಮೇಲುಕೋಟೆಯ ಸಂಸ್ಕೃತ ಅಕಾಡೆಮಿಗೆ ಆತ ನಿರ್ದೇಶಕನಾಗಿರುವುದು ಆತನಿಗೆ ಸಂಸ್ಕೃತದ ಮೇಲಿರುವ ಪಾಂಡಿತ್ಯದಿಂದಾಗಲಿ ಅಕ್ಕರೆಯಿಂದಾಗಲಿ ಅಲ್ಲ.



ಮೇಲುಕೋಟೆಯ ಸಂಸ್ಕೃತ ಅಕಾಡೆಮಿ...

ಅದು ಅಕಾಡೆಮಿಗೆ ವರ್ಷಂಪ್ರತಿ ಹರಿದುಬರುವ ಒಂದು ಕೋಟಿಯ ಅನುದಾನದ ಮೇಲಿನ ಆತನ ದುರಾಶೆ. ಇಲ್ಲಿಗೆ ಆರು ತಿಂಗಳ ಹಿಂದಷ್ಟೇ ಶೋಭಾ ಸಮೇತರಾಗಿ ಮೈಸೂರಿನ ಆತನ ಯೋಗಾನಾರಾಯಣ ದೇವಸ್ಥಾನಕ್ಕೆ ಭೇಟಿ ಕೊಟ್ಟು ಕಾಲಿಗೆ ಬಿದ್ದ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಅದೇನು ಮಂಕುಬೂದಿ ಎರಚಿದನೋ ಎಲ್ಲ ಮಠಮಾನ್ಯಗಳ ಸಾಲಿಗೆ ಇದನ್ನೂ ಸೇರಿಸಿ ಐದು ಕೋಟಿ ಕೊಟ್ಟ ಯಡ್ಡಿಗೆ ಭಾಷ್ಯಂ ಸ್ವಾಮಿಯ ಹಿನ್ನೆಲೆಯಾಗಲಿ, ಆತನ ದುಷ್ಟಕೂಟದ ಬಗ್ಗೆಯಾಗಲಿ ಗೊತ್ತಿಲ್ಲವೆಂದಲ್ಲ, ಗೊತ್ತಿದ್ದೂ ಕೊಟ್ಟಿದ್ದಾರೆಂದರೆ ಅದು ಕಮೀಷನ್ ವ್ಯವಹಾರವಾ?

ಸಂಸ್ಕೃತ ಸಂಶೋಧನೆ ಮಾಡುವುದು ಹಾಳಾಗಲಿ, ಅಕಾಡೆಮಿಯನ್ನು ಅದರ ಪಾಡಿಗಾದರೂ ಉಳಿಸಿದ್ದಾನಾ?

2005 ರ ತನಕ ಸಂಸ್ಥೆಯ ವಶದಲ್ಲಿದ್ದ ಮೇಲುಕೋಟೆಯ ಸರ್ವೆ ನಂ. 6 ರಲ್ಲಿದ್ದ ಮೂರೆಕರೆ ಜಮೀನನ್ನೇ ಮಾರಿ ಹಾಕಿದ್ದಾನೆ. ಮೇಲುಕೋಟೆಯ ಮುನ್ಸಿಪಾಲಿಟಿಯಿಂದ ಅಕಾಡೆಮಿ ಖರೀದಿಸಿಟ್ಟಿದ್ದ ಜಮೀನಿನ ಬಹುಭಾಗವನ್ನು ಆರ್. ಶ್ರೀನಿವಾಸನ್ ಎಂಬ ಚೆನ್ನೈ ಮೂಲದ ಅಯ್ಯಂಗಾರಿಯೊಬ್ಬನಿಗೆ ಪರಭಾರೆ ಮಾಡಿದ್ದಾನೆ. ಸಂಸ್ಥೆಯ ಆವರಣದಲ್ಲಿದ್ದ ಸರಿಸುಮಾರು ಐನೂರು ಗಂಧದ ಮರಗಳನ್ನು ಕಡಿದು ಸಾಗಿಸಿದ್ದಾನೆ. ಈತನ ತಮ್ಮ ತಿರುಮಲೈ ಹಣ್ಣು ಮರಗಳ್ನ, ಅಕಾಡೆಮಿ ಸುತ್ತಮುತ್ತ ಬೆಳೆದಿದ್ದ ಬಹುತೇಕ ಮರಗಳನ್ನು ಕಡಿದು ಅದನ್ನೇ ದೇವಸ್ಥಾನದ ಅಡುಗೆ ಮನೆಗೆ ಸೌದೆಯಾಗಿ ಮಾರಿ ಕಾಸು ದೋಚುವ ತಮ್ಮ ತಿರುಮಲೈಗೂ ಅಣ್ಣ ಭಾಷ್ಯಂ ಸ್ವಾಮಿಗೂ ಹೆಚ್ಚು ವ್ಯತ್ಯಾಸವಿಲ್ಲ, ಕೊಟ್ಟ ದುಡ್ಡನ್ನೇ ಮುಂಡಾಮೋಚಿದ ಭಾಷ್ಯಂ ಸ್ವಾಮಿಗೆ ಇನ್ನೂ ಐದು ಕೋಟಿ ಸರ್ಕಾರಿ ದುಡ್ಡು ಕೊಟ್ಟ ಯಡ್ಡಿಗೆ ಏನೆನ್ನಬೇಕು?

ಕನಿಷ್ಠ ಈಗಲಾದರೂ ಭಾಷ್ಯಾಂ ಸ್ವಾಮಿಯ ಕರ್ಮಕಾಂಡದ ಬಗ್ಗೆ ಸಿಬಿಐ ತನಿಖೆಯಾಗಲಿ. ಕಳ್ಳ ಭಾಷ್ಯಂನ ಪಾಪಕ್ಕೆ ಶಿಕ್ಷೆಯಾಗಲಿ.

ಮಂಡ್ಯ: ಬಿಜೆಪಿಯೊಳಗೆ ಮಾರಾಮಾರಿ; ತಮ್ಮಣ್ಣನ ತಲೆ ಮೇಲೆ ತೂಗುಕತ್ತಿ!


ಬಿಜೆಪಿಯೊಳಗೆ ಅಧಿಕಾರಕ್ಕಾಗಿ ಮಾರಾಮಾರಿಯಾಗುತ್ತಿರುವುದು ಕೇವಲ ರಾಜ್ಯಮಟ್ಟದಲ್ಲಿ ಮಾತ್ರವಲ್ಲ. ಅತ್ತ ಯಡ್ಡಿ ಮತ್ತು ಅನಂತಕುಮಾರ್ ನಡುವೆ ಮಾರಾಮಾರಿ ನಡೆಯುತ್ತಿದ್ದರೆ ಇತ್ತ ಜಿಲ್ಲಾ ಮಟ್ಟದಲ್ಲೂ ಅಧಿಕಾರಕ್ಕಾಗಿನ ಕಿತ್ತಾಟ ತಾರಕಕ್ಕೇರಿದೆ. ಅದಕ್ಕೆ ತಾಜಾ ಉದಾಹರಣೆ ಎಂದರೆ ಮಂಡ್ಯದಲ್ಲಿ ಮೊನ್ನೆ ಬಹಿರಂಗವಾಗಿ ಬೀದಿ ರೌಡಿಗಳಂತೆ ಬಿಜೆಪಿ ನಾಯಕರು ಕಿತ್ತಾಡಿಕೊಂಡಿರುವುದು.


ಮಾಜಿ ಜನತಾ ಪರಿವಾರ ಮತ್ತು ಹಾಲಿ ಬಿಜೆಪಿ ಜಿಲ್ಲಾಧ್ಯಕ್ಷ ಎಚ್.ಹೊನ್ನಪ್ಪ "ಜಿಲ್ಲಾ ಉಸ್ತುವಾರಿ ಸಚಿವ ರಾಮಚಂದ್ರಗೌಡ ಒಬ್ಬ ನಾಲಾಯಕ್ ಮಂತ್ರಿ'' ಎಂದು ಬಹಿರಂಗವಾಗಿ ಹೇಳಿಕೊಂಡು ತಿರುಗಾಡುತ್ತಿದ್ದರೆ "ಪಕ್ಷ ಸಂಘಟನೆ ಮಾಡಲು ತಾಕತ್ತಿಲ್ಲದ ಕೈಲಾಗದ ಹೊನ್ನಪ್ಪ ಮೈಪರಚಿಕೊಳ್ಳುತ್ತಿದ್ದಾನೆ'' ಎಂದು ಡಿ.ರಾಮಲಿಂಗಯ್ಯನ ಬಣದವರು ಪ್ರೆಸ್‌ಮೀಟ್ ಮಾಡಿ ಉಗಿದಿದ್ದಾರೆ. ಕೇವಲ ಮಾತಿನಲ್ಲೇ ನಡೆಯುತ್ತಿದ್ದ ಈ ಜಗಳ ಮೊನ್ನೆ ನಾಗಮಂಗಲದಲ್ಲಿ ನಡೆದ ಕಾರ್ಯಕರ್ತರ ಸಭೆಯಲ್ಲಿ ಹೊನ್ನಪ್ಪ ಮತ್ತು ಮಂತ್ರಿ ರಾಮಚಂದ್ರಗೌಡರ ಬಣಗಳು ಮೈ ಕೈ ಮಿಲಾಯಿಸಿ ಬಡಿದಾಡುಕೊಳ್ಳುವ ಮಟ್ಟಕ್ಕೆ ಹೋಗಿದೆ.


ಚಲುವರಾಯಸ್ವಾಮಿ


ಮೂಲ ಆರೆಸ್ಸೆಸ್ಸಿಗರು ಮೂಲೆಗುಂಪು!

ಮಂಡ್ಯ ಜಿಲ್ಲೆಯ ಬಿಜೆಪಿಯೊಳಗೆ ಅಸಮಾಧಾನ ಹೊಗೆಯಾಡುತ್ತಿದ್ದುದು ನಿನ್ನೆ ಮೊನ್ನೆಯಿಂದಲ್ಲ. ಯಾವಾಗ 'ಆಪರೇಷನ್ ಕಮಲ'ದ ಮೂಲಕ ದುಡ್ಡು ಕೊಟ್ಟು ಬೇರೆ ಬೇರೆ ಪಕ್ಷಗಳಿಂದ ರಾಜಕೀಯ ನಾಯಕರನ್ನು ತರಕಾರಿಗಳಂತೆ ಕೊಂಡುಕೊಂಡು ಬಂದು ಅವರನ್ನು ಅಧಿಕಾರದ ಗದ್ದುಗೆಗೇರಿಸಲಾರಂಭಿಸಿದರೋ ಅಂದಿನಿಂದಲೇ ಮೂಲ ಬಿಜೆಪಿ-ಆರೆಸ್ಸೆಸ್ಸಿಗರಲ್ಲಿ ಅಸಮಾಧಾನದ ಬೆಂಕಿ ಹೊತ್ತಿಕೊಂಡಿದೆ. ಹತ್ತಾರು ವರ್ಷಗಳಿಂದ ನೀಟಾಗಿ ಇಸ್ತ್ರಿ ಮಾಡಿದ ಖಾಕಿ ಚಡ್ಡಿ ತೊಟ್ಟು, ಕಷ್ಟಪಟ್ಟು ಲಾರಿ ತಿರುಗಿಸುವುದರಲ್ಲಿ ಎಕ್ಸ್‌ಪರ್ಟ್ ಆಗಿರುವ ಮೂಲ ಆರೆಸ್ಸೆಸ್ಸಿಗ ದೆವ್ವಗಳನ್ನು ಮೂಲೆಗುಂಪು ಮಾಡಿ ಹೊರಗಿನ ದೆವ್ವಗಳಿಗೆ ಮಣೆ ಹಾಕುವುದರ ವಿರುದ್ಧ ಆಗಾಗ ಅರಚಾಟವೂ ನಡೆದಿದೆ. ಈಗ ನೋಡುತ್ತಿರುವುದು ಅದರ ಮುಂದುವರೆದ ಭಾಗವಷ್ಟೆ.



ಹೊನ್ನಪ್ಪ


ರಾಮಚಂದ್ರಗೌಡ

ಹಾಲಿ ಜಿಲ್ಲಾಧ್ಯಕ್ಷ ಹೆಚ್.ಹೊನ್ನಪ್ಪ ಹೇಳಿಕೇಳಿ ಜೇಡಿಎಸ್ ಮನುಷ್ಯ. ಆ ಪಕ್ಷದಿಂದಲೇ ಒಮ್ಮೆ ಎಮ್ಮೆಲ್ಲೆಯಾದವನು. ವಿಧಾನಸಭಾ ಚುನಾವಣೆಯಲ್ಲಿ ಶ್ರೀರಂಗಪಟ್ಟಣದ ಟಿಕೆಟ್ ಸಿಗಲಿಲ್ಲ ಎಂಬ ಕಾರಣಕ್ಕೆ ಬಿಜೆಪಿಗೆ ಹಾರಿದ್ದ. ಬೆನ್ನ ಹಿಂದೆ ನಾಲ್ಕು ಜನ ಇರದಿದ್ದರೂ ಆತನನ್ನು ಜಿಲ್ಲಾ ಬಿಜೆಪಿ ಅಧ್ಯಕ್ಷನನ್ನಾಗಿ ಮಾಡಲಾಗಿತ್ತು. ಅದೂ ಅಲ್ಲದೇ ಮಾದೇಗೌಡರ ಸುಪುತ್ರ ಮಧು ಮಾದೇಗೌಡ, ಮುಡಾ ಅಧ್ಯಕ್ಷೆ ವಿದ್ಯಾ ನಾಗೇಂದ್ರ, ಡಿ.ಸಿ.ತಮ್ಮಣ್ಣರಂಥ ಮರಿ, ಪುಡಿ ರಾಜಕಾರಣಿಗಳೂ ತಮ್ಮ ಮೂಲ ಪಕ್ಷಗಳಲ್ಲಿ ಅಧಿಕಾರ ಸಿಗದ ಬಿಜೆಪಿಗೆ ಹಾರಿ ಚಿಕ್ಕಪುಟ್ಟ ಅಧಿಕಾರ ಅನುಭವಿಸುತ್ತಿರುವುದೂ ಒರಿಜಿನಲ್ ಬಿಜೆಪಿ-ಆರೆಸ್ಸೆಸ್ಸಿಗರನ್ನು ಕೆರಳುವಂತೆ ಮಾಡಿತ್ತು. ಈಗ ಲೋಕಸಭಾ ಚುನಾವಣೆಗಾಗಿ ಮತ್ತದೇ ವಲಸಿಗ ಡಿ.ಸಿ.ತಮ್ಮಣ್ಣನನ್ನು ಬಿ.ಜೆ.ಪಿ ಅಭ್ಯರ್ಥಿ ಎಂದು ಘೋಷಿಸಿದಾಕ್ಷಣ ಆ ಅಸಮಾಧಾನ ಮಾರಾಮಾರಿಯಾಗಿ ಭುಗಿಲೆದ್ದಿದೆ. ಎಷ್ಟರಮಟ್ಟಿಗೆ ಎಂದರೆ ಡಿ.ಸಿ.ತಮ್ಮಣ್ಣನೇ ಬಿಜೆಪಿ ಅಭ್ಯರ್ಥಿ ಎಂದು ರಾಜ್ಯ ನಾಯಕರು ಪ್ರಕಟಿಸಿದ್ದರೂ ಮಂಡ್ಯದೊಳಗೆ ಅದನ್ನು ಒಪ್ಪಲು ಯಾರೂ ಸಿದ್ಧರಿಲ್ಲ. ಈ ಮಾರಾಮಾರಿಯ ಕಾರಣದಿಂದಾಗಿ ಖುದ್ದು ತಮ್ಮಣ್ಣನಿಗೆ ಗೆಲ್ಲುವ ವಿಶ್ವಾಸವಿಲ್ಲ.



ತಮ್ಮಣ್ಣ

ಹಾಗೆ ನೋಡಿದರೆ ಜಿಲ್ಲೆಯಲ್ಲಿ ಬಿಜೆಪಿಗೆ ಹೇಳಿಕೊಳ್ಳುವಂಥ ಜನಬೆಂಬಲವೇನೂ ಇಲ್ಲ. ಲಿಂಗಾಯತರ ಪಕ್ಷ ಎಂದೇ ಪ್ರತಿಬಿಂಬಿತವಾಗಿರುವ ಬಿಜೆಪಿಗೆ ಮಂಡ್ಯದಂಥ ಒಕ್ಕಲಿಗರ ನಾಡಲ್ಲಿ ನೆಲೆ ಕಂಡುಕೊಳ್ಳುವುದು ಕಷ್ಟವೂ ಹೌದು. ಕಳೆದ ಮದ್ದೂರು ಉಪ ಚುನಾವಣೆಯಲ್ಲಿ ಡಿ.ಸಿ.ತಮ್ಮಣ್ಣ ತಾನು ಗಳಿಸಿದ್ದ ನೂರಾರು ಕೋಟಿ ಹಡಬೆ ದುಡ್ಡನ್ನು ನೀರಿನಂತೆ ಚೆಲ್ಲಿದರೂ ಕಲ್ಪನಾ ಸಿದ್ಧರಾಜು ಎದುರು ಹೀನಾಯವಾಗಿ ಮಣ್ಣು ತಿಂದಿದ್ದು ಬಿಜೆಪಿಗೆ ಜಿಲ್ಲೆಯಲ್ಲಿರುವ ಜನಬೆಂಬಲಕ್ಕೆ ಹಿಡಿದ ಕನ್ನಡಿಯಾಗಿತ್ತು. ಇದರ ಜೊತೆಗೆ ಈಗ ಮೂಲ ಬಿಜೆಪಿ-ಆರ್‌ಎಸ್ಸೆಸ್ಸಿಗರ ಒಂದು ಬಣ, ವಲಸೆ ಬಿಜೆಪಿಗರ ಇನ್ನೊಂದು ಬಣ, ಡಿ.ಸಿ.ತಮ್ಮಣ್ಣನದ್ದೇ ಮತ್ತೊಂದು ಬಣ, ಮೈಷುಗರ್ಸ್ ಅಧ್ಯಕ್ಷ ನಾಗರಾಜಪ್ಪನ ಮಗದೊಂದು ಬಣ, ಕಲ್ಲುಚೋರ ಡಾ.ರವಿಶಂಕರ್‌ನ ಬಣ, ಮಧು ಮಾದೇಗೌಡನ ಬಣ, ಹೊನ್ನಪ್ಪನ ಬಣ, ರಾಮಲಿಂಗಯ್ಯನ ಬಣ, ಮುಡಾ ಅಧ್ಯಕ್ಷೆ ವಿದ್ಯಾಳ ಬಣ - ಹೀಗೆ ಇಡೀ ಮಂಡ್ಯ ಜಿಲ್ಲೆಯಲ್ಲಿ ಬಿಜೆಪಿಯ ಅದೆಷ್ಟು ಬಣಗಳಿವೆಯೋ ಲೆಕ್ಕ ಹಾಕಲು ಸಾಧ್ಯವಿಲ್ಲ. ಒಂದು ಗುಂಪನ್ನು ಕಂಡರೆ ಮತ್ತೊಂದಕ್ಕೆ ಆಗುವುದಿಲ್ಲ. ಈ ಕಿತ್ತಾಟದಲ್ಲಿ ಜಿಲ್ಲಾ ಬಿಜೆಪಿ ಛಿದ್ರವಾಗಿ ಸೊರಗಿದೆ.




ಬಿಜೆಪಿಗೊಬ್ಬ ಕ್ಯಾಂಡಿಡೇಟ್ ಇಲ್ಲ

ಮಂಡ್ಯ ಬಿಜೆಪಿಗೆ ಆಕ್ಸಿಜನ್ ಕೊಡಬಲ್ಲ, ಲೋಕಸಭಾ ಚುನಾವಣೆಯಲ್ಲಿ ಸಮರ್ಥ ಅಭ್ಯರ್ಥಿಯಾಗಬಲ್ಲ, ಎಲ್ಲಾ ಬಣಗಳಿಗೂ ಸಲ್ಲಬಲ್ಲ ನಾಯಕನೊಬ್ಬ ಸಿಕ್ಕಿಲ್ಲ. ಹಾಳೂರಿಗೆ ಉಳಿದವನೇ ಗೌಡ ಎಂಬಂತೆ ಡಿ.ಸಿ.ತಮ್ಮಣ್ಣನಿಗೆ ಟಿಕೆಟ್ ಕೊಟ್ಟು ಕೈತೊಳೆದುಕೊಂಡರು ರಾಜ್ಯ ನಾಯಕರು. ಆದರೆ ಅದನ್ನು ಒಪ್ಪುವುದಕ್ಕೆ ಯಾವೊಂದು ಬಣವೂ ಸಿದ್ಧವಿಲ್ಲ. ಹೊನ್ನಪ್ಪ ರಾಮಲಿಂಗಯ್ಯ, ಡಾ.ರವಿಶಂಕರ್‌ಗಳಂಥ ವೇಸ್ಟ್ ಕ್ಯಾಂಡಿಡೇಟ್‌ಗಳೆಲ್ಲವೂ "ನಾನೆ ಎಂಪಿ ಕ್ಯಾಂಡಿಡೇಟ್'' ಎಂದು ಕಂಡಕಂಡಲ್ಲಿ ಬಾಯ ಚಪಲ ತೀರಿಸಿಕೊಳ್ಳುತ್ತಿದ್ದಾರೆ. ಇದರ ಜೊತೆಗೆ ಕಾಂಟ್ರಾಕ್ಟರ್ ಬಿ.ಲಿಂಗೇ ಗೌಡ ಕೂಡ ತಾನೇನು ಕಡಿಮೆಯಿಲ್ಲ ಎಂದು "ನಾನೇ ಎಂಪಿ ಕ್ಯಾಂಡಿಡೇಟ್'' ಎಂದು ಫ್ಲೆಕ್ಸ್ ಬ್ಯಾನರ್ ಹಾಕಿಸಿಕೊಂಡು ಖುಷಿಪಡುತ್ತಿದ್ದಾನೆ. ಖುದ್ದು ಕಲ್ಪನಾ ಸಿದ್ಧರಾಜು ಎದುರು ಹೀನಾಯವಾಗಿ ಮಣ್ಣು ತಿಂದ ತಮ್ಮಣ್ಣನ ಪರಿಸ್ಥಿತಿ ಮಾತ್ರ ಚಿಂತಾಜನಕವಾಗಿದೆ.


ಪುಟ್ಟಣ್ಣಯ್ಯ


ವಿದ್ಯಾನಾಗೇಂದ್ರ


ನಾಗರಾಜಪ್ಪ

ಇನ್ನೊಂದೆಡೆ ಕೆಲ ಬಿಜೆಪಿ ಕಿಡಿಗೇಡಿಗಳು ಯಶಸ್ವಿ ನಿರ್ದೇಶಕ, ನಟ ಪ್ರೇಮ್‌ನನ್ನು ಬಿಜೆಪಿಯ ಅಭ್ಯರ್ಥಿ ಎಂದು ಬಿಂಬಿಸುತ್ತಿದ್ದಾರೆ. ಒಕ್ಕಲಿಗನೊಬ್ಬ ಯಶಸ್ವಿಯಾ... ಚಿತ್ರರಂಗದಲ್ಲಿ ಮಿಂಚಿರುವುದರಿಂದ ಜನ ಓಟು ಹಾ... ಗೆಲ್ಲಿಸುತ್ತಾರೆಂದು ಕಂಡಕಂಡಲ್ಲಿ ಬಾಯಿ ಬಡಿದುಕೊಳ್ಳುತ್ತಿದ್ದಾರೆ. ಆದರೆ, ಪ್ರೇಮ್ ಮಾ... ಅದ್ಯಾವುದಕ್ಕೂ ಸೊಪ್ಪು ಹಾಕದೆ ಮೆತ್ತಗೆ ಮಲಗಿದ್ದಾ... ಅವರು ಚುನಾವಣೆ ಆದಮೇಲೆ ಎದ್ದು ಹೊರ... ಬಂದರೇನೇ ಒಳ್ಳೆಯದು. ಇಲ್ಲದಿದ್ದರೆ ಬಿಜೆಪಿಯಿಂ... ಸ್ಪರ್ಧಿಸಿ, ಠೇವಣಿ ಉಳಿಸಿಕೊಳ್ಳಲಾರದಂತೆ ಹೀನಾಯವಾ... ಸೋತು ಇದ್ದಬದ್ದ ಮಾನ ಮರ್ಯಾದೆ, ವರ್ಚಸ... ಕಳೆದುಕೊಳ್ಳಬೇಕಾಗುತ್ತದೆ.

ಕಾಂಗ್ರೆಸ್ ಸ್ಥಿತಿ ಚಿಂತಾಜನಕ

ಇನ್ನು ಕಾಂಗ್ರೆಸ್‌ನ ಪರಿಸ್ಥಿತಿಯೂ ಇದಕ್ಕಿಂತ ಬಹ... ಭಿನ್ನವಾಗಿಯೇನಿಲ್ಲ. ಒಂದು ಕಾಲದಲ್ಲಿ ಮಂಡ... ಕಾಂಗ್ರೆಸ್‌ನ ಭದ್ರಕೋಟೆಯಂತಿತ್ತು. ಇಲ್ಲಿಂದ... ಆಯ್ಕೆಯಾಗಿ ಹೋದ ಎಂಪಿಗಳಲ್ಲಿ... ಕಾಂಗ್ರೆಸ್ಸಿಗರೇ ಜಾಸ್ತಿ. ಈಗ ಅದೆಲ್ಲ ಕೇವಲ... ಚರಿತ್ರೆ. ಕಳೆದ ಬಾರಿ ಕಾಂಗ್ರೆಸ್‌ನಿಂದ ಗೆದ್ದಿದ್ದ... ಅಂಬರೀಷ್ ಅದು ಹೇಗೋ ಐದು ವರ್ಷ... ಕಳೆದರೇ ಹೊರತು ಜಿಲ್ಲೆಗೆ ಮಾಡಿದ್ದೇನೂ... ಇಲ್ಲ. ಕಾವೇರಿ ಚಳವಳಿಯ ಸಂದರ್ಭದಲ್ಲಿ... ರಾಜೀನಾಮೆ ಕೊಟ್ಟಂತೆ ನಾಟಕವಾಡಿ ನಾಪತ್ತೆ... ಯಾದವರು ಎಲ್ಲಿದ್ದಾರೆಂಬುದೇ ಗೊತ್ತಿಲ್ಲ... ಈ ಬಾರಿಯೇನಾದರೂ ಮತ್ತೆ ಚುನಾವಣೆ... ಗಿಳಿದರೆ ಅಂಬಿಗೆ ಪಾಠ ಕಲಿಸುವುದಕ್ಕೆ... ಮಂಡ್ಯದ ಜನ ತಯಾರಾಗಿದ್ದಾರೆ. ಇದು... ಅಂಬಿಗೂ ಗೊತ್ತಿರದ ಸತ್ಯವೇನಲ್ಲ. ಹಾಗಾಗಿ... ತನಗೆ ಮಂಡ್ಯದಿಂದ ಟಿಕೆಟ್ ಕೊಡಬೇಡಿ... ಬೆಂಗಳೂರಿನ ಯಾವುದಾದರೂ ಕ್ಷೇತ್ರ ಕೊಡಿ... ಎಂದು ಹೈಕಮಾಂಡಿನೆದುರು ಗೋಗರೆ... ಯುತ್ತಿದ್ದಾರೆ. ಅಂಬಿಯ ನೆಗೆಟಿವ್ ಪಾಯಿಂಟ್... ಗಳನ್ನು ಚೆನ್ನಾಗಿ ಬಳಸಿಕೊಳ್ಳುತ್ತಿರುವ... ಎಲ್.ಆರ್.ಶಿವರಾಮೇಗೌಡ "ನಾನೇ ಎಂಪಿ ಕ್ಯಾಂಡಿಡೇಟ್'' ಎಂದು ಗಲ್ಲಿಗಲ್ಲಿ ತಿರುಗು... ತ್ತಿದ್ದಾರೆ. ಶಿವರಾಮೇಗೌಡರಿಗೆ ನಾಗಮಂಗಲ... ಬಿಟ್ಟು ಉಳಿದ ಕಡೆ ಅಷ್ಟೇನೂ ಜನ... ಬೆಂಬಲವಿಲ್ಲ.

ಇನ್ನೊಂದೆಡೆಗೆ ಈಗತಾನೆ ಎದ್ದು ಬಂದು ಕಣ್ಣೊರೆಸಿಕೊಳ್ಳುತ್ತಾ "ನಾನೇ ಕಾಂಗ್ರೆಸ್‌ನ ಎಂಪಿ ಕ್ಯಾಂಡಿಡೇಟ್'' ಎಂದು ಆತ್ಮಾನಂದ ಕೂಡ ಆಕಳಿಸುತ್ತಾ... ಹೇಳುತ್ತಿದ್ದಾರೆ. ಒಂದಂತೂ ಸ್ಪಷ್ಟ. ಕಾಂಗ್ರೆಸ್ಸಿನಿಂದ ಯಾರೇ... ಕಣಕ್ಕಿಳಿಯಲಿ, ಅವರು ಠೇವಣಿ ಉಳಿಸಿಕೊಂಡರೆ ಅದೇ... ದೊಡ್ಡ ಸಾಧನೆಯಾಗುತ್ತದೆ.


▶▶▶


ಬೊಮ್ಮಾಯಿ

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಲ್ಲಿ ಯಡ್ಡಿ-ಬೊಮ್ಮಾಯಿ ಆಟ!

ಲೋಕಸಭಾ ಚುನಾವಣೆಯ ತಾಲೀಮಿನ ಭಾಗವಾಗಿ ಸಿಎಮ್ಮು ಯಡ್ಡಿಯೂರಪ್ಪ ಹುಬ್ಬಳ್ಳಿ-ಧಾರವಾಡ ಕ್ಷೇತ್ರದಲ್ಲಿ ರಂಜಕ ಆಟ ಆಡುವ ಮೂಲಕ ಇಡೀ ಕ್ಷೇತ್ರವನ್ನು ತಮ್ಮ ಮುಷ್ಟಿಯಲ್ಲಿಟ್ಟುಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಅವಳಿ ನಗರಗಳ ಮಹಾನಗರ ಪಾಲಿಕೆಯ ಮೇಯರ್ ಹುದ್ದೆಯಿಂದ ರಾಧಕ್ಕನನ್ನು ಕೆಳಗಿಳಿಸಿ, ಆ ಸ್ಥಾನದ ಆಕಾಂಕ್ಷಿಯಾಗಿ ಚಾತಕಪಕ್ಷಿಯಂತೆ ಕಾಯುತ್ತಿದ್ದ ಅಶೋಕ್ ಜಾದವ್ ಮೂಗಿಗೆ ನಿಗಮ ಮಂಡಳಿಗಳ ಅಧ್ಯಕ್ಷ ಸ್ಥಾನದ ತುಪ್ಪ ಸವರಿ ವೀರಣ್ಣ ಸವಡಿಯನ್ನು ಮೇಯರ್ ಗಾದಿಗೆ ಕೂರಿಸಿದ್ದಾರೆ. ಅಲ್ಲಿಗೆ ಯಡ್ಡಿ ಒಂದೇ ಕಲ್ಲಿಗೆ ಎರಡು ಹಕ್ಕಿಗಳನ್ನು ಹೊಡೆದಂತಾಗಿದೆ.

ಈ ಹಿಂದೆ ಇಡೀ ಜಿಲ್ಲೆಯನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವ ಉದ್ದೇಶದಿಂದ ಯಡ್ಡಿ ಅನಂತೂ ಬಣದ ಜಗದೀಶ್ ಶೆಟ್ಟರ್‌ಗೆ ಇದಿರಾಗಿ ತನ್ನ ಭಂಟ ಬಸವರಾಜ ಬೊಮ್ಮಾಯಿಯನ್ನು ಪ್ರಮೋಟ್ ಮಾಡಿದರು. ಬೊಮ್ಮಾಯಿಯನ್ನು ಮಂತ್ರಿ ಮಾಡಿ, ಶೆಟ್ಟರ್‌ಗೆ ವಿಧಾನಸಭಾಧ್ಯಕ್ಷ ಸ್ಥಾನದಲ್ಲಿ ಕೂರಿಸುವ ಮೂಲಕ ಅವರನ್ನು ಮೂಲೆಗುಂಪು ಮಾಡಿದ್ದರು. ಈಗ ಶೆಟ್ಟರ್‌ನ ಬಲಗೈ ಭಂಟ ಅಶೋಕ್ ಜಾದವ್‌ಗೆ ಕೌಂಟರ್ ವೇಟ್ ಆಗಿ ಬಸವರಾಜ್ ಬೊಮ್ಮಾಯಿ ಭಂಟ ವೀರಣ್ಣ ಸವಡಿಯನ್ನು ಎತ್ತಿಕಟ್ಟಿ ಮಹಾನಗರ ಪಾಲಿಕೆಯ ಮೇಯರ್‌ನನ್ನಾಗಿ ಮಾಡುವ ಮೂಲಕ ಜಗದೀಶ್ ಶೆಟ್ಟರ್‌ನ ಬಾಲವನ್ನು ಇನ್ನಷ್ಟು ಕತ್ತರಿಸಿ ಹಾಕಿದ್ದಾರೆ.


ವೀರಣ್ಣ

ಯಡ್ಡಿಯ ಈ ತಂತ್ರದಿಂದ ಸಿಟ್ಟಿಗೆದ್ದಿರುವ ಅಶೋಕ್ ಜಾದವ್ ಮೈ ಪರಚಿಕೊಳ್ಳುತ್ತಾ ಜೆಡಿಎಸ್‌ನತ್ತ ಮುಖ ಮಾಡಿರುವುದು, ಬಿಜೆಪಿಯ ಒಳಜಗಳವನ್ನು ಬಂಡವಾಳ ಮಾಡಿಕೊಂಡು ಈತನಿಗೆ ಲೋಕಸಭಾ ಚುನಾವಣೆಯ ಟಿಕೆಟ್ ಕೊಟ್ಟು ಮರಾಠಿ ಮತಗಳನ್ನು ಸೆಳೆಯುವುದಕ್ಕೆ ಜೆಡಿಎಸ್ ಕೂಡ ತುದಿಗಾಲಲ್ಲಿ ನಿಂತಿರುವುದು ಜಿಲ್ಲಾ ಬಿಜೆಪಿಯ ಮರ್ಮಾಂಗಕ್ಕೆ ಹೊಡೆದಂತಾಗಿದೆ.

ಲೋಕಸಭಾ ಚುನಾವಣೆಗಳು ಹತ್ತಿರವಾಗುತ್ತಿರುವ ಈ ಸಂದರ್ಭದಲ್ಲಿ ಯಡ್ಡಿ ಈ ಆಟವನ್ನು ಬಹಳ ಚೆನ್ನಾಗಿಯೇ ಆಡಿದ್ದಾರೆ. ಹಿಂದಿನ ಮೇಯರ್ ರಾಧಕ್ಕ ತನ್ನ ಅವ್ಯವಹಾರ, ಭ್ರಷ್ಟಾಚಾರ, ಮೋಜಿನ ವಿದೇಶಿ ಟೂರ್, ನಾಲಾಯಕ್ ಪುತ್ರರತ್ನರ ಪ್ರಮೋಟ್ - ಹೀಗೆ ಹತ್ತಾರು ಕುಖ್ಯಾತಿಗಳ ಗರಿ ಏರಿಸಿಕೊಂಡಿರುವ ವ್ಯಕ್ತಿ. ಆಕೆಯನ್ನು ಮುಂದುವರೆಸಿದರೆ ಬರುವ ಚುನಾವಣೆಯಲ್ಲಿ ಬಿಜೆಪಿಯ ಮುಖಕ್ಕೆ ಜನ ಉಗಿಯುತ್ತಾರೆಂಬುದು ಪ್ರಾಯಶಃ ಇಡೀ ಬಿಜೆಪಿಯಲ್ಲಿ ಎಲ್ಲರಿಗೂ ಇರುವ ಅಭಿಪ್ರಾಯ. ಆದರೆ, ಆಕೆಯ ಸ್ಥಾನಕ್ಕೆ ಯಾರು ಬರಬೇಕು ಎಂಬ ಬಗ್ಗೆ ಮಾತ್ರ ಭಿನ್ನಾಭಿಪ್ರಾಯಗಳು ಇದ್ದೇ ಇದ್ದವು. ಈಗಾಗಲೇ ಅನಂತೂ ಬಣದಿಂದ ಜಾರಿ ಯಡ್ಡಿ ಬಣಕ್ಕೆ ಬಿದ್ದಿರುವ ಸಂಸದ ಪ್ರಹ್ಲಾದ್ ಜೋಷಿಗೇ ಮೇಯರ್ ನೇಮಕದ ಜವಾಬ್ದಾರಿಯನ್ನು ಯಡ್ಡಿ ವಹಿಸಿದ್ದರು.


ಭಾರತಿ

ಈಗಾಗಲೇ ಮೂರು ಬಾರಿ ಸತತವಾಗಿ ಗೆದ್ದಿರುವ ಭಾರತಿ ಪಾಟೀಲ್‌ಗೆ ಮೇಯರ್ ಹುದ್ದೆ ನೀಡಬೇಕೆಂದು ಧಾರವಾಡದ ಶಾಸಕ ಚಂದ್ರಕಾಂತ್ ಬೆಲ್ಲದ್, ಸೀಮಾ ಮಸೂತಿ ಒತ್ತಾಯ ಮಾಡಿದರೆ ಹಿಂದಿನ ಬಾರಿ ಮಹಿಳೆಯರಿಗೆ ಒಂದು ಅವಕಾಶ ಕೊಟ್ಟಾಗಿದೆ. ಈಗ ಸಾಧ್ಯವಿಲ್ಲ ಎಂಬ ನಾಜೂಕು ಕಾರಣ ನೀಡಿ ಆ ಪ್ರಸ್ತಾವ ಮತ್ತೆ ತಲೆ ಎತ್ತದಂತೆ ಚಾಣಾಕ್ಷತೆ ವಹಿಸಲಾಯಿತು.

ಮೂರು ಬಾರಿ ಆಯ್ಕೆಗೊಂಡಿರುವ ಹುಬ್ಬಳ್ಳಿಯ ಅಶೋಕ್ ಜಾದವ್‌ಗಾದರೂ ಈ ಸ್ಥಾನ ಕೊಡಿ ಎಂದು ಜಗದೀಶ್ ಶೆಟ್ಟರ್, ಅಶೋಕ್ ಕಾಟವೆ, ವೀರಭದ್ರಪ್ಪ ಹಾಲಹರವಿ ಎಷ್ಟೇ ಒತ್ತಡ ತಂದರೂ ಅದಕ್ಕೂ ಯಡ್ಡಿ-ಬೊಮ್ಮಾಯಿ-ಜೋಶಿ ಬಳಗ ಒಪ್ಪಲಿಲ್ಲ; "ಅಶೋಕ್ ಜಾದವ್ ಹಿಂದುಳಿದ 'ಬ' ವರ್ಗಕ್ಕೆ ಸೇರಿರುವುದರಿಂದ ಆ ವರ್ಗಕ್ಕೆ ಮೀಸಲಾತಿ ನಿಗದಿಯಾದ ಮೇಲೆ ಅವರನ್ನು ಮೇಯರ್ ಮಾಡೋಣ'' ಎಂದು ಸಾಗಹಾಕಿದರು.

ಕೊನೆಗೆ ಎಲ್ಲಾ ಪಕ್ಷಗಳಲ್ಲೂ ಅಜಾತಶತ್ರು ಎನಿಸಿಕೊಂಡಿರುವ ಹಿರಿಯ ಸದಸ್ಯ ಡಾ.ಪಾಂಡುರಂಗ ಪಾಟೀಲ್‌ಗಾದರೂ ಕೊಡಿ ಎಂದರೆ "ಅವರು ಹಿರಿಯರಿರಬಹುದು. ಆದರೆ ಜೆಡಿಎಸ್‌ನಲ್ಲಿದ್ದು ಬಂದವರು. ಮತ್ಯಾವಾಗ ಯಾವ ಪಕ್ಷಕ್ಕೆ ಹೋಗ್ತಾರೋ ಗೊತ್ತಿಲ್ಲ. ಇಲ್ಲೇ ಇದ್ದು ಕೆಲಸ ಮಾಡಲಿ, ಆಮೇಲೆ ಕೊಡೋಣ'' ಎಂದು ಆ ಪ್ರಸ್ತಾವವನ್ನೂ ಕಸದಬುಟ್ಟಿಗೆ ಹಾಕಿದರು.


ಅಶೋಕ್

ಪ್ರಹ್ಲಾದ್ ಜೋಶಿಗೆ ವಾಸ್ತವದಲ್ಲಿ ತನ್ನ ಬಲಗೈ ಭಂಟ ಅಜ್ಜಪ್ಪ ಬೆಂಡಿಗೇರಿಯನ್ನು ಮೇಯರ್ ಮಾಡಬೇಕೆಂಬ ಆಸೆಯಿತ್ತು. ಆದರೆ, ಯಡ್ಡಿಗೆ ತೀರಾ ಹತ್ತಿರವಾಗಿರುವ ಬಸವರಾಜ್ ಬೊಮ್ಮಾಯಿಗೆ ವೀರಣ್ಣ ಸವಡಿಯನ್ನು ತರಬೇಕೆಂಬ ಬಯಕೆಯಿತ್ತು. ಅಂತಿಮ ಹಣಾಹಣಿಯಲ್ಲಿ ಯಡ್ಡಿ-ಬೊಮ್ಮಾಯಿ ತಂತ್ರವೇ ನಿರೀಕ್ಷಿತವಾಗಿ ಗೆದ್ದುಬಿಟ್ಟಿತು. ಧಾರವಾಡ ಕ್ಷೇತ್ರದಲ್ಲಿ ಪಂಚಮಸಾಲಿ ಲಿಂಗಾಯತರೇ ಬಹುಸಂಖ್ಯಾತರಾಗಿದ್ದು ಚುನಾವಣೆಯಲ್ಲಿ ನಿರ್ಣಾಯಕ ಪಾತ್ರ ನಿರ್ವಹಿಸಲಿದ್ದಾರೆ. ಜಿಲ್ಲೆಯಲ್ಲಿ ಐದು ಜನ ಎಮ್ಮೆಲ್ಲೆಗಳು, ಒಬ್ಬ ಎಮ್ಮೆಲ್ಸಿ ಪಂಚಮಸಾಲಿ

ಜೆಡಿಎಸ್ ಗೆಲ್ಲುವ ಕುದುರೆ

ಕಾಂಗ್ರೆಸ್-ಬಿಜೆಪಿಗಳ ಈಗಿರುವ ಪರಿಸ್ಥಿತಿಯನ್ನು ನೋಡಿದರೆ ಮತ್ತು ಜೇಡಿಎಸ್‌ಗಿರುವ ಅಡ್ವಾಂಟೇಜ್‌ಗಳನ್ನು ಅವಲೋಕಿಸಿದರೆ ಜೆಡಿಎಸ್ಸೇ ನಿರಾಯಾಸವಾಗಿ ಗೆಲ್ಲುವ ಸೂಚನೆಗಳಿವೆ. ಹೇಳಿಕೇಳಿ ಮಂಡ್ಯ ಒಕ್ಕಲಿಗರ ಪ್ರಾಬಲ್ಯದ ಜಿಲ್ಲೆ, ಬಿಜೆಪಿ ಲಿಂಗಾಯತರ ಪಕ್ಷ, ಜೇಡಿಎಸ್ ಒಕ್ಕಲಿಗರ ಪಕ್ಷ ಎಂಬ ಮನೋಭಾವ ಮನೆಮಾಡಿರುವುದರಿಂದ ಜನ ಜೆಡಿಎಸ್ ಕಡೆ ವಾಲುವ ಸೂಚನೆಗಳಿವೆ. ಅದೂಅಲ್ಲದೇ ಜಿಲ್ಲೆಯಾದ್ಯಂತ ಜೆಡಿಎಸ್‌ಗೆ ಉತ್ತಮ ನೆಲೆಯಿದೆ. ಜಿಲ್ಲೆಯಲ್ಲಿರುವ ಒಟ್ಟು ಎಮ್ಮೆಲ್ಲೆಗಳ ಪೈಕಿ ಮೂವರು ಜೇಡಿಎಸ್‌ನವರೇ ಇದ್ದಾರೆ. ಮಂಡ್ಯ ನಗರಪಾಲಿಕೆ ಜೆಡಿಎಸ್ ವಶದಲ್ಲಿದೆ. ಮದ್ದೂರು ಉಪಚುನಾವಣೆಯಲ್ಲಿ ಕಲ್ಪನಾ ಸಿದ್ಧರಾಜು ಅವರ ಅಮೋಘ ಜಯ ಜೆಡಿಎಸ್‌ಗಿರುವ ಜನಪ್ರಿಯತೆಯನ್ನು ಸಾಬೀತುಪಡಿಸಿದೆ.

ಆದರೆ, ಇಲ್ಲಿಯತನಕ ಜೆಡಿಎಸ್ ತನ್ನ ಅಭ್ಯರ್ಥಿಯನ್ನು ಘೋಷಣೆ ಮಾಡಿಲ್ಲ. ಚೆಲುವರಾಯಸ್ವಾಮಿಯೇ ಪಕ್ಷದ ಕ್ಯಾಂಡಿಡೇಟ್ ಎಂದು ಹೇಳಲಾಗುತ್ತಿದೆಯಾದರೂ ಅದಿನ್ನೂ ಖಚಿತವಾಗಿಲ್ಲ. ಪಕ್ಷದ ಸುಪ್ರೀಮೋ ದೇವೇಗೌಡರೇ ಖುದ್ದಾಗಿ ನಿಲ್ಲುತ್ತಾರೆಂಬ ಗುಲ್ಲೂ ಇದೆ.

ಆದರೆ ದೊಡ್ಡ ಗೌಡರು ಬೇರೊಂದು ಲೆಕ್ಕಾಚಾರ ಹಾಕುತ್ತಿದ್ದಾರೆಂಬುದನ್ನೂ ಅಲ್ಲಗಳೆಯುವಂತಿಲ್ಲ. ಮೈಸೂರು ಜಿಲ್ಲೆಯ ಕೃಷ್ಣರಾಜನಗರದಿಂದ ಎಮ್ಮೆಲ್ಲೆಯಾಗಿರುವ ಸಾ.ರಾ.ಮಹೇಶ್‌ರನ್ನು ಮಂಡ್ಯದ ಎಂಪಿ ಕ್ಷೇತ್ರಕ್ಕೆ ನಿಲ್ಲಿಸಿ ಗೆಲ್ಲಿಸುವುದು, ತೆರವಾದ ಕೃಷ್ಣರಾಜನಗರಕ್ಕೆ ಸೊಸೆ ಭವಾನಿಯನ್ನು ನಿಲ್ಲಿಸಿ ಗೆಲ್ಲಿಸುವ ಯೋಚನೆಯನ್ನೂ ಗೌಡರು ಮಾಡುತ್ತಿದ್ದಾರೆ. ದೊಡ್ಡ ಗೌಡರು ಅದೇನು ಲೆಕ್ಕಾಚಾರ ಹಾಕಿ, ಅದ್ಯಾವ ತೀರ್ಮಾನಕ್ಕೆ ಬರುತ್ತಾರೋ ಅವರನ್ನು ಬಿಟ್ಟು ಬೇರ್‍ಯಾರಿಗೂ ಗೊತ್ತಿಲ್ಲ. ಒಂದಂತೂ ಸ್ಪಷ್ಟ. ಜೆಡಿಎಸ್‌ನಿಂದ ಮಂಡ್ಯಕ್ಕೆ ಯಾರೇ ನಿಲ್ಲಲಿ. ಅವರು ಗೆದ್ದೇ ಗೆಲ್ಲುತ್ತಾರೆ.

ಲೋಕಸಭೆಯ ಚುನಾವಣಾ ದಿನಾಂಕ ಘೋಷಣೆಯಾಗುವ ಮೊದಲೇ ರೈತಸಂಘದ ಪುಟ್ಟಣ್ಣಯ್ಯ ಹಳ್ಳಿಹಳ್ಳಿಗೆ ತಿರುಗಿ ಪ್ರಚಾರ ಮಾಡುತ್ತಿದ್ದಾರೆ. ಬಿಜೆಪಿ, ಕಾಂಗ್ರೆಸ್, ಜೆಡಿಎಸ್‌ಗಳು ಅಭ್ಯರ್ಥಿಯ ಆಯ್ಕೆಯಲ್ಲಿ ತಲೆ ಬಿಸಿ ಮಾಡಿಕೊಂಡಿದ್ದರೆ ಪುಟ್ಟಣ್ಣಯ್ಯ ಮಾತ್ರ ತಾನು ಸರ್ವೋದಯ ಪಕ್ಷದ ಕ್ಯಾಂಡಿಡೇಟ್ ಎಂದು ಹೇಳಿಕೊಳ್ಳುತ್ತಾ ಸಭೆ ಸಮಾರಂಭಗಳನ್ನು ಭರ್ಜರಿಯಾಗಿ ನಡೆಸುತ್ತಿದ್ದಾರಾದರೂ ಅವರು ಗೆಲ್ಲುವುದು ಕಷ್ಟ, ಕಷ್ಟ.

● ಲಕ್ಷ್ಮಣ್ ಚೀರನಹಳ್ಳಿ

ಪಂಗಡದವರಾಗಿದ್ದಾರೆ. ಅವರೆಲ್ಲರ ಬೆಂಬಲ ಬೇಕು ಎನ್ನುವಂತಿದ್ದರೆ ಹಾಗೂ ಕಾಂಗ್ರೆಸ್ ಪಕ್ಷ ಈಗಾಗಲೇ ಪ್ರಬಲ ಪಂಚಮಸಾಲಿ ಅಭ್ಯರ್ಥಿ ಮಂಜುನಾಥ್ ಕುನ್ನೂರ ಅವರನ್ನು ಕಣಕ್ಕಿಳಿಸುತ್ತಿರುವುದರಿಂದ ಪಂಚಮಸಾಲಿಗಳ ಮತಗಳನ್ನು ಒಡೆಯಬೇಕೆಂದರೆ ಪಂಚಮಸಾಲಿ ಪಂಗಡಕ್ಕೇ ಮೇಯರ್ ಹುದ್ದೆ ಕೊಡಬೇಕು ಎಂಬ ವಾದವನ್ನಿಟ್ಟು ವೀರಣ್ಣ ಸವದಿಗೆ ಮೇಯರ್ ಗಾದಿಯ ಮಣೆಹಾಕಿದ್ದಾರೆ.

ಈ ಆಟದಿಂದ ಯಡ್ಡಿ ಜಿಲ್ಲೆಯ ಬಿಜೆಪಿಯನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡ ಸಂತಸದಲ್ಲಿರಬಹುದು. ತಮ್ಮ ವಿರೋಧಿ ಅನಂತೂ ಮತ್ತು ಶೆಟ್ಟರ್‌ಗಳ ಬಾಲ ಕತ್ತರಿಸಿದ ಹುಮ್ಮಸ್ಸಿನಲ್ಲಿರಬಹುದು. ಆದರೆ, ಅದು ಬಿಜೆಪಿಗೆ ಒಂದಿಷ್ಟು ಮುಳುವಾಗುವುದು ಖಂಡಿತ. ಯಡ್ಡಿ-ಬೊಮ್ಮಾಯಿ ಜೋಡಿಯ ವಿರುದ್ಧ ಅವಕಾಶವಂಚಿತ ನಾಯಕರೆಲ್ಲರೂ ಒಗ್ಗಟ್ಟಾಗಿ ಪಾಠ ಕಲಿಸಲು ಸಿದ್ಧರಾಗುತ್ತಿದ್ದಾರೆ. ಅಶೋಕ್ ಜಾದವ್‌ನಂತೂ ಈಗಾಗಲೇ ಒಂದು ಕಾಲನ್ನು ಜೆಡಿಎಸ್ ಅಂಗಳದಲ್ಲಿ ಇಟ್ಟಾಗಿದೆ. ಇದರರ್ಥ ಒಂದೂವರೆ ಲಕ್ಷದಷ್ಟಿರುವ ಘುದಾರಿಗರಲ್ಲಿ ಬಹುತೇಕರು ಜಾದವ್ ಜೊತೆ ಜೆಡಿಎಸ್ ಕಡೆ ಮುಖ ಮಾಡುವ ಸಾಧ್ಯತೆಯೇ ಜಾಸ್ತಿ. ಹಾಗೇನಾದರೂ ಆದರೆ ಜಿಲ್ಲೆಯಲ್ಲಿ ಬಿಜೆಪಿಯು ಪ್ರಹ್ಲಾದ್ ಜೋಶಿ ಮಕಾಡೆ ಮಲಗುವುದು ಗ್ಯಾರಂಟಿ. ಅದೇ ಸಮಯದಲ್ಲಿ ಪ್ರಬಲ ಪಂಚಮಸಾಲಿಗಳನ್ನು ಬೆನ್ನಿಗಿಟ್ಟುಕೊಂಡಿರುವ ಕಾಂಗ್ರೆಸ್‌ನ ಮಂಜುನಾಥ್ ಕುನ್ನೂರ ವಿಜಯಪತಾಕೆ ಹಾರಿಸುವುದೂ ಅಷ್ಟೇ ನಿಶ್ಚಿತ.

● ಹುಬ್ಬಳ್ಳಿಯಾಂವ


ಚಿತ್ರದುರ್ಗ ಕಾಲೆಳೆದುಕೊಳ್ಳುತ್ತಿರುವ ಬಿಜೆಪಿಗಳು!

ಚಿತ್ರದುರ್ಗ ಬಿಜೆಪಿಯೀಗ ಒಡೆದ ಮನೆ. ಚುನಾವಣೆ ಹತ್ತಿರವಾಗುತ್ತಿರುವ ಈ ಸಂದರ್ಭದಲ್ಲಿ ಬಿಜೆಪಿಗೆ ಅದು ಭಾರಿ ಹೊಡೆತ ಕೊಡುತ್ತದೆ. ಅಂತೆಯೇ, ಈ ಕಿತ್ತಾಟ ಜನರಿಗೆ ಒಂದಿಷ್ಟು ಪುಕ್ಕಟೆ ಮನರಂಜನೆಯನ್ನೂ ನೀಡುತ್ತಿದೆ.

ಬಿಜೆಪಿಗಳು ಬರುವ ಲೋಕಸಭಾ ಚುನಾವಣೆಯಲ್ಲಿ ತಾವು ಗೆದ್ದೇ ಗೆಲ್ಲುತ್ತೇವೆಂದು ನಂಬಿಕೊಂಡಿರುವ ಕ್ಷೇತ್ರಗಳ ಪೈಕಿ ಚಿತ್ರದುರ್ಗ ಕೂಡ ಒಂದು. ಇಬ್ಬರು ಬಿಜೆಪಿ ಶಾಸಕರು, ಬಿಜೆಪಿಯನ್ನು ಹೊರಗಿನಿಂದ ಬೆಂಬಲಿಸುತ್ತಿರುವ ಸಮಾಜ ಕಲ್ಯಾಣ ಸಚಿವ ಡಿ.ಸುಧಾಕರ್, ಜವಳಿ ಖಾತೆ ಸಚಿವ ಗೂಳಿಹಟ್ಟಿ ಡಿ. ಶೇಖರ್, ರೇಷ್ಮೆ ಖಾತೆ ಸಚಿವ ವೆಂಕಟರವಣಪ್ಪ ಮುಂತಾದವರು ಇಲ್ಲಿ ಪಕ್ಷದ ಅಭ್ಯರ್ಥಿಯ ಬೆನ್ನಿಗೆ ನಿಲ್ಲುತ್ತಾರೆ ಎಂಬ ಲೆಕ್ಕಾಚಾರ ನಾಯಕರದ್ದು. ಆದರೆ, ಜಿಲ್ಲಾ ಮಟ್ಟದಲ್ಲಿ ಆಗುತ್ತಿರುವುದೇ ಬೇರೆ. ಚುನಾವಣೆ ಹತ್ತಿರವಾದಂತೆ ಚಿತ್ರದುರ್ಗ ಜಿಲ್ಲಾ ಬಿಜೆಪಿಯಲ್ಲಿ ತಳಮಳವೂ ತಾರಕಕ್ಕೇರಿದೆ. ಬಿಜೆಪಿಯಿಂದ ಟಿಕೆಟ್ ಪಡೆಯಲು ನಾಮುಂದು ತಾಮುಂದು ಎಂಬಂತಹ ಸ್ಪರ್ಧೆ ಇದ್ದರೂ ಇತ್ತೀಚೆಗೆ ಪಕ್ಷದೊಳಗೆ ನಡೆಯುತ್ತಿರುವ ಮಾರಾಮಾರಿಗಳು ಪಕ್ಷವನ್ನು ಮಕಾಡೆ ಮಲಗಿಸುವತ್ತ ಸಾಗಿವೆ. ಸ್ಥಳೀಯವಾಗಿ ಬಿಜೆಪಿ ಸ್ಥಿತಿ ಅಯೋಮಯವಾಗಿರುವುದಕ್ಕೆ ಪ್ರಧಾನ ಕಾರಣ ಜಿಲ್ಲಾ ಬಿಜೆಪಿ ಅಧ್ಯಕ್ಷ ಜೆ.ಎಂ. ಸುರೇಶ್ ಮತ್ತು ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸಿದ್ದೇಶ್ ಯಾದವ್.


ಲಕ್ಷ್ಮೀಕಾಂತ್

ಜೆ.ಎಂ. ಸುರೇಶ್ ಬಿಜೆಪಿ ಜಿಲ್ಲಾಧ್ಯಕ್ಷನಾದಾಗ ಬಹುತೇಕರು ಈತ ದಾವಣಗೆರೆ ಸಂಸದ, ಭೀಮಸಮುದ್ರದ ಅಡಿಕೆಕುಳ ಜೆ.ಎಂ. ಸಿದ್ದೇಶರ ಸಂಬಂಧಿ ಎಂದೇ ನಂಬಿ ಯಾಮಾರಿದ್ದರು. ಆದರೆ ಇಬ್ಬರ ಹೆಸರಿನ ಮುಂದೆ ಜೆ.ಎಂ. ಇನಿಷಿಯಲ್ ಇರುವುದು ಹಾಗೂ ಇಬ್ಬರೂ ಒಂದೇ ಜಾತಿಯಾಗಿರುವುದು ಕೇವಲ ಕಾಕತಾಳೀಯ. ಅಷ್ಟನ್ನು ಹೊರತುಪಡಿಸಿದರೆ ಜೆ.ಎಂ. ಸುರೇಶ್‌ಗೂ ಸಂಸದ ಜೆ.ಎಂ. ಸಿದ್ದೇಶ್‌ರವರಿಗೂ ಯಾವ ಸಂಬಂಧವಿಲ್ಲ. ಆದರೆ ಕಾಕತಾಳೀಯವಾಗಿ ಸಿಕ್ಕ ಈ ಅವಕಾಶ, ಇಮೇಜುಗಳನ್ನು ಜೆ.ಎಂ. ಸುರೇಶ್ ಚನ್ನಾಗಿ ಬಳಸಿಕೊಂಡ. ಜಿಲ್ಲೆಯಲ್ಲಿ ಬಿಜೆಪಿಗೆ ಅಂಥ ಭದ್ರ ನೆಲೆ ಇಲ್ಲದ್ದರಿಂದ ಪಕ್ಷದ ಚುಕ್ಕಾಣಿ ಹಿಡಿಯುವ ಜಿಲ್ಲಾ ಪದಾಧಿಕಾರಿಗಳಿಗೂ ಅಂತಹ ಕಿಮ್ಮತ್ತೇನೂ ಇರುತ್ತಿರಲಿಲ್ಲ. ಈ ಮಹಾಶಯ ಅಧ್ಯಕ್ಷನಾದ ನಂತರ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೇರಿದ್ದು ಈತನಿಗೊಂದು ವರದಾನವಾಗಿ ಹೋಯಿತು.


ಜೆ.ಎಂ.

ಪಕ್ಷ ಸಂಘಟನೆಯಿಂದ ಏನು ಪ್ರಯೋಜನ ಎಂದು ಭಾವಿಸಿದ ಈತ ಟ್ರಾನ್ಸ್‌ಫರ್ ದಂಧೆಗೆ ಇಳಿದ. ಗಣಿಗಾರಿಕೆಯ ದಂಧೆಯಲ್ಲೂ ಕೈಯಾಡಿಸಿದ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿದ್ದ ವಿಧಾನಸಭೆಯ ಅಭ್ಯರ್ಥಿಗಳಿಂದಲೂ ಸಾಧ್ಯವಾದಷ್ಟು ಪೀಕಿದ.

ಹೊಳಲ್ಕೆರೆ ತಾಲ್ಲೂಕಿನಲ್ಲಿ ಪಕ್ಷ ಸಂಘಟನೆ ಬಲಪಡಿಸಿದ ಎಂಬ ಕಾರಣಕ್ಕೆ ಈತನನ್ನು ಜಿಲ್ಲಾಧ್ಯಕ್ಷನ ಗಾದಿಗೆ ತಂದು ಕೂರಿಸಿದರೂ ಅಂತಹ ಪ್ರಯೋಜನವೇನೂ ಆಗಲಿಲ್ಲ. ಹೊಳಲ್ಕೆರೆಯಲ್ಲಿ ವಿವೇಕಾನಂದ ಕೋ-ಆಪರೇಟಿವ್ ಸೊಸೈಟಿಯನ್ನು . ಮುಂಡಾಮೋಚಿ ಮುಳುಗಿಸಿದ್ದ ಈತ ಜಿಲ್ಲಾ ಮಟ್ಟದಲ್ಲಿ ನಾಯಕನಾಗುತ್ತಿದ್ದಂತೆ ಅಸಲಿ ವರಸೆ ಶುರುಹಚ್ಚಿಕೊಂಡ. ಸಂಘಟನಾತ್ಮಕವಾಗಿ ಅಷ್ಟು ಶಕ್ತನಾಗಿಲ್ಲದ ಬಿಜೆಪಿಗೆ ತಾನೇ ಲೀಡರ್ ಎಂಬಂತೆ ಬಿಂಬಿಸತೊಡಗಿದ. ಕೆಳಹಂತದ ಕಾರ್ಯಕರ್ತರನ್ನು, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸೋತ ಅಭ್ಯರ್ಥಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ತನ್ನಿಷ್ಟ ಬಂದಂತೆ ಸರ್ವಾಧಿಕಾರಿಯಾಗಿ ವರ್ತಿಸತೊಡಗಿದ.

ಬೆಳಗಾವಿಯಲ್ಲಿ ನಡೆದ ಪಕ್ಷದ ಸಭೆಗೆ ತನಗೆ ವಿರುದ್ಧವಾಗಿದ್ದ ಜಿಲ್ಲೆಯ ಹಾಗೂ ತಾಲ್ಲೂಕು ಘಟಕಗಳ ಬೇರೆ ಬೇರೆ ವಿಭಾಗದ ಪದಾಧಿಕಾರಿಗಳು ಹಾಜರಾಗದಂತೆ ಮಾಡಿ ತನ್ನ ಕೈಗೊಂಬೆಯಂತೆ ನಟಿಸಬಲ್ಲ ಪದಾಧಿಕಾರಿಗಳನ್ನಷ್ಟೇ ಕರೆದುಕೊಂಡು ಹೋಗಿದ್ದ. ಇತ್ತೀಚೆಗೆ ಸ್ಥಳೀಯ ಸಂಸ್ಥೆಗಳಿಗೆ ನಾಮನಿರ್ದೇಶನ ಮಾಡುವಾಗ ಹಣ ಪಡೆದಿದ್ದಾನೆ ಎಂಬ ಆರೋಪವೂ ಈಗ ಈತನ ಸುತ್ತ ಹಬ್ಬಿವೆ.

ಇನ್ನು ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸಿದ್ದೇಶ್ ಯಾದವ್ ಜಿಲ್ಲಾಧ್ಯಕ್ಷನಷ್ಟೆ ತಲೆತಿರುಕ. ಈತ ಕಾಲೇಜು ದಿನಗಳಿಂದಲೂ ಎಬಿವಿಪಿಯಲ್ಲಿ ಅಡ್ಡಾಡಿಕೊಂಡಿದ್ದವ ಎಂಬ ಕಾರಣಕ್ಕೆ ಜಿಲ್ಲಾ ಸಂಘಟನಾ ಕಾರ್ಯದರ್ಶಿಯಾಗಿ ನೇಮಕ ಮಾಡಲಾಯಿತು. ಬಿಜೆಪಿ ಪಕ್ಷದ ನಿಯಮಾವಳಿಯ ಪ್ರಕಾರ ಸಂಘಟನಾ ಕಾರ್ಯದರ್ಶಿಗಳಾದವರು ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಳ್ಳಬೇಕು. ಆದರೆ ಈತ ಕಂಡ ಕಂಡ ವೇದಿಕೆಯಲ್ಲಿ ಪುಢಾರಿಯಂತೆ ಪೋಜು ಕೊಡುವುದನ್ನೇ ಖಯಾಲಿ ಮಾಡಿಕೊಂಡ.


ಸಿದ್ದೇಶ್

ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದನಂತರ ಈತನಿಗೆ ವಸೂಲಿವೀರನೆಂಬ ಕುಖ್ಯಾತಿಯೂ ಅಂಟಿಕೊಂಡಿದೆ. ಯಾವ ಸರ್ಕಾರಿ ಕಚೇರಿಗೆ ಹೋದರೂ ಈತನ ಅವಗುಣಗಾನ ನಡೆಯುತ್ತದೆ. "ನನಗೆ ಲಿಂಬಾವಳಿ ಗೊತ್ತು, ಶೋಭಾ ಕರಂದ್ಲಾಜೆ ಗೊತ್ತು" ಎಂದು ರೈಲು ಬಿಡುತ್ತಲೇ ತನ್ನ ಕೆಲಸ ಸಾಧಿಸಿಕೊಳ್ಳುತ್ತಾನೆ. ಕಂಡಕಂಡ ಇಲಾಖೆಗೆ ಹೋಗಿ ತಾನು ನಡೆಸುತ್ತಿರುವ ಎನ್‌ಜಿಓ ಒಂದಕ್ಕೆ ಅನುದಾನ ಕೊಡಿ ಅಂತ ದುಂಬಾಲು ಬೀಳುತ್ತಾನೆ. ಪಕ್ಷಕ್ಕೆ ಒಂದೈದು ಓಟು ಹಾಕಿಸುವ ತಾಕತ್ತು ಇಲ್ಲದಿದ್ದರೂ ದೊಡ್ಡ ನಾಯಕನಂತೆ ಪೋಜು ಕೊಡುತ್ತಾನೆ. ಪಕ್ಷದ ಕಾರ್ಯಕರ್ತರನ್ನು ಒಗ್ಗೂಡಿಸಬೇಕಾದ ಈತ ಒಡೆದಾಳುವ ನೀತಿಯನ್ನು ಚೆನ್ನಾಗಿ ಮೈಗೂಡಿಸಿಕೊಂಡಿದ್ದಾನೆ.

ಮೊನ್ನೆ ಬಿಜೆಪಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಈತ ಭೀಮಸಮುದ್ರದ ಜಿ.ಎಸ್.ಮಂಜುನಾಥ್ ವಿರುದ್ಧ ಹುಂಬತನದಿಂದ, ಹಗುರವಾಗಿ ಮಾತನಾಡಿದ್ದಾನೆ. ಆ ದಿನ ಜಿ.ಎಸ್.ಮಂಜುನಾಥ್ ಸಂಯಮ ಪ್ರದರ್ಶಿಸಿರದಿದ್ದರೆ ಅಂದೇ ಮಾರಾಮಾರಿಯಾಗುತ್ತಿತ್ತು. ಇದಾದ ಎರಡೇ ದಿನದಲ್ಲಿ ದೇವೇಂದ್ರರೆಡ್ಡಿ ಹಾಗೂ ನಿಷ್ಠಾವಂತ ಕಾರ್ಯಕರ್ತರು ಬಿಜೆಪಿ ಕಚೇರಿಗೆ ನುಗ್ಗಿ ಈತನ ಕೊಠಡಿಗೆ ಬೀಗ ಜಡಿದು ನಾಮಫಲಕ ಕೂಡಾ ಕಿತ್ತೆಸೆದಿದ್ದಾರೆ. ಸಿದ್ದೇಶ್ ಯಾದವ್‌ಗೆ ನಾಲ್ಕು ತದುಕಬೇಕೆಂದೇ ಕಚೇರಿಗೆ ಬಂದಿದ್ದ ಕಾರ್ಯಕರ್ತರಿಗೆ ಆ ಹೊತ್ತು ಅವನಿರದಿದ್ದುದರಿಂದ ನಿರಾಶೆಯಾಗಿದೆ. ಸ್ಥಳೀಯ ಸಂಸ್ಥೆಗಳಿಗೆ ಇತ್ತೀಚೆಗೆ ನಿಷ್ಠಾವಂತ ಕಾರ್ಯಕರ್ತರನ್ನು ಕಡೆಗಣಿಸಿ ತಮಗಿಷ್ಟ ಬಂದವರಿಗೆ ಮಣೆಹಾಕಲಾಗಿದೆ ಎಂಬುದೇ ಈ ಆಕ್ರೋಶಕ್ಕೆ ಕಾರಣವಾಗಿತ್ತು.

ಈ ನಡುವೆ ಚಿತ್ರದುರ್ಗ ನಗರದ ವಾಸಿಯಾಗಿರುವ ಸಿದ್ದೇಶ್ ಯಾದವ್ ತನ್ನ ಸಹೋದರನನ್ನು ಹಿರಿಯೂರು ಪುರಸಭೆಗೆ ನಾಮನಿರ್ದೇಶನ ಮಾಡಿರುವುದು ಕೂಡಾ ಅಲ್ಲಿನ ಸ್ಥಳೀಯ ಕಾರ್ಯಕರ್ತರ ಅಸಮಾಧಾನಕ್ಕೆ ಕಾರಣವಾಗಿದೆ. ಅವರೆಲ್ಲಾ ಯಾವತ್ತು ಈತನಿಗೆ ತದುಕುವ ಕಾರ್ಯಕ್ರಮವಿಟ್ಟುಕೊಳ್ಳುತ್ತಾರೋ ನೋಡಬೇಕು.

ಈ ಮಹಾಶಯರಿಬ್ಬರ' ಗುಣ ಸ್ವಭಾವಗಳನ್ನು, ಧೋರಣೆಗಳನ್ನು ಕಾರ್ಯಕರ್ತರಲ್ಲಿ ಇವರ ಬಗ್ಗೆ ಇರುವ ಅಸಮಾಧಾನವನ್ನು ಮನಗಂಡಿರುವ ಪಕ್ಷದ ಹಿರಿಯ ಮುಖಂಡರು ಚುನಾವಣೆಯಲ್ಲಿ ಇವರಿಬ್ಬರನ್ನು ನಾಮಕಾವಸ್ಥೆಗೆ ಇಟ್ಟುಕೊಂಡು ಚುನಾವಣೆಯ ನಂತರ ಗೇಟ್‌ಪಾಸ್ ಕೊಡಲು ನಿರ್ಧರಿಸಿದ್ದಾರಂತೆ. ಪ್ರಸ್ತುತ ಚುನಾವಣೆಯಲ್ಲಿ ಭರ್ಜರಿ ಭೋಜನದ ಕನಸು ಕಂಡಿದ್ದ ಇವರೀಗ ಮೂಲೆಗುಂಪಾಗಿದ್ದಾರೆ.

ಚಿತ್ರದುರ್ಗ ಎಸ್.ಸಿ. ಮೀಸಲು ಲೋಕಸಭಾ ಕ್ಷೇತ್ರವಾಗಿರುವುದರಿಂದ ಅಭ್ಯರ್ಥಿಗಳ ಹೆಸರು ಶಿಫಾರಸ್ಸು ಮಾಡುವಾಗ ಎಸ್.ಸಿ. ಮೋರ್ಚಾವನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ, ಹಾಗಾಗಿ ನಾವು ತಟಸ್ಥವಾಗಿರುತ್ತೇವೆ ಎಂದು ಎಸ್.ಸಿ ಮೋರ್ಚಾ ಹೇಳಿದೆ. ಹಿರಿಯೂರಿನಲ್ಲಿ ವಿಧಾನಸಭೆಯ ಪರಾಜಿತ ಬಿಜೆಪಿ ಅಭ್ಯರ್ಥಿ ಲಕ್ಷ್ಮೀಕಾಂತ್ ಸಮಾಜಕಲ್ಯಾಣ ಸಚಿವ ಸುಧಾಕರ್ ವಿರುದ್ಧ ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿದ್ದು ಬಿಜೆಪಿ ಸರ್ಕಾರದಲ್ಲಿ ಮಂತ್ರಿಯಾಗಿರುವ ಸುಧಾಕರ್ ಬಿಜೆಪಿ ಕಾರ್ಯಕರ್ತರನ್ನು ಹತ್ತಿರಕ್ಕೆ ಸೇರಿಸದಿರುವುದು, ಕಾರ್ಯಕರ್ತರ ಯಾವ ಅಹವಾಲುಗಳನ್ನು ಕೇಳಿಸಿಕೊಳ್ಳದಿರುವುದು, ಎಲ್ಲಾ ಕಡೆ ಕಾಂಗ್ರೆಸ್ಸಿಗರಿಗೆ ಮಣೆ ಹಾಕುತ್ತಿರುವುದು ಕಾರ್ಯಕರ್ತರ ಆಕ್ರೋಶಕ್ಕೆ ಕಾರಣವಾಗಿದೆ. ರಾಜ್ಯ ನಾಯಕರು ಇದನ್ನು ಸರಿಪಡಿಸದಿದ್ದಲ್ಲಿ ಹಿರಿಯೂರು ತಾಲ್ಲೂಕು ಬಿಜೆಪಿ ಲೋಕಸಭಾ ಚುನಾವಣೆಯಲ್ಲಿ ತಟಸ್ಥ ನಿಲುವು ತಳೆಯಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಇನ್ನು ಬಿಜೆಪಿಯಿಂದ ಗೆದ್ದಿರುವ ಚಳ್ಳಕೆರೆಯ ಶಾಸಕ ತಿಪ್ಪೇಸ್ವಾಮಿ, ಹೊಳಲ್ಕೆರೆ ಶಾಸಕ ಎಂ. ಚಂದ್ರಪ್ಪನವರುಗಳಿಗೆ ತಮ್ಮ ಸಾಮರ್ಥ್ಯದಿಂದಲೇ ಗೆದ್ದಿದ್ದೇವೆ ಎಂಬ ಖಾತ್ರಿ ಇರುವುದರಿಂದ ಎಷ್ಟು ಬೇಕೋ ಅಷ್ಟು ಎಂಬಂತೆ ಬಿಜೆಪಿಯಲ್ಲಿದ್ದಾರೆ.

ಸಾರಾಂಶದಲ್ಲಿ ಹೇಳುವುದಾದರೆ ಚಿತ್ರದುರ್ಗ ಬಿಜೆಪಿಯೀಗ ಒಡೆದ ಮನೆ. ಚುನಾವಣೆ ಹತ್ತಿರವಾಗುತ್ತಿರುವ ಈ ಸಂದರ್ಭದಲ್ಲಿ ಬಿಜೆಪಿಗೆ ಅದು ಭಾರಿ ಹೊಡೆತ ಕೊಡುತ್ತದೆ. ಅಂತೆಯೇ, ಈ ಕಿತ್ತಾಟ ಜನರಿಗೆ ಒಂದಿಷ್ಟು ಪುಕ್ಕಟೆ ಮನರಂಜನೆಯನ್ನೂ ನೀಡುತ್ತಿದೆ.


● ವರದಿಗಾರ

ಬಿಜೆಪಿ-ಮೋದಲಿನ ಒಗ್ಗಟ್ಟಿಲ್ಲ

ಅಧ್ವಾಣಿ ಎದುರಿಸುತ್ತಿರುವ ಹಲವಾರು ಸಮಸ್ಯೆಗಳಲ್ಲಿ ಒಗ್ಗಟ್ಟಿನ ವಿಷಯವೂ ಒಂದಾಗಿದೆ. ಕರ್ನಾಟಕದಲ್ಲಿ ಯಡ್ಡಿ-ಅನಂತೂ ಗುಂಪುಗಳು ಹಾವಿರಂತಹ ಬೇವಿರಂತಹ ಮಾಡಿಕೊಂಡಿದ್ದರೆ ಇದೀಗ ದೆಹಲಿಯಲ್ಲಿ ಪಾರ್ಟಿ ಅಧ್ಯಕ್ಷ ರಾಜನಾಥ್ ಸಿಂಗ್ ಹಾಗೂ ಕಾರ್ಯದರ್ಶಿ ಅರುಣ್ ಜೈಟ್ಲಿ ಕಿತ್ತಾಡಿಕೊಂಡಿದ್ದಾರೆ. ಉತ್ತರ ಪ್ರದೇಶದಲ್ಲಿ ಮುಖ್ಯ ಲೀಡರ್ ಕಲ್ಯಾಣ್ ಸಿಂಗ್ ಪಾರ್ಟಿ ಬಿಟ್ಟು ಹೋಗಿದ್ದಾರೆ. ಉಮಾಭಾರತಿ ಬಿಜೆಪಿಯ ವಿರುದ್ಧವೇ ಕತ್ತಿ




ಮಸೆಯ ತೊಡಗಿ ವರ್ಷಗಳೇ ಆಗಿವೆ. ಇದೆಲ್ಲಕ್ಕಿಂತ ಮುಖ್ಯವಾಗಿ ನಿನ್ನೆ ಮೊನ್ನೆಯತನಕ ವಾಜಪೇಯಿಗೇ ಅಧ್ವಾಣಿ ತಲೆಕಂಡರಾಗುತ್ತಿರಲಿಲ್ಲ. ಈಗ ತೀರಾ ನಿತ್ರಾಣಗೊಂಡಿರುವ ಒಂದೇ ಕಾರಣದಿಂದ ವಾಜಪೇಯಿ ಅಧ್ವಾಣಿಯನ್ನು ಬಿಜೆಪಿಯ ಪ್ರಧಾನಿ ಅಭ್ಯರ್ಥಿ ಎಂದು ಒಪ್ಪಿಕೊಳ್ಳಬೇಕಾಗಿದೆ. ಇಲ್ಲದಿದ್ದರೆ ಆ ರಸಿಕ ಬ್ರಹ್ಮಚಾರಿಯೂ ರೇಸಿನಲ್ಲಿರುತ್ತಿದ್ದರು. ಈ ಅಧ್ವಾಣಿಯ ಕಷ್ಟಗಳು ಇಷ್ಟೇ ಅಲ್ಲ. ಈತನಿಗೆ ಈಗಾಗಲೇ 81 ವರ್ಷ. ಹೆಸರಿಗೆ ಲೋಹಪುರುಷ ಅಂತಿದ್ದರೂ ಒಳಗಿನ ಆರೋಗ್ಯ ಅಷ್ಟೇನೂ ಚೆನ್ನಾಗಿಲ್ಲ. ಇನ್ನೂ ಮೇಲಾಗಿ ಅಧ್ವಾಣಿಗೆ ಬದಲಾಗಿ ನರೇಂದ್ರ ಮೋದಿ ಪ್ರಧಾನಿಯಾಗಲು ಲಾಯಕ್ಕೆಂದು ಅಂಬಾನಿಗಳು ಮತ್ತು ಇತರ ಉದ್ಯಮಿಗಳು ಒಮ್ಮೆ ಅಪ್ಪಣೆ ಕೊಡಿಸಿದ್ದರು. ಆ ಸಾಧ್ಯತೆಯನ್ನು ಹೇಗೊ ತುಳಿದು ಹಾಕಿರುವ ಅಧ್ವಾಣಿಗೆ ಐದು ವರ್ಷಗಳ ಹಿಂದೆ ಇದ್ದಷ್ಟು ಅನುಕೂಲಕರ ಪರಿಸ್ಥಿತಿ ಈಗಿಲ್ಲ.



ಇದೆಲ್ಲಕ್ಕಿಂತ ಮುಖ್ಯವಾದ ವಿಚಾರ ಏನೆಂದರೆ ಬಿಜೆಪಿಯನ್ನು ಇದುವರೆಗೂ ಬೆಂಬಲಿಸುತ್ತಾ ಬಂದಿದ್ದ ಅನೇಕ ಜಾತಿವರ್ಗಗಳ ನಡುವೆಯೇ ಈಗ ಒಗ್ಗಟ್ಟಿಲ್ಲ. ಬಿಜೆಪಿ ಮೈತ್ರಿಕೂಟದಲ್ಲಿದ್ದ ಮಿತ್ರಪಕ್ಷಗಳೂ ಒಗ್ಗಟ್ಟಿನಿಂದಿಲ್ಲ.

ಇದೆಲ್ಲವನ್ನೂ ಮೀರಿ ನಿಂತು ಅಧ್ವಾಣಿ ಪ್ರಧಾನಿಯಾಗುತ್ತಾರಾ ಅಂದರೆ.... ಅಧ್ವಾಣಿ ಬಗ್ಗೆ ಮತದಾರರಲ್ಲೂ ಒಗ್ಗಟ್ಟು ಕಾಣುತ್ತಿಲ್ಲ. ■



ಅಧ್ವಾಣಿ ಭಗ್ನಕನಸು

ವಿಶ್ವ ಹಿಂದೂ ಪರಿಷತ್, ಶ್ರೀರಾಮ ಸೇನೆಗಳೇ ಸ್ವತಃ ಭಯೋತ್ಪಾದಕ ದುಷ್ಕೃತ್ಯ ನಡೆಸಿ ದೇಶದ ಜನರೆದುರು ಬೆತ್ತಲಾಗಿವೆ. ಟೆರರಿಸಂ ಕುರಿತು ಮಾತನಾಡುವ ನೈತಿಕತೆಯನ್ನೇ ಅಧ್ವಾಣಿ ಕಳೆದುಕೊಂಡಿದ್ದಾರೆ. ಇದೆಲ್ಲದರಿಂದ ತಲೆ ಕೆಟ್ಟಂತಾಗಿರುವ ಬಿಜೆಪಿ ಈಗ ಇಂಡಿಯಾ ಶೈನಿಂಗ್', ಟೈರರಿಸಂ, ಪಾಕಿಸ್ತಾನ ಮುಂತಾದ ಅಜೆಂಡಾ ತ್ಯಜಿಸಿ 'ಅಧ್ವಾಣಿಯನ್ನು ಪ್ರಧಾನಿ ಮಾಡಿ' ಎಂದು ಹೊರಟಿದ್ದಾರೆ. ಆದರೆ, 'ಯಾಕೆ?' ಅಂತ ಕೇಳುವ ಜನರಿಗೆ ಸರಿಯಾದ ಉತ್ತರವೂ ಬಿಜೆಪಿಗಳ ಹತ್ತಿರ ಈಗಿಲ್ಲ.

■ ಪಾರ್ವತೀಶ

ಎಲ್.ಕೆ. ಅಧ್ವಾಣಿ ಹತಾಶೆಗೊಂಡಿದ್ದಾರೆ.

ಇಂಡಿಯಾ ದೇಶದ ಪ್ರಧಾನಿಯಾಗಬೇಕೆಂಬ ಅವರ ಆಸೆ ಈಡೇರುವ ಲಕ್ಷಣಗಳು ಈ ಬಾರಿಯೂ ಕಾಣುತ್ತಿಲ್ಲ. 543 ಸದಸ್ಯ ಬಲದ ಸಂಸತ್‌ನಲ್ಲಿ ಸರಳ ಬಹುಮತ ಪಡೆಯಲು ಬೇಕಾದ ಸಂಖ್ಯೆ 272. ಆದರೆ ಕಾಂಗ್ರೆಸ್ ಅಥವಾ ಬಿಜೆಪಿ ಏಕಾಂಗಿಯಾಗಿ ಆ ಗುರಿ ತಲುಪಲಾರವೆಂಬುದು ಅವರಿಗೇ ಗೊತ್ತಾಗಿದೆ. ಈ ಪಕ್ಷಗಳು ಗೆಲ್ಲಬಹುದಾದ ಸೀಟ್‌ಗಳೊಂದಿಗೆ ಮಿತ್ರ ಪಕ್ಷಗಳ ಬಲವನ್ನು ಆಧರಿಸಿ ಸರ್ಕಾರ ರಚಿಸಲು ಇವರು ಪ್ರಯತ್ನಿಸಬೇಕು.

ಬಿಜೆಪಿ ಅಥವಾ ಅಧ್ವಾಣಿಗೆ ಸಮಸ್ಯೆ ಬರುತ್ತಿರುವುದೇ ಇಲ್ಲಿ. ಬಿಜೆಪಿ ನಾಯಕತ್ವದ ಎನ್‌ಡಿಎ ಈಗ ಮುರಿದ ಮನೆ. ಒಂದು ಕಾಲದಲ್ಲಿ ಇಪ್ಪತ್ತೆರಡು ಮಿತ್ರ ಪಕ್ಷಗಳಿದ್ದ ಎನ್‌ಡಿಎಯೊಳಗೆ ಈಗ ಉಳಿದುಕೊಂಡಿರುವುದು ಕೇವಲ ಒಂಭತ್ತು ಪ್ರಾದೇಶಿಕ ಪಕ್ಷಗಳು. ಮತ್ತೆ ಅಲ್ಲೂ ಈಗ ಹೊಡೆತ ಬಿದ್ದಿದೆ. ಒರಿಸ್ಸಾದ ಬಿಜು ಜನತಾದಳ ಮತ್ತು ಬಿಜೆಪಿ ಸಂಬಂಧ ಕಳೆದ ವಾರ ಮುರಿದುಬಿದ್ದಿದೆ.

ಈಗ ಇಡೀ ಭಾರತದ ಚುನಾವಣಾ ನಕ್ಷೆಯತ್ತ ಒಮ್ಮೆ ಕಣ್ಣು ಹಾಯಿಸಿದರೆ ಅಧ್ವಾಣಿಯ ಹತಾಶೆಗೆ ಕಾರಣಗಳು ಸಿಗುತ್ತವೆ. ಎನ್‌ಡಿಎ ಮೈತ್ರಿಕೂಟ ಅಧ್ವಾಣಿಯ ಕಣ್ಣೆದುರೇ ಕರಗಿಹೋಗುತ್ತಿದೆ. ಜೊತೆಗೆ ಬಿಜೆಪಿಯೊಳಗಿನ ಆಂತರಿಕ ಕಚ್ಚಾಟಗಳೂ ಪಕ್ಷಕ್ಕೆ ಸಾಕಷ್ಟು ಹಾನಿ ಮಾಡುತ್ತಿವೆ. ಈ ತಕ್ಷಣದಲ್ಲಿ ಬಿಜೆಪಿ ಮೈತ್ರಿಕೂಟದಲ್ಲಿರುವವರೆಂದರೆ ಬಿಹಾರದ ನಿತೀಶ್‌ಕುಮಾರ್‌ರ ಜೆಡಿಯು, ಪಂಜಾಬ್‌ನ ಅಕಾಲಿದಳ, ಮಹಾರಾಷ್ಟ್ರದ ಶಿವಸೇನೆ, ಹರಿಯಾಣದ ಐಎನ್‌ಎಲ್‌ಡಿ, ಉತ್ತರ ಪ್ರದೇಶದ ರಾಷ್ಟ್ರೀಯ ಲೋಕದಳ ಅಸ್ಸಾಂ ಗಣ ಪರಿಷತ್‌ಗಳಂತ ಪುಟ್ಟ ಪಕ್ಷಗಳು. ಇದರಲ್ಲಿ ಎರಡಂಕಿಯ ಸೀಟುಗಳನ್ನು ಗೆಲ್ಲಬಲ್ಲ ಪಕ್ಷಗಳು ಕೆಲವು ಮಾತ್ರ. ಉಳಿದ ಪಕ್ಷಗಳ ಸಾಮರ್ಥ್ಯ ಎರಡು, ಮೂರು, ಆರು ಸೀಟು-ಹೀಗಿರುತ್ತದೆ. ಕಳೆದ ನಾಲ್ಕು ವರ್ಷಗಳಲ್ಲಿ ಅಂದರೆ ಅಧ್ವಾಣಿ ಬಿಜೆಪಿ ನಾಯಕರಾಗಿ ಎಮರ್ಜ್ ಆಗುತ್ತಿದ್ದಂತೆ ಅಕ್ಕಪಕ್ಕ ಇದ್ದ ಮಿತ್ರಪಕ್ಷಗಳೆಲ್ಲಾ ಟಾಟಾ ಹೇಳಿಬಿಟ್ಟಿದ್ದಾರೆ. ದಕ್ಷಿಣ ಭಾರತದಲ್ಲಿ ಬಿಜೆಪಿಗೆ ಊರುಗೋಲಾಗಿದ್ದ ತೆಲುಗು ದೇಶಂನ ನಾಯ್ಡು ಹಾಗೂ ಎಐಡಿಎಂಕೆಯ ಜಯಲಲಿತಾ ಈಗ ಕಮ್ಯುನಿಸ್ಟರೊಂದಿಗೆ ಸೇರಿಕೊಂಡು ಬಿಟ್ಟಿದ್ದಾರೆ. ಇನ್ನು ಕರ್ನಾಟಕದಲ್ಲಿ ಬಿಜೆಪಿಯ ಏಕೈಕ ಮಿತ್ರಪಕ್ಷವಾಗಿದ್ದ ಜೆಡಿಯುವನ್ನು ಬಿಜೆಪಿಗಳೇ ಸೊಂಟ ಮುರಿದು ಕೂರಿಸಿದ್ದಾರೆ. ಒರಿಸ್ಸಾದಲ್ಲಿ ಮಿತ್ರಪಕ್ಷವಾಗಿದ್ದ ನವೀನ್ ಪಾಟ್ನಾಯಕ್‌ರ ಬಿಜೆಡಿ ಈಗ ತೃತೀಯ ರಂಗದಲ್ಲಿ ಕಾಣಿಸಿಕೊಳ್ಳಲಿದೆ.

ಹೀಗೆ ಒಂದು ಕಾಲದ ಮಿತ್ರರೆಲ್ಲಾ ಹೋಗಿ ಶತ್ರು ಪಾಳಯ ಸೇರಿಕೊಂಡಿರುವಾಗ ಅಧ್ವಾಣಿಯನ್ನು ಪ್ರಧಾನಿ ಕುರ್ಚಿಗೆ ತಂದು ಕೂರಿಸುವುದು ಯಾರು?

ಹಾಗೆ ನೋಡಿದರೆ ಬಿಜೆಪಿಗೆ ಈಗ ಸ್ವಂತ ಬಲ ಅಂತಿರುವುದೇ ಗುಜರಾತ್, ಮಧ್ಯಪ್ರದೇಶ, ಹಿಮಾಚಲ ಪ್ರದೇಶ ಮತ್ತು ಕರ್ನಾಟಕದಲ್ಲಿ. 2004ರ ಎಲೆಕ್ಷನ್‌ನಲ್ಲಿ ಬಿಜೆಪಿ ಈ ರಾಜ್ಯಗಳಲ್ಲಿ ಗಣನೀಯ ಸಾಧನೆ ತೋರಿಸಿತ್ತು. ಮಧ್ಯಪ್ರದೇಶದಲ್ಲಿ 19, ಛತ್ತೀಸ್‌ಗಡದ 11 ರಲ್ಲಿ 8, ಕರ್ನಾಟಕದ 28 ರಲ್ಲಿ 16, ರಾಜಾಸ್ಥಾನದ 25 ರಲ್ಲಿ 19, ಗುಜರಾತಿನ 26 ರಲ್ಲಿ 13 ಸೀಟ್‌ಗಳು ಬಿಜೆಪಿಗೆ ದಕ್ಕಿದ್ದವು. ಆದರೆ ಈ ಬಾರಿ ಇಲ್ಲೆಲ್ಲಾ ಅದೇ ಮಟ್ಟದ ಸಾಧನೆ ಪುನರಾವರ್ತನೆಯಾಗುವ ಬಗ್ಗೆ ಬಿಜೆಪಿಗೇ ನಂಬಿಕೆಯಿಲ್ಲ. ಅಷ್ಟೇ ಅಲ್ಲ; 80 ಲೋಕಸಭಾ ಸ್ಥಾನಗಳಿರುವ ಉತ್ತರ ಪ್ರದೇಶದಲ್ಲಿ ಕಳೆದ ಬಾರಿ ಬಿಜೆಪಿ ಗೆದ್ದಿದ್ದೇ ಕೇವಲ 8 ಸ್ಥಾನ. ಈಗ ಅಲ್ಲೇನಿದ್ದರೂ ಮಾಯಾವತಿ, ಮುಲಾಯಂ, ಅಜಿತ್ ಸಿಂಗ್ ಮತ್ತ ಕಾಂಗ್ರೆಸ್‌ನದ್ದೇ ಆರ್ಭಟ. ಬಿಜೆಪಿ ಅಲ್ಲಿ ಸಂಪೂರ್ಣ ಕರಗಿಹೋಗಿದೆ.

ಅಧ್ವಾಣಿಗೆ ಅಜೆಂಡಾ ಸಮಸ್ಯೆ

ಬಿಜೆಪಿಯ ಡಿಎನ್‌ಎ ಒಳಗೇ ಸೇರಿಹೋಗಿರುವ ಟೆರರಿಸಂ ವಿಚಾರವನ್ನು ಈ ಬಾರಿ ಕಾಂಗ್ರೆಸ್ ಹೈಜಾಕ್ ಮಾಡಿಬಿಟ್ಟಿದೆ. 2004 ರಲ್ಲಿ 'ಇಂಡಿಯಾ ಶೈನಿಂಗ್' ಎಂದು ಬಿಜೆಪಿ ಹೊರಟಿತಾದರೂ ಬಡ ಭಾರತೀಯರು ಅದನ್ನು ನಂಬಿರಲಿಲ್ಲ ಅದರಿಂದ ಬಿಜೆಪಿಯೂ ಶೈನ್ ಆಗದೆ ಮಂಕಾಯಿತು. ಅಲ್ಲಿಂದಾಚೆಗೆ ಅಧ್ವಾಣಿ ಮುಂಚೂಣಿಗೆ ಬಂದರೇನೊ ಹೌದು. ಆದರೆ ಬಿಜೆಪಿ ಬಲ ಪಡೆಯಲಿಲ್ಲ, ಇಂಡಿಯಾದೆಲ್ಲೆಡೆ ಎಲ್ಲೆಲ್ಲಿ ಕಾಂಗ್ರೆಸ್ ದುರ್ಬಲಗೊಳ್ಳುತ್ತಾ ಬಂತೊ ಅಂತಲ್ಲಿ ಆ ಖಾಲಿ ಜಾಗವನ್ನು ತುಂಬಿದ್ದು ಬಿಜೆಪಿ ಅಲ್ಲ, ಬದಲಾಗಿ ಪ್ರಾದೇಶಿಕ ಪಕ್ಷಗಳು. ಅಂತಾ ಪಕ್ಷಗಳು ಈಗ ಎಷ್ಟು ಬಲಿತಿವೆಯೆಂದರೆ ಮುಂದಿನ ಸರ್ಕಾರ ಯಾರದ್ದು ಮತ್ತು ಪ್ರಧಾನಿ ಯಾರಾಗಬೇಕೆಂದು ನಿರ್ಧರಿಸಲಿರುವವರು ಇವೇ ಪ್ರಾದೇಶಿಕ ಪಕ್ಷಗಳು. ಇವರಲ್ಲಿ ಬಹುತೇಕರಿಗೆ ಬಿಜೆಪಿಯ ಕೋಮುವಾದಿ, ಬ್ರಾಹ್ಮಣಶಾಹಿ ರಾಜಕಾರಣ ಬೇಕಿಲ್ಲ, ಹಾಗಾಗಿ ಬಹುತೇಕ ಪ್ರಾದೇಶಿಕ ಪಕ್ಷಗಳು ಒಂದೋ ತೃತೀಯ ರಂಗದಲ್ಲಿವೆ ಅಥವಾ ಕಾಂಗ್ರೆಸ್ ನಾಯಕತ್ವದ ಯುಪಿಎನಲ್ಲಿವೆ.

ಈ ಪಕ್ಷಗಳ ಬೆಂಬಲ ಸಿಗದೆ ಅಧ್ವಾಣಿ ಪ್ರಧಾನಿಯಾಗುವುದಿಲ್ಲ ಮತ್ತು ಈ ಪಕ್ಷಗಳು ಅಧ್ವಾಣಿಯನ್ನಾಗಲಿ, ಬಿಜೆಪಿಯನ್ನಾಗಲಿ ಒಪ್ಪುವುದು ಅಸಾಧ್ಯ.

ಟೆರರಿಸಂ ಕುರಿತಂತೆ ಬಿಜೆಪಿ ಆಡಬಹುದಾದ ವೀರಾವೇಶದ ಡೈಲಾಗ್‌ಗಳನ್ನೆಲ್ಲಾ ಈಗ ಕಾಂಗ್ರೆಸ್ಸೇ ಆಡುತ್ತಿವೆ. ಮುಂಬೈ ದಾಳಿ, ಆಂತರಿಕ ಭದ್ರತೆಯ ವಿಚಾರಗಳನ್ನು ಬಿಜೆಪಿಗಿಂತ ಮೊದಲೇ ಕಾಂಗ್ರೆಸ್ ಬಳಸಿಕೊಂಡಿದೆ ಇದರೊಂದಿಗೆ ಈಗ ಬಿಜೆಪಿಯ ಅಂಗಸಂಸ್ಥೆಗಳಾದ ಭಜರಂಗದಳ, ವಿಶ್ವ ಹಿಂದೂ ಪರಿಷತ್, ಶ್ರೀರಾಮ ಸೇನೆಗಳೇ ಸ್ವತಃ ಭಯೋತ್ಪಾದಕ ದುಷ್ಕೃತ್ಯ ನಡೆಸಿ ದೇಶದ

▶▶▶12

ಕರ್ನಾಟಕದಲ್ಲಿ ಬಿಜೆಪಿ 22 ಸ್ಥಾನ ಗೆಲ್ಲಲಿದೆಯಾ!

ಮುಖ್ಯಮಂತ್ರಿ ಯಡಿಯೂರಪ್ಪ ಈ ಮಾತನ್ನು ಪದೇಪದೇ ಹೇಳುತ್ತಿದ್ದಾರೆ. ರಾಜ್ಯದ ಒಟ್ಟು 28 ಲೋಕಸಭಾ ಸ್ಥಾನಗಳ ಪೈಕಿ ಬಿಜೆಪಿ ಕಳೆದ ಬಾರಿ 16 ಸ್ಥಾನ ಗದ್ದಿತ್ತು, ಈ ಬಾರಿ ಆ 16 ರೊಂದಿಗೆ ಇನ್ನೂ 6 ಹೆಚ್ಚು ಸ್ಥಾನ ಗೆಲ್ಲುವಂತ ದೊಡ್ಡ ಸಾಧನೆಗಳೇನೂ ಬಿಜೆಪಿ ರಾಜ್ಯ ಸರ್ಕಾರದಿಂದ ಆಗಿಲ್ಲ ಎಂಬುದು ವಾಸ್ತವ. ಇದರೊಂದಿಗೆ ಬಹುತೇಕ ಕ್ಷೇತ್ರಗಳಲ್ಲಿ ಬಿಜೆಪಿಗೆ



ಬಲಿಷ್ಠ ಅಭ್ಯರ್ಥಿಗಳೇ ಇಲ್ಲ. ಉದಾಹರಣೆಗೆ ನೋಡಿ.

ಬೆಂಗಳೂರು ಗ್ರಾಮಾಂತರ (ಹಿಂದಿನ ಕನಕಪುರ) ಕ್ಷೇತ್ರದಿಂದ ಯೋಗೀಶ್ವರ್ ಅಥವಾ ಕನಕಪುರದ ನಾರಾಯಣ ಗೌಡ ಬಿಜೆಪಿ ಅಭ್ಯರ್ಥಿಯಾಗಲಿದ್ದಾರೆ. ಇವರಿಬ್ಬರ ಪೈಕಿ ಯೋಗೀಶ್ವರ್‌ಗೆ ಗೆಲ್ಲುವ ಛಲಕ್ಕಿಂತ ಎಲೆಕ್ಷನ್ ಖರ್ಚಿಗೆ ಪಕ್ಷ ಕೊಡುವ ಹಣದಲ್ಲಿ ಒಂದಿಷ್ಟು ಕದ್ದು ತನ್ನ ಸಾಲ ತೀರಿಸಿಕೊಳ್ಳಬೇಕೆಂಬ ಒಳ ಲೆಕ್ಕಾಚಾರವಿದೆ. ಈತನ ಬದಲಾಗಿ ಒಂದು ವೇಳೆ ನಾರಾಯಣಗೌಡ ಅಭ್ಯರ್ಥಿಯಾದರೆ ಬಿಜೆಪಿಗೆ ಇಲ್ಲಿ ಸೋಲು ಖಚಿತ ಎಂದು ಈಗಲೇ ಹೇಳಿಬಿಡಬಹುದು. ಏಕೆಂದರೆ ಈ ನಾರಾಯಣಗೌಡ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮಟ್ಟದ ಲೋಕಲ್ ರಾಜಕಾರಣಿಯೇ



ವಿನಃ ಪಾರ್ಲಿಮೆಂಟಿಗೆ ನಿಲ್ಲಬಲ್ಲ ತಾಕತ್ತಿರುವವನಲ್ಲ.

ಬೆಂಗಳೂರು ಸೆಂಟ್ರಲ್‌ನಲ್ಲಿ ಪಿ.ಸಿ. ಮೋಹನ್ ಅಭ್ಯರ್ಥಿ. ಆದರೆ ಕಾಂಗ್ರೆಸ್ಸಿನ ಜಾಫರ್ ಷರೀಫರೆದುರು ಈತ ಲೆಕ್ಕಕ್ಕೆ ಬರುವುದಿಲ್ಲ. ಇನ್ನು ಬೆಂಗಳೂರು ಉತ್ತರದಿಂದ ಮಧ್ಯಮ ಲಿಂಗಿರಾಮಚಂದ್ರಗೌಡ ನಿಲ್ಲಲಿದ್ದಾರೆಂಬ ರೂಮರ್ ಇದೆ. ಇದು ಈಗಾಗಲೇ ನಗೆಪಾಟಲಾಗಿದೆ.

ಇನ್ನು ಕೋಲಾರ, ಚಿಕ್ಕಬಳ್ಳಾಪುರಕ್ಕೆ ನಿಲ್ಲಿಸಲು ಬಿಜೆಪಿಗೆ ಸಮರ್ಥ ಕ್ಯಾಂಡಿಡೇಟ್‌ಗಳೇ ಇಲ್ಲ. ಮಂಡ್ಯದಿಂದ ಸ್ಪರ್ಧಿಸಲಿರುವ ಡಿ.ಸಿ. ತಮ್ಮಣ್ಣ ಪರೋಕ್ಷವಾಗಿ ದೇವೇಗೌಡರ ಡಮ್ಮಿ ಅಭ್ಯರ್ಥಿ. ಆತ ಬಿಜೆಪಿಯಿಂದ ನಿಂತರೂ ಜೆಡಿಎಸ್ ಗೆಲುವಿಗೇ ಸಹಕರಿಸುವ ಡೀಲ್ ಒಂದು ರಕ್ತಸಂಬಂಧಿಗಳಾದ




ದೇವೇಗೌಡ ಮತ್ತು ತಮ್ಮಣ್ಣ ನಡುವೆ ಈಗಾಗಲೇ ಕುದುರಿದೆ. ಮೈಸೂರಿನಲ್ಲಿ ಮಾಜಿ ಸಂಸದ ವಿಜಯ್ ಶಂಕರ್ ಪರವಾಗಿಲ್ಲ. ಆದರೆ ಚಾಮರಾಜನಗರದ ಅಭ್ಯರ್ಥಿ ಕೃಷ್ಣಮೂರ್ತಿ ಆಟಕ್ಕುಂಟು ಲೆಕ್ಕಕ್ಕಿಲ್ಲ.

ತುಮಕೂರಿನಲ್ಲಿ ಮಲ್ಲಿಕಾರ್ಜುನಯ್ಯ ಮುನಿಸಿಕೊಂಡಿದ್ದಾರೆ. ಉಡುಪಿ ಕ್ಷೇತ್ರದ ಬಿ.ಬಿ. ಶಿವಪ್ಪ ದೂರ ಸರಿದಿದ್ದಾರೆ. ಬಳ್ಳಾರಿಯಲ್ಲಿ ಜನ ರೆಡ್ಡಿಗಳ ವಿರುದ್ಧ ತಿರುಗಿಬಿದ್ದಿದ್ದಾರೆ. ಮುಂಬೈ ಕರ್ನಾಟಕದಲ್ಲಿ ಬಸನಗೌಡ ಪಾಟೀಲ್ ಯತ್ನಾಳ್ ಯಡ್ಡಿ ವಿರುದ್ಧ ಸಮರ ಸಾರಿದ್ದಾರೆ. ಇನ್ನಿತರ ನಾಲ್ಕಾರು ಜಿಲ್ಲೆಗಳಲ್ಲಿ ಬಿಜೆಪಿ ಇಬ್ಭಾಗಗೊಂಡಿದೆ. 2004 ರಲ್ಲಿ ಪರಿಸ್ಥಿತಿ ಇಷ್ಟು ಅಧ್ವಾನವಾಗಿರಲಿಲ್ಲ.

ವಸ್ತುಸ್ಥಿತಿ ಹೀಗಿರುವಾಗ ಯಡಿಯೂರಪ್ಪ ಅದು ಹೇಗೆ 22 ಸ್ಥಾನ ಗೆಲ್ಲುತ್ತೇನೆ ಎನ್ನುತ್ತಿದ್ದಾರೋ! ■

ಬಿಜೆಪಿ ಪಾಲಿಗೆ ಭಸ್ಮಾಸುರ



ಧಿಕಾರದ ದರ್ಪ ಮತ್ತು 'ಸನ್ ಸ್ಟ್ರೋಕ್'ನಿಂದ ತ್ತಿರುವ ಯಡಿಯೂರಪ್ಪನ ವಿರುದ್ಧದ 'ಬಜೆಪಿ ಯಡ್ಡಿಯನ್ನು ಇಳಿಸಿ' ಎಂಬ ಹೋರಾಟದ ವಾಳತ್ವವನ್ನು ಅವರ ಲಿಂಗಾಯತ ಸಮುದಾಯ ಆದ ಹಾಲಿ ಸಂಸದ ಬಸನಗೌಡ ಯತ್ನಾಳ, ಮಲ್ಲಿಕಾರ್ಜುನಯ್ಯ ಮತ್ತು ಬಜೆಪಿಯನ್ನು ಆರಂಭದ ಲ್ಲಿ ಪೋಷಿಸಿದ ಬಿ.ಬಿ. ಶಿವಪ್ಪ ವಹಿಸಿಕೊಂಡಿದ್ದರೂ ಳವಳಿಯ ಅಸಲಿ ಸೂತ್ರಧಾರ ಯಡ್ಡಿಯ ಆಲ್ ಶತ್ರು ಸಂಸದ ಅನಂತಕುಮಾರ್ ಎಂಬುದು ಗುಟ್ಟಾಗಿ ಉಳಿದಿಲ್ಲ.

ಮೊದಲಿನಿಂದಲೂ ತೆರೆಮರೆಯಲ್ಲಿ ಕೊಂಡು ಬಂದಿರುವ ಯಡ್ಡಿ- ನಡುವಿನ ಕಾಳಗದ ಹೊಸ ಮತ್ತು ಬಹಿರಂಗ ಯವಿದು. ಅದರಲ್ಲೂ ಈಗ ಲೋಕಸಭಾ ಚುನಾ ಣ ಎದುರಾಗಿರುವ ಸಂದರ್ಭದಲ್ಲಿ ಇವರಿಬ್ಬರಿಗೂ 'ಮಾಡು ಇಲ್ಲವೇ ಮಡಿ' ಎಂಬಂತಾಗಿದೆ. ಹೀಗಾಗಿ ತೆ ಯಡ್ಡಿಯ ಅಧಿಕಾರದ ದರ್ಪವನ್ನು ಮುರಿದು ನ್ನು ಮತ್ತೆ ತನ್ನ ಹತೋಟಿಗೆ ತೆಗೆದುಕೊಳ್ಳಲು ಸರ್ವಪ್ರಯತ್ನ ಮಾಡುತ್ತಿದ್ದರೆ, ಇನ್ನೊಂದೆಡೆ ಗಲೇ ಅನಂತ್ ಬೆನ್ನೆಲುಬನ್ನು ಮುರಿದು ಅವರನ್ನು ಯಕರನ್ನಾಗಿ ಮಾಡಿರುವ ಯಡ್ಡಿ ಈ ಚುನಾವಣೆ ಅವರನ್ನು 'ನೆಲಸಮ' ಮಾಡಲೇಬೇಕೆಂದು ಪಣ ತಿದೆ.

■ [illegible]

ಗೆ ಬಜೆಪಿಯ ಈ ಇಬ್ಬರು ನಾಯಕರ ನಡುವಿನ ಕಚ್ಚಾಟ ದಿನದಿಂದ ದಿನಕ್ಕೆ ರಂಗೇರುತ್ತಿದೆ. ರಾಜ್ಯದಲ್ಲಿ ಪಕ್ಷವನ್ನು ತನ್ನ ಸುಪರ್ದಿಗೆ ತೆಗೆದುಕೊಂಡಿರುವ ಯಡ್ಡಿ ರಾಷ್ಟ್ರಮಟ್ಟದಲ್ಲೂ ತನ್ನ ವರ್ಚಸ್ಸನ್ನು ಸಾಬೀತುಪಡಿಸಿ ಅನಂತ್ ಗ್ಯಾಂಗನ್ನು ಮಟಾಶ್ ಮಾಡಲು ಹೊರಟಿದ್ದಾರೆ. ಅಕಸ್ಮಾತ್ ಯಡ್ಡಿ ಗ್ಯಾಂಗ್ ದೆಹಲಿಯಲ್ಲೂ ತಳವೂರಿಬಿಟ್ಟರೆ ತನ್ನ ಕತೆ ಮುಗಿದಂತೆಯೇ ಎಂದು ಅರಿತಿರುವ ಅನಂತು ಚಿಂತಾಕ್ರಾಂತರಾಗಿದ್ದಾರೆ. ಯಡ್ಡಿಯ ಅಧಿಕಾರ ದಾಹ, ಪುತ್ರ ವ್ಯಾಮೋಹ ಮತ್ತು ಸರ್ವಾಧಿಕಾರಿ ಮನೋಭಾವದಿಂದಾಗಿ ಈಗ ಚೆಡ್ಡಿ ಕಾರ್ಯಕರ್ತರಲ್ಲೇ ಅಸಮಾಧಾನ ಮೂಡಿರುವುದರಿಂದ ಅದನ್ನೇ ಉಪಯೋಗಿಸಿಕೊಂಡು ಯಡ್ಡಿಗೆ ತಕ್ಕ ಪಾಠ ಕಲಿಸಲು ಅನಂತು ಗ್ಯಾಂಗ್ ಸಿದ್ಧವಾಗಿದೆ. ಅದರ ಪ್ರಥಮ ಹೆಜ್ಜೆಯೇ 'ಬಜೆಪಿ ಉಳಿಸಿ, ಯಡ್ಡಿ ಇಳಿಸಿ' ಎಂಬ ಆಗ್ರಹ!




"ಲಿಂಗಾಯತರಿಗೆ ಅನ್ಯಾಯವಾಗಿದೆ" ಎಂದು ಕಣ್ಣೀರಿಡುತ್ತಲೇ ಮುಖ್ಯಮಂತ್ರಿ ಗದ್ದುಗೆಯನ್ನು ಏರಿದ ಯಡ್ಡಿ ವಿರುದ್ಧ ಈಗ ಅದೇ ಲಿಂಗಾಯತ ಸಮುದಾಯದ ನಾಯಕರುಗಳೇ ಬಂಡಾಯದ ಬಾವುಟ ಹಾರಿಸಿರುವುದು ಖುಶ್ ಮೋಜಾಗಿದೆ. ಅಷ್ಟೇ ಅಲ್ಲ, ಮೊನ್ನೆ ಮೊನ್ನೆ ತನಕ ಬಜೆಪಿಯಲ್ಲಿ ಅನಭಿಷಕ್ತ ದೊರೆಯಂತೆ ರಾರಾಜಿಸುತ್ತಿದ್ದ ಯಡ್ಡಿಯಿಂದಾಗಿ ಲಿಂಗಾಯತರಿಗೆ ಅನ್ಯಾಯವಾಗಿದೆ ಎಂದು ಅದೇ ಲಿಂಗಾಯತ ಜನಾಂಗದ ನಾಯಕರು ಬೊಬ್ಬೆಯಿಟ್ಟು ಅವರನ್ನು ಇಕ್ಕಟ್ಟಿಗೆ ಸಿಲುಕಿಸುತ್ತಿರುವುದೂ ಮಜಬೂತಾಗಿದೆ. ಯತ್ನಾಳ್, ಶಿವಪ್ಪ ಮತ್ತು ಮಲ್ಲಿಕಾರ್ಜುನಯ್ಯ ಎಂಬ ಶಿವಧಾರಿ ತ್ರಿಮೂರ್ತಿಗಳ ಬಂಡಾಯದಿಂದಾಗಿ "ಬಜೆಪಿಯಲ್ಲಿ ಎಲ್ಲವೂ ಸರಿಯಾಗಿಲ್ಲ, ಇದು ಲಿಂಗಾಯತರ ಪರವಿರುವ ಪಕ್ಷವಲ್ಲ, ಖಂಡಿತವಾಗಿಯೂ ಇದು ಧರ್ಮ ರಕ್ಷಕರ, ದೇಶ ರಕ್ಷಕರ ಶಿಸ್ತಿನ ಪಾರ್ಟಿಯಲ್ಲ. ಬಜೆಪಿಯಲ್ಲೂ ಸ್ವಾರ್ಥಿ, ಅಧಿಕಾರದಾಹಿ ಜನರೇ ತುಂಬಿದ್ದಾರೆ" ಎಂಬ ಸಂದೇಶ ರಾಜ್ಯದ ಜನರಿಗೆ ಪ್ರತಿ ದಿನ ರವಾನೆಯಾಗುತ್ತಿದೆ. ಇದೆಲ್ಲ ಬರಲಿರುವ ಚುನಾವಣೆಯ ಮೇಲೆ ಖಂಡಿತವಾಗಿಯೂ ಪರಿಣಾಮ ಬೀರಲಿದೆ.

ಅಧಿಕಾರಕ್ಕೆ ಬಂದ ಕ್ಷಣದಿಂದ ಯಡ್ಡಿ ಒಂದೆಡೆ ಲಿಂಗಾಯತ ಮಠಗಳಿಗೆ ಸರ್ಕಾರದ ಬೊಕ್ಕಸದಿಂದ ಕೋಟಿ ಕೋಟಿ ಹಣ ನೀಡುತ್ತಾ ಆ ಮಠಗಳ 'ಜಗದ್ಗುರುಗಳನ್ನು' ತಮ್ಮ ಬುಟ್ಟಿಗೆ ಹಾಕಿಕೊಂಡರಲ್ಲದೆ, ಇನ್ನೊಂದೆಡೆ

▶▶▶ 12

ರಾಘವೇಂದ್ರಾ... ಶ್ರೀರಾಮಾ...!



ಶಿವಮೊಗ್ಗ ಲೋಕಸಭಾ ಕ್ಷೇತ್ರದಿಂದ ತಮ್ಮ ಪುತ್ರ ರಾಘವೇಂದ್ರ ಸ್ಪರ್ಧಿಸುವಂತೆ ಬಹಳ ಹಿಂದೆಯೇ ಯಡಿಯೂರಪ್ಪ ರಾಜಕೀಯ ತಂತ್ರಗಾರಿಕೆಯನ್ನು ಹೆಣೆದಿದ್ದರು. ಯಾವುದೇ ಕಾರಣಕ್ಕೂ ತಮ್ಮ ಮಗನಿಗೆ ಟಿಕೆಟ್ ತಪ್ಪಬಾರದೆಂಬ ಏಕೈಕ ಕಾರಣಕ್ಕಾಗಿ ಇಷ್ಟು ವರ್ಷಗಳಿಂದ ಪಾಲಿಸಿಕೊಂಡು ಬಂದಿರುವ ಬಜೆಪಿಯ ತತ್ವ ಸಿದ್ಧಾಂತಗಳನ್ನೆಲ್ಲಾ ಗಾಳಿಗೆ ತೂರಿದ್ದರು. ಆ ನಿಟ್ಟಿನಲ್ಲಿ ಬಳ್ಳಾರಿಯ ಗಣಿ ದೊರೆಗಳನ್ನೂ ತಮ್ಮ ಪರ ಮಾಡಿಕೊಂಡು ಆರೋಗ್ಯ ಸಚಿವ ಶ್ರೀರಾಮುಲು ಅವರ ಸಹೋದರಿ ಜೆ. ಶಾಂತಿಗೆ ಬಳ್ಳಾರಿಯಿಂದ ಸ್ಪರ್ಧಿಸಲು ಅನುವು ಮಾಡಿಕೊಟ್ಟರು.

ಹಾಗೆಯೇ 'ಗೆಲ್ಲುವ ಅಭ್ಯರ್ಥಿ' ಎಂಬ ಹಣೆಪಟ್ಟಿ ಕೊಟ್ಟು ಆಪರೇಷನ್ ಕಮಲದ ಕಾಣಿಕೆಯಾದ ಗುರುಪಾದಪ್ಪ ನಾಗಮಾರಪಲ್ಲಿ ಎಂಬ ಆಗರ್ಭ ಶ್ರೀಮಂತನಿಗೂ ಮಣೆ ಹಾಕಿದರು ಮತ್ತು ಮೊನ್ನೆ ಮೊನ್ನೆ ಪಕ್ಷಕ್ಕೆ ಬಂದು ಮಂತ್ರಿಗಿರಿ ಗಿಟ್ಟಿಸಿದ ಸ್ವಜಾತಿ ಬಂಧು ಉಮೇಶ್ ಕತ್ತಿಯ ಸಹೋದರನಿಗೂ ಟಿಕೆಟ್ ನೀಡಿದರು. ಇವೆಲ್ಲದರ ಮುಖ್ಯ ಉದ್ದೇಶ ತನಗೊಬ್ಬನಿಗೆ ಪುತ್ರ ವ್ಯಾಮೋಹವಿದೆ ಎಂಬ ಅಪವಾದ ಬರಬಾರದೆಂಬುದಷ್ಟೆ. ಹೀಗಾಗಿ ತನ್ನ ಟೀಕಾಕಾರರನ್ನು ಮತ್ತು ಪಕ್ಷದಲ್ಲಿನ ಭಿನ್ನಮತೀಯರನ್ನು ಒಂದೇ ಏಟಿನಿಂದ ಸುಮ್ಮನಾಗಿಸಲು ಹೊರಟ ಯಡ್ಡಿ ಬಜೆಪಿಗೆ ವರವಾಗುತ್ತಾರೋ, ಶಾಪವಾಗುತ್ತಾರೋ ನೋಡಬೇಕು. ■



ಅನಂತು ಸಿಟ್ಟಿಗೆ ಬಗ್ಗದ ಯಡ್ಡಿ



ಅನಂತಕುಮಾರ್ ಸಿಟ್ಟು ಏರಿದೆ.

ಹೇಗಾದರೂ ಮಾಡಿ ಾಧಿಕಾರಿಯಂತೆ ಯುತ್ತಿರುವ ಯಡ್ಡಿಗೆ ಣ ಹಾಕಲೇ ಬೇಕು. ನಾದಲ್ಲಿ ತನಗೆ ಾಲವಿಲ್ಲ ಎಂದು ರಿಸಿರುವ ಅನಂತು ಈಗ ದ್ದಿದ್ದಾರೆ.

ಇದಕ್ಕೆ ಮುಖ್ಯ ಕಾರಣ ಬಾರಿ ಕೇಂದ್ರದಲ್ಲಿ ಡಿಎ ಅಧಿಕಾರಕ್ಕೆ ುವುದಿಲ್ಲ ಎಂದು, ತಮ್ಮ ಕ ಅಡ್ವಾಣಿ ಪ್ರಧಾನಿಯಾಗುವುದಿಲ್ಲ ಎಂದು ಗಲೇ ಸ್ಪಷ್ಟವಾಗಿರುವುದು. ಹೀಗಾಗಿ ಬರೀ ರಾಜಕಾರಣ ನಂಬಿಕೊಂಡರೆ ತನಗೇ ಏನೂ ವುದಿಲ್ಲ ಎಂದು ಅರಿತ ಅನಂತು ರಾಜ್ಯ ಕಾರಣದಲ್ಲಿ ಒಂದಿಷ್ಟು 'ಕೈಯಾಡಿಸಲು' ರಿಸಿದರು.

ಇದರ ಸುಳಿವು ಸಿಗುತ್ತಿದ್ದಂತೆ ಎಚ್ಚರಗೊಂಡ ಯಡ್ಡಿ ತುಗೆ ಯಾವ ಅವಕಾಶವನ್ನೂ ನೀಡದೆ, ಕ್ಷೀಯವಾಗಿ ನಿರ್ಧಾರ ತೆಗೆದುಕೊಳ್ಳುತ್ತಾ ಹೋದರು. ನ್ನು ಕಂಡು ಈಗ ಯಡ್ಡಿಯನ್ನು ಬಗ್ಗಿಸದಿದ್ದರೆ, ವಣೆ ನಂತರ ಆತನನ್ನು ಮುಟ್ಟಲೂ ಸಾಧ್ಯವಿಲ್ಲ ು ಅರಿತ ಅನಂತು ಬಂಡಾಯದ ಬಾವುಟ ಿದ್ದಾರೆ. ಕೇಶವಕೃಪದ ಚೆಡ್ಡಿಗಳು ಈಗ ಏನು ಬೇಕೆಂದು ತೋಚದೆ ಎದುಸಿರು ಬಿಡುತ್ತಿದ್ದಾರೆ.

ಹಿಗ್ಗಾ-ಮುಗ್ಗಾ ಬೈದರು!

ಈ ಭಿನ್ನಮತವನ್ನು ಶಮನಗೊಳಿಸಲು ಕೇಶವಕೃಪದಲ್ಲಿ ಪರಿವಾರದ ನಾಯಕರು ಕರೆದಿದ್ದ ಸಭೆಯಲ್ಲಿ ಸಿದ್ದ ಅನಂತಕುಮಾರ್ ಯಡ್ಡಿ ಬಣವನ್ನು ಮುಗ್ಗಾ ತರಾಟೆಗೆ ತೆಗೆದುಕೊಂಡಿದ್ದಾರೆ. ಆಗ ು ರಾಜ್ಯಾಧ್ಯಕ್ಷ ಹಲ್ಕುಹಿ ಸದಾನಂದ ಗೌಡ ಗಿ "ಇದೆಲ್ಲಾ ಮಾಡಿದ್ದೇವೆ" ಎಂಬ ವಿವರಣೆ [illegible] ಅವರಿಗೆ [illegible] ಅನಂತು ಗೊತ್ತಿರುವ 'ತಂತ್ರ'ಗಳನ್ನೆಲ್ಲಾ ಹರಿಸಿದ್ದಾರೆ. ು ನಾಲ್ಕು ಗಂಟೆಗಳ ಕಾಲ ವಾಗ್ವಾದ ನಡೆದಿದೆ. [illegible]

"ಯಡ್ಡಿಯನ್ನು ಕರೆದು ನಿಮ್ಮ ಮುಂದೆಯೇ ಬುದ್ಧಿ ಹೇಳುತ್ತೇವೆ" ಎಂದು ಚಡ್ಡಿ ಧುರೀಣರು ಭರವಸೆ ನೀಡಿ ಅನಂತುವನ್ನು ಒಂದಿಷ್ಟು ಸಮಾಧಾನ ಪಡಿಸಿದ್ದಾರಷ್ಟೇ. ಆದರೆ ಯಡ್ಡಿ ಈಗ ಯಾರ ಮಾತೂ ಕೇಳುವ ಸ್ಥಿತಿಯಲಿಲ್ಲ, ಆದ್ದರಿಂದ ಸಂಘಪರಿವಾರದ ಮುಖಂಡರಿಗೆ ಯಡ್ಡಿ "ಅನಂತು ಜೊತೆ ಸಂಧಾನ ಇಲ್ಲ, ಪಕ್ಷ ಬೆಳೆದಾಗಲೆಲ್ಲಾ ಈ ಅನಂತು ಹೀಗೆ ಪಕ್ಷ ಒಡೆಯುವ ಕೆಲಸ ಮಾಡುತ್ತಿದ್ದಾನೆ. ಇನ್ನು ಈತನನ್ನು ಸಹಿಸಲಾಗದು" ಎಂಬ ಸಂದೇಶವನ್ನು ರವಾನಿಸಿದ್ದಾರಂತೆ. ಇದರಿಂದ ಬಜೆಪಿಯಲ್ಲಿನ ಒಳಜಗಳ ಇನ್ನಷ್ಟು ಉಲ್ಬಣಗೊಳ್ಳುತ್ತದಷ್ಟೇ.

ಸುಮ್ಮನೆ ಕೂರದ ಅನಂತು

ಯಡ್ಡಿ ತಮ್ಮನ್ನು ಮೂಲೆಗುಂಪು ಮಾಡಲು ಸ್ಕೆಚ್ ಹಾಕಿದ್ದಾರೆ ಎಂಬುದು ಗೊತ್ತಾಗುತ್ತಿದ್ದಂತೆಯೇ ಅನಂತು ಪ್ರತಿತಂತ್ರ ರೂಪಿಸುತ್ತಿದ್ದಾರೆ. ತಾವೊಬ್ಬ ಸಮರ್ಥ ಮತ್ತು ಪ್ರಭಾವಶಾಲಿ ಮುಖಂಡ ಎಂಬುದನ್ನು ಸಾಬೀತುಪಡಿಸಲೇ ಬೇಕೆಂದು ಪಣ ತೊಟ್ಟಿರುವ ಅನಂತು ಈಗ ಸೋಲಲೇಬಾರದೆಂದು ನಿರ್ಧರಿಸಿದ್ದಾರಂತೆ.

ಈಗ ಮನೆಯಲ್ಲಿಯೇ ಕುಳಿತು, ಬೆರಳೆಣಿಕೆಯಷ್ಟಿರುವ ಬೆಂಬಲಿಗರೊಂದಿಗೆ ದಿನವೂ ಅನಂತು ಸಮಾಲೋಚಿಸುತ್ತಿದ್ದಾರೆ. ಆದರೆ ಯಡ್ಡಿ ಅನಂತು ಹಿಂದೆ ದೊಡ್ಡ ಗೂಢಾಚಾರರ ತಂಡವನ್ನೇ ಛೂಬಿಟ್ಟು, ಅವರ ತಂತ್ರವನ್ನೆಲ್ಲಾ ಅರಿತು, ಪ್ರತಿತಂತ್ರ ರೂಪಿಸುತ್ತಿದ್ದಾರೆ. ಈ ಕಾರಣಕ್ಕಾಗಿಯೇ "ನನ್ನ ಫೋನ್ ಕದ್ದಾಲಿಸುತ್ತಿದ್ದಾರೆ, ನಾನೆಲ್ಲಿಗೆ ಹೋದರೂ ಅವರು ಹಿಂಬಾಲಿಸುತ್ತಿದ್ದಾರೆ, ನಾನೇನು ವಿರೋಧ ಪಕ್ಷದ ನಾಯಕನೇ" ಎಂದು ಅನಂತು ಸಂಘಪರಿವಾರದ ನಾಯಕರಿಗೆಲ್ಲಾ ದೂರು ನೀಡುತ್ತಿದ್ದಾರೆ.

ಅನಂತು ಬಳಿ ಈಗ ಉಳಿದಿರುವ ದೊಡ್ಡ ಶಕ್ತಿ ಎಂದರೆ 'ವಿ.ಕ. ಭಟ್ಟ'! ಮೊದಲಿನಿಂದಲೂ ಅನಂತು ಜೊತೆಯಲ್ಲಿಯೇ ಗುರುತಿಸಿಕೊಂಡಿರುವ 'ವಿಜಯ ಕರ್ನಾಟಕ'ದ ಸಂಪಾದಕ ವಿಶ್ವೇಶ್ವರ ಭಟ್ಟ ಈಗಲೂ ಅನಂತು ನೆರವಿಗೆ ಧಾವಿಸಿದ್ದಾರೆ. ಪತ್ರಿಕೆಯಲ್ಲಿ ಯಡ್ಡಿ ವಿರುದ್ಧ ನಿರಂತರ ಸುದ್ದಿ ಬರೆಯುವ ಮೂಲಕ, ಅನಂತು ಭಿನ್ನಾಭಿಪ್ರಾಯದಿಂದ ಬಜೆಪಿಯೇ ಹೋಳಾಗುತ್ತಿದೆ ಎಂಬ ಅಭಿಪ್ರಾಯ ರೂಪಿಸುವ ಮೂಲಕ ಯಡ್ಡಿ ಬಣದ ಮತ್ತು ಪಕ್ಷದ ಉನ್ನತ ನಾಯಕರ ನಿದ್ರೆಗೆಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಯಡ್ಡಿ ಬುಡಕ್ಕೇ ಏಟು!

ಯಡ್ಡಿಯ 'ಶಕ್ತಿ'ಯಾಗಿರುವ ಲಿಂಗಾಯತ ಸಮುದಾಯವನ್ನೇ ಒಡೆಯುವ ಪ್ರಯತ್ನಕ್ಕೂ ಕೈಹಾಕುವಂತೆ ಭಟ್ಟರನ್ನು 'ಅನಂತು' ಪ್ರೀತಿ ಈಗ ಪ್ರೇರೇಪಿಸಿದೆ. ಎಷ್ಟರಮಟ್ಟಿಗೆ ಎಂದರೆ ಲಿಂಗಾಯತ ಸಮುದಾಯದ ಒಳಪಂಗಡಗಳ ಲೆಕ್ಕಾಚಾರ ಕೊಟ್ಟು ಯಾವ ಯಾವ ಪಂಗಡದವರಿಗೆ ಯಡ್ಡಿಯಿಂದಾಗಿ ಎಷ್ಟು ಲಾಭ-ನಷ್ಟವಾಗಿದೆ ಎಂಬ ವರದಿಯನ್ನು ಕಳೆದ ಭಾನುವಾರ ವಿಜಯ ಕರ್ನಾಟಕ ಪ್ರಕಟಿಸಿತ್ತು.

ಲಿಂಗಾಯತರಲ್ಲಿ ಪಂಚಮಸಾಲಿಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೂ ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಅವರು 'ಹಿಂದುಳಿದವರು'. ಆದರೆ ಜನಸಂಖ್ಯೆಯಲ್ಲಿ ಮೂರನೇ ಸ್ಥಾನದಲ್ಲಿರುವ ಬಣಜಿಗ ಲಿಂಗಾಯತರು ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಮೊದಲಿಗರು. ಇದಕ್ಕೆ ಕಾರಣ ಬಣಜಿಗರೆಂದರೆ ವ್ಯಾಪಾರಿ ಸಮುದಾಯ. ಸಹಜವಾಗಿಯೇ ಆರ್ಥಿಕವಾಗಿಯೂ ಚೆನ್ನಾಗಿರುವ ಈ ಉಪಜಾತಿಯವರು ಎಲ್ಲದರಲ್ಲೂ ಮುಂದಿದ್ದಾರೆ. ಇದಕ್ಕೆ ಯಡ್ಡಿಯಾಗಲೀ, ಅವರ ರಾಜಕೀಯ ತಂತ್ರವಾಗಲೀ ಕಾರಣವಲ್ಲ. ಹಿಂದಿನಿಂದಲೂ ಇರುವ ಈ ಅನ್ಯಾಯವನ್ನು ಸರಿಪಡಿಸಬೇಕೆಂಬ ಪಂಚಮಸಾಲಿಗಳ ಒತ್ತಾಯ ನ್ಯಾಯಸಮ್ಮತ ಎನಿಸಿದರೂ, ಅದೆಂದೂ ಪ್ರಮುಖ ಬೇಡಿಕೆಯಾಗಿ, ಲಿಂಗಾಯತರ ನಡುವೆಯೇ ರಾಜಕೀಯ ಹೋರಾಟವಾಗಿ ರೂಪಗೊಂಡಿರಲಿಲ್ಲ.

ಆದರೆ ಯಡ್ಡಿ ಶಕ್ತಿ ಕುಂದಿಸಲು ಹೊರಟಿರುವ 'ವಿ.ಕ.ಭಟ್ಟ'ರ ಗಮನಕ್ಕೆ ಈ ವಿಷಯ ಬಂದಿದ್ದೇ ತಡ, ಹಿಂದೆ-ಮುಂದೆ ನೋಡದೆ "ಯಡ್ಡಿಯ ರಾಜಕೀಯ ಸಮೀಕರಣ ಸರಿ ಇಲ್ಲ, ಹೀಗಾಗಿ ಪಂಚಮಸಾಲಿಗಳು ಅಸಮಾಧಾನಗೊಂಡಿದ್ದಾರೆ" ಎಂದು ತಾವೇ ಪಂಚಮಸಾಲಿಗಳನ್ನು ಯಡ್ಡಿ ವಿರುದ್ಧ ಎತ್ತಿಕಟ್ಟುವ ಪ್ರಯತ್ನ ನಡೆಸಿದ್ದಾರೆ. ಇದಕ್ಕೆ ಪೂರಕವಾಗಿ ಕೂಡಲಸಂಗಮದ ಪಂಚಮಸಾಲಿ ಮಠದ ಶ್ರೀ ಜಯ ಬಸವ ಮೃತ್ಯುಂಜಯ ಸ್ವಾಮೀಜಿಯವರನ್ನು ಮಾತನಾಡಿಸಿ, ಅವರ ಬಾಯಿಯಿಂದ 'ಅನ್ಯಾಯ' ಶಬ್ದವನ್ನು ಹೊರಡಿಸಿದ್ದಾರೆ.

ಈ ವರದಿಯಿಂದಾಗಿ ಲಿಂಗಾಯತರ ಉಪಜಾತಿಗಳ ನಡುವೆ ಜಗಳ ಶುರುವಾಗಿ, ಯಡ್ಡಿ ಬುಡ ಅಲುಗಾಡಿಸಬಹುದು ಎಂಬ ವಿ.ಕ. ಭಟ್ಟರ ಲೆಕ್ಕಾಚಾರ ವರ್ಕ್‌ಔಟ್ ಆಗುತ್ತೋ ಇಲ್ಲವೋ ಗೊತ್ತಿಲ್ಲ, ಆದರೆ ಅವರ ಈ ಪ್ರಯತ್ನದಿಂದಾಗಿ ಅನಂತು ಮೇಲಿನ ಯಡ್ಡಿ ಸಿಟ್ಟು ಇನ್ನಷ್ಟು ಜಾಸ್ತಿಯಾಗಿರುವುದಂತೂ ದಿಟ!

ಯಡ್ಡಿ ಬಗ್ಗೆ ಭಟ್ಟರಿಗೆ ಎಷ್ಟು ಸಿಟ್ಟಿದೆ ಎಂಬುದನ್ನು ತಿಳಿಯಬೇಕೆಂದರೆ ಮಂಗಳವಾರದ ವಿಜಯ ಕರ್ನಾಟಕವನ್ನು ನೋಡಬೇಕು. ಬಜೆಪಿಯ ಓಲ್ಡ್ ಹಾರ್ಸ್ ಬಿ.ಬಿ. ಶಿವಪ್ಪನವರು ಯಡ್ಡಿ ವಿರುದ್ಧ ಕೆಂಡಕಾರಿದ ಸುದ್ದಿಯನ್ನು ಮುಖಪುಟದ ಲೀಡ್‌ನಲ್ಲೊಮ್ಮೆ, ಒಳಗೆ ಎರಡೆರಡು ಬಾರಿ ಪ್ರಕಟಿಸುವ ಮೂಲಕ ಶಿವಪ್ಪನವರ ಹೇಳಿಕೆಗೆ ಭಟ್ಟರು ಫುಲ್ ಕವರೇಜ್ ನೀಡಿದ್ದಾರೆ. ಪ್ರತಿದಿನವೂ ಬಜೆಪಿಯ ಭಿನ್ನಮತೀಯ ಸುದ್ದಿಯನ್ನೇ ಲೀಡ್ ಸ್ಟೋರಿ ಮಾಡಿ, [illegible]ಯುತ್ತಿರುವ ಬೆಂಕಿಗೆ ತುಪ್ಪ ಸುರಿಯುತ್ತಿದ್ದಾರೆ.


ಮೊನ್ನೆ ಮೊನ್ನೆಯವರೆಗೂ ಬಜೆಪಿಯ ಕರಪತ್ರದಂತಿದ್ದ ವಿಕ ಇದ್ದಕ್ಕಿದ್ದಂತೆ ಆ ಪಕ್ಷದ [illegible] ಯನ್ನೇ [illegible] [illegible] ಕೇ [illegible] ಪಕ್ಷ [illegible] ಕೊಳ್ಳುವಂತೆ [illegible]'

● [illegible]

▶▶▶ 11

ತಮ್ಮ ಪಕ್ಷದಲ್ಲಿರುವ ಇತರೆ ಲಿಂಗಾಯತರಿಂದಲೇ ತಮ್ಮ ಅಧಿಕಾರಕ್ಕೆ ಧಕ್ಕೆ ಬಾರದಂತ ತಲವರನ್ನು ಮಟ್ಟ ಹಾಕಿವರು. ಇವರದಕ್ಕೆ ಉತ್ತಮ ಉದಾಹರಣೆಗಳೆಂದರೆ ಸಿರಿಯ ಗಳ ಹೊಡೆಸಿಕೊಂಡಿರುವ ಸ್ವಾಮೀಜಿ ಮತ್ತು ಹುಬ್ಬಳ್ಳಿಯ ಲಿಂಗಾಯತ ಹೃದ ಜಗದೀಶ್ ಶೆಟ್ಟರ್!

ಹೊಸ ಸಂಪುಟದಲ್ಲಿ, ಮೊನ್ನೆ ತರಾತುರಿಯಲ್ಲಿ ನಿಗಮ ಮಂಡಳಿಗಳಿಗೆ ಅಧ್ಯಕ್ಷ ನೇಮಕಾತಿಯಲ್ಲಿ ಮತ್ತು ಇದೀಗ ಲೋಕಸಭಾ ಚುನಾವಣೆಗೆ ಟಿಕೆಟ್ ಹಂಚುವಿಕೆಯಲ್ಲಿ ಪಂಚಮಸಾಲಿಗಳಿಗೆ ಯಡ್ಡಿ ಅನ್ಯಾಯ ಮಾಡಿದ್ದಾರೆಂದೂ, ಪಕ್ಷಕ್ಕಾಗಿ ಹಲವಾರು ವರ್ಷಗಳಿಂದ ಪ್ರಾಮಾಣಿಕವಾಗಿ ದುಡಿದವರನ್ನು ಕಡೆಗಣಿಸಿ 'ಆಪರೇಷನ್ ಕಮಲ'ದ ಮೂಲಕ ಹೊಸದಾಗಿ ಚೆಡ್ಡಿ ತೊಟ್ಟವರಿಗೆ ಆದ್ಯತೆ ನೀಡಲಾಗಿದೆ ಎಂದೂ ಈಗ ಬಿಜೆಪಿಯ ನಾಯಕರಲ್ಲದೆ ಸಣ್ಣಪುಟ್ಟ ಕಾರ್ಯಕರ್ತರೂ ಆಕ್ರೋಶಗೊಂಡಿದ್ದಾರೆ.



ಪಂಚಮಸಾಲಿ V/s ಬಣಜಿಗ ಮಿನಿಸಮರ

ಇದರಿಂದಾಗಿ, ಈಗ ಮುಖ್ಯವಾಗಿ ಬಿಜೆಪಿಯ ಕಾರ್ಯಕರ್ತರಿಗಿಂತಲೂ ಲಿಂಗಾಯತ ಜನಾಂಗಕ್ಕೆ ಇರುಸುಮುರುಸಾಗಿದೆ. ರಾಜ್ಯದಲ್ಲಿ ಸುಮಾರು ಎಂಭತ್ತು ಲಕ್ಷದಷ್ಟು ಪಂಚಮಸಾಲಿ ಲಿಂಗಾಯತರಿದ್ದು ಅವರಿಗೆ ಆದ್ಯತೆ ನೀಡಬೇಕಿತ್ತು, ಆದರೆ ಯಡ್ಡಿ ಹಾಗೆ ಮಾಡಿಲ್ಲ. "ಅಧಿಕಾರ ಹಿಡಿಯಲು ಪಂಚಮಸಾಲಿಗಳ ಓಟು ಬೇಕು. ಆದರೆ ಅಧಿಕಾರ ಹಂಚುವಿಕೆಯಲ್ಲಿ ಮಾತ್ರ ಪಂಚಮಸಾಲಿಗಳನ್ನು ನಿರ್ಲಕ್ಷಿಸಲಾಗಿದೆ'' ಎಂಬುದು ಈಗ ಆ ಸಮುದಾಯದ ಕೂಗಾಗಿದೆ.

ಈ ಎಲ್ಲಾ ಕಾರಣಗಳಿಂದಾಗಿ ಯಡ್ಡಿ ಮತ್ತು ಅವರ ತಾಳಕ್ಕೆ ತಕ್ಕಂತೆ ಕುಣಿಯುವ ಬಿಜೆಪಿ ರಾಜ್ಯಾಧ್ಯಕ್ಷ ಸದಾನಂದ ಗೌಡರ ವಿರುದ್ಧ ಯತ್ನಾಳ ನೇತೃತ್ವದಲ್ಲಿ ಲಿಂಗಾಯತರು ತೊಡೆತಟ್ಟಿ ಸಮರ ಸಾರಿದ್ದಾರೆ. ಈ ಬಂಡಾಯದ ಕಹಳೆ ಯಡ್ಡಿಯಲ್ಲಿ ತಳಮಳ ಹುಟ್ಟಿಸಿದೆ. ಕಳೆದ ಒಂದು ವಾರದಿಂದ ಯಡ್ಡಿ ಮತ್ತು ಯತ್ನಾಳ್ ನಡುವೆ ಒಂದು ರೀತಿಯ ಜಂಗ್ಲಿ ಕುಸ್ತಿ ನಡೆಯುತ್ತಿದೆ. ರಾಷ್ಟ್ರಮಟ್ಟದ ನಾಯಕರು ಈ ಕುಸ್ತಿಯ ಅಂಪೈರ್ ಆಗಿ ಕಾರ್ಯನಿರ್ವಹಿಸಲು ಹಿಂಜರಿಯುತ್ತಿದ್ದಾರೆ. "ಸಾರ್ವಜನಿಕವಾಗಿ ಕುಸ್ತಿ ಆಡಬೇಡಿ'' ಎಂದಷ್ಟೇ ಕಿವಿಮಾತನ್ನು ಅಂಪೈರ್ ಹೇಳಿರುವುದರಿಂದ ಯತ್ನಾಳ್‌ಗೆ ಜೀವಬಲ ಬಂದಂತಾಗಿದೆ.

ಇದರರ್ಥ ಚುನಾವಣೆ ಮುಗಿಯುವತನಕ ಬಂಡಾಯದ ಕಹಳೆ ಊದಿರುವ ತ್ರಿಮೂರ್ತಿಗಳನ್ನು ಯಾವುದೇ ಕಾರಣಕ್ಕೆ ಪಕ್ಷದಿಂದ ಉಚ್ಚಾಟಿಸುವುದಿಲ್ಲ ಎಂದಾಯಿತು. ಅಲ್ಲಿಯತನಕ "ಬಿಜೆಪಿ ಪಕ್ಷ ಯಡ್ಡಿಯ ಅಪ್ಪನದ್ದಲ್ಲ'' ಎಂಬಿತ್ಯಾದಿ ಪ್ರಚೋದನಾಕಾರಿ ಮತ್ತು ಆಘಾತಕಾರಿ ಹೇಳಿಕೆಗಳನ್ನು ಯತ್ನಾಳ್ ಮುಂದುವರೆಸುವುದರಲ್ಲಿ ಸಂಶಯವಿಲ್ಲ. ■

ಅನಂತ್ ಕುಮಾರ್ ಧಾರವಾಡಕ್ಕೆ ಪಲಾಯನ?

ಕಳೆದ ನಾಲ್ಕು ಬಾರಿ ಬೆಂಗಳೂರು ದಕ್ಷಿಣದಿಂದ ಸತತವಾಗಿ ಜಯಗಳಿಸುತ್ತಾ ಬಂದಿರುವ ಸೋಲರಿಯದ ಸರದಾರ ಎಂಬ ಖ್ಯಾತಿಯ ಅನಂತ್ ಕುಮಾರ್ ಈ ಬಾರಿ ತನ್ನ ನೆಚ್ಚಿನ ಕ್ಷೇತ್ರ ಬೆಂಗಳೂರು ದಕ್ಷಿಣಕ್ಕೆ ಗುಡ್‌ಬೈ ಹೇಳಿ ತನ್ನ ಹುಟ್ಟೂರಾದ ಧಾರವಾಡಕ್ಕೆ ಪಲಾಯನ ಮಾಡುವ ಯೋಚನೆಯಲ್ಲಿದ್ದಾರೆ. ಆದರೆ "ಇದೊಂದು ಪ್ರತಿಷ್ಠೆಯ ಕ್ಷೇತ್ರವಾಗಿದ್ದು ಈ ಹಂತದಲ್ಲಿ ಕ್ಷೇತ್ರ ಬದಲಾಯಿಸಿದರೆ ಪಕ್ಷದ ಕಾರ್ಯಕರ್ತರಿಗೆ ತಪ್ಪು ಸಂದೇಶ ನೀಡಿದಂತಾಗುತ್ತದೆ'' ಎಂದು ಮುಖ್ಯಮಂತ್ರಿ ಯಡ್ಡಿ ದೆಹಲಿ ದೊರೆಗಳ ಕಿವಿ ಕಚ್ಚಿದ್ದಾರೆ.



ಯಡಿಯೂರಪ್ಪ ಈ ರೀತಿ ದೆಹಲಿ ದೊರೆಗಳಿಗೆ ಹೇಳಿರುವುದು ಅನಂತ್‌ಕುಮಾರ್ ಮೇಲಿನ ಪ್ರೀತಿಯಿಂದ ಖಂಡಿತವಾಗಿಯೂ ಅಲ್ಲ, ಬದಲಾಗಿ ಬೆಂಗಳೂರು ದಕ್ಷಿಣದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಸ್ಪರ್ಧಿಸುವುದು ಬಹುತೇಕ ಖಚಿತವಾಗಿರುವುದರಿಂದ ಅನಂತು ಕೃಷ್ಣ ವಿರುದ್ಧ ಸೆಣಸಿ ಸೋತು ಸುಣ್ಣವಾಗಲಿ ಎಂಬ ಹುನ್ನಾರದಿಂದ!

ಕೃಷ್ಣ-ಅನಂತ್ ನಡುವೆ ಹಣಾಹಣಿ ನಡೆದರೆ ಕೃಷ್ಣ ಜಯಭೇರಿ ಭಾರಿಸುವುದು ಖಚಿತ ಎಂದು ರಾಜ್ಯ ಗುಪ್ತದಳ ಇಲಾಖೆ ವರದಿ ಮಾಡಿದೆ. ಅಷ್ಟೇ ಅಲ್ಲ, ಕಾಂಗ್ರೆಸ್ ಹೈಕಮಾಂಡ್ ಎರಡು ಖಾಸಗಿ ಸಂಸ್ಥೆಗಳಿಂದ ತರಿಸಿಕೊಂಡಿರುವ ಸಮೀಕ್ಷೆಗಳೂ ಇದೇ ತರಹದ ವರದಿ ನೀಡಿವೆಯಂತೆ. ಹೀಗಾಗಿ ಇಂತಹ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಅನಂತ್‌ಕುಮಾರ್ ಅವರನ್ನು ಸೋಲಿಸಿ ತನ್ನ ಮಗ ರಾಘವೇಂದ್ರನಿಗೆ ದೆಹಲಿಯಲ್ಲಿ ಶತ್ರುಗಳಿಲ್ಲದಂತೆ ಮಾಡುವುದೇ ಯಡ್ಡಿಯ ಕಾರ್ಯತಂತ್ರವಾಗಿದೆ.

ಎಸ್.ಎಂ. ಕೃಷ್ಣ ಸ್ಪರ್ಧೆಯಿಂದ ಮಾತ್ರ ಅನಂತ್ ಇಕ್ಕಟ್ಟಿಗೆ ಒಳಗಾಗುತ್ತಿಲ್ಲ, ಕ್ಷೇತ್ರಗಳ ಮರುವಿಂಗಡಣೆಯ ನಂತರ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರ ಈಗ ಮೊದಲಿನಂತೆ ಮೇಲ್ಜಾತಿಯ ಕ್ಷೇತ್ರವಾಗಿ ಉಳಿದಿಲ್ಲ. ಈಗ ಮಲ್ಲೇಶ್ವರ, ರಾಜಾಜಿನಗರ, ಗಾಂಧಿನಗರ, ಬಿನ್ನಿಪೇಟೆ, ಚಾಮರಾಜಪೇಟೆಯ ಒಂದು ಭಾಗ ಬೆಂಗಳೂರು ದಕ್ಷಿಣ ಕ್ಷೇತ್ರದಿಂದ ತಪ್ಪಿ ಹೋಗಿದೆ. ಮಾತ್ರವಲ್ಲ, ಗೋವಿಂದರಾಜು ನಗರ, ವಿಜಯನಗರ, ಪದ್ಮನಾಭನಗರ, ಬಿ.ಟಿ.ಎಂ. ಬಡಾವಣೆ ಮತ್ತು ಬೊಮ್ಮನಹಳ್ಳಿ ಈ ಕ್ಷೇತ್ರಕ್ಕೆ ಸೇರ್ಪಡೆಗೊಂಡಿವೆ.

ಹೀಗಾಗಿ ಬಿಜೆಪಿ ಪರ ಮತ ಚಲಾಯಿಸುವ ಮೇಲುಜಾತಿ ಮತದಾರರ ಬದಲು ಅಲ್ಪಸಂಖ್ಯಾತರು, ದಲಿತರು ಮತ್ತು ಹಿಂದುಳಿದ ಮತದಾರರು ಸಾಕಷ್ಟು ಸಂಖ್ಯೆಯಲ್ಲಿ ಈಗ ಈ ಕ್ಷೇತ್ರದಲ್ಲಿದ್ದಾರೆ. ಇದು ಅನಂತು ನಿದ್ದೆಗೆಡಿಸಿದೆ.

ಈ ಮಧ್ಯೆ ಕೃಷ್ಣನ ಪರವಾಗಿ ಕೆಲಸ ಮಾಡಲು ವಿಜಯನಗರದ ಶಾಸಕ ಕೃಷ್ಣಪ್ಪ, ಜಯನಗರದ ರಾಮಲಿಂಗಾರೆಡ್ಡಿ, ಗಾಂಧಿನಗರ ಕ್ಷೇತ್ರದ ದಿನೇಶ್ ಗುಂಡೂರಾವ್ ಮತ್ತು ಎಸ್.ಎಂ. ಕೃಷ್ಣರ ಪಟ್ಟದ ಶಿಷ್ಯ ಆರ್.ವಿ. ದೇವರಾಜ್ ಮೊದಲಾದವರು ಟೊಂಕ ಕಟ್ಟಿ ಕೋಟಿ ಕೋಟಿ ಸುರಿಯಲು ಸಜ್ಜಾಗಿ ನಿಂತಿದ್ದಾರೆ.

ಇವತ್ತು ಅನಂತ್ ಹಿಂದೆ ಇಂತಹ ದೊಡ್ಡ ಪಟಾಲಂ ಇಲ್ಲ. ಹೀಗಾಗಿ ಅನಂತ್ ಧಾರವಾಡಕ್ಕೆ ಪಲಾಯನ ಮಾಡಲು ತುದಿಗಾಲಲ್ಲಿ ನಿಂತಿದ್ದಾರೆ. ಆದರೆ ಅಲ್ಲಿಗೆ ಹೋಗಲು ಯಡ್ಡಿ ಬಿಡಲ್ಲ, ಇಲ್ಲಿರಲು ಕೃಷ್ಣ ಬಿಡಲ್ಲ... ಹೀಗಾಗಿದೆ ಅನಂತು ಪ್ರತಿಸ್ಥಿತಿ, ಪಾಪ! ■

▶▶▶ 10

ಜನರೆದುರು ಬೆತ್ತಲಾಗಿವೆ. ಟೆರರಿಸಂ ಕುರಿತು ಮಾತನಾಡ ನೈತಿಕತೆಯನ್ನೇ ಅಧ್ವಾಣಿ ಕಳೆದುಕೊಂಡಿದ್ದಾ ಇದೆಲ್ಲದರಿಂದ ತಲೆ ಕೆಟ್ಟಂತಾಗಿರುವ ಬಿಜೆಪಿ ಈ ಇಂಡಿಯಾ ಶೈನಿಂಗ್, ಟೈರರಿಸಂ, ಪಾಕಿಸ್ತಾನ ಮುಂತ ಅಜೆಂಡಾ ತ್ಯಜಿಸಿ 'ಅಧ್ವಾಣಿಯನ್ನು ಪ್ರಧಾನಿ ಮಾ ಎಂದು ಹೊರಟಿದ್ದಾರೆ. ಆದರೆ, 'ಯಾಕೆ?' ಅಂತ ಕೇಳ ಜನರಿಗೆ ಸರಿಯಾದ ಉತ್ತರವೂ ಬಿಜೆಪಿಗಳ ಹ ಈಗಿಲ್ಲ.

ತೃತೀಯ ರಂಗ ಎಂಬ ಅಡ್ಡಿ



ಒಂದು ಕಾಲದಲ್ಲಿ ಕಾಂಗ್ರೆಸ್ ವಿರುದ್ಧದ ನೆಲೆಯಲ್ಲಿ ಚಾಲ್ತಿಗೆ ಬಂದ ಮೈತ್ರಿಕೂಟದ ರಾಜಕೀಯ ಈ ಬಾರಿ ಬಿಜೆಪಿಯ ಕೋಮುವಾದಿ ರಾಜಕಾರಣದ ವಿರುದ್ಧ ಮತ್ತು ಸೆಕ್ಯುಲರಿಸಂ ಪರ ಧ್ರುವೀಕರಣಗೊಳ್ಳುತ್ತಿದೆ.

1977 ರ ಮೊಟ್ಟಮೊದಲ ಕಾಂಗ್ರೆಸ್ ವಿರೋಧಿ ಮೈತ್ರಿಕೂಟಕ್ಕೆ 'ಎಮರ್ಜೆನ್ಸಿ' ವಿರುದ್ಧದ ಅಜೆಂಡಾ ಇತ್ತು. ಜನತಾ ಪಾರ್ಟಿ ನಾಯಕತ್ವದ ಆ ಬಳಗದಲ್ಲಿ ಜನಸಂಘವೂ (ಈಗಿನ ಬಿಜೆಪಿಯ ಹಿಂದಿನ ಜನ್ಮ) ಇತ್ತು. ನಂತರ 1989 ರಲ್ಲಿ ಚಾಲ್ತಿಗೆ ಬಂದ ವಿ.ಪಿ. ಸಿಂಗ್ ನಾಯಕತ್ವದ ನ್ಯಾಷನಲ್ ಫ್ರಂಟ್‌ಗೆ ಕಾಂಗ್ರೆಸ್‌ನ ಭ್ರಷ್ಟಾಚಾರವೇ ಅಜೆಂಡಾ ಆಗಿತ್ತು. ನಂತರ 1996 ರ ಮೂರನೇ ರಾಷ್ಟ್ರ ಮಟ್ಟದ ಮೈತ್ರಿಕೂಟವಾದ ಯುನೈಟೆಡ್ ಫ್ರಂಟ್ ಮೊದಲ ಬಾರಿಗೆ ಬಿಜೆಪಿ ವಿರುದ್ಧ ಸಂಘಟಿತವಾಗಿತ್ತು. ಬಾಬರಿ ಮಸೀದಿ ನಾಶ, ದೇಶಾದ್ಯಂತ ಹಿಂದೂ-ಮುಸ್ಲಿಂ ಗಲಭೆಗಳಿಗೆ ಬಿಜೆಪಿ ನೀಡಿದ ಪ್ರಚೋದನೆಯೇ ಇದಕ್ಕೆ ಕಾರಣವಾಗಿತ್ತು. ಆ ಟ್ರೆಂಡ್ ಮುಂದುವರೆಯುತ್ತಾ ಈಗ ಬಹುತೇಕ ಪ್ರಾದೇಶಿಕ ಪಕ್ಷಗಳು ಬಿಜೆಪಿಯಿಂದ ದೂರ ಸರಿದಿವೆ.



ರಾಷ್ಟ್ರ ರಾಜಕಾರಣದಲ್ಲಿ ನಿರ್ಣಾಯಕ ಪಾತ್ರ ವಹಿಸಬಲ್ಲಷ್ಟು ಶಕ್ತಿಯಿರುವ key players ಗಳಾದ ಕರುಣಾನಿಧಿ, ದೇವೇಗೌಡ, ಜಯಲಲಿತಾ, ಚಂದ್ರಬಾಬು ನಾಯ್ಡು, ಕಮ್ಯುನಿಸ್ಟರು, ನವೀನ್ ಪಾಟ್ನಾಯಕ್, ಲಾಲೂ, ಮುಲಾಯಂ, ಅಜಿತ್ ಸಿಂಗ್, ನಿತೀಶ್ ಕುಮಾರ್, ಫಾರೂಕ್ ಅಬ್ದುಲ್ಲಾ ಮುಂತಾದವರೆಲ್ಲಾ ಬಿಜೆಪಿಯಿಂದ ದೂರ ಇದ್ದಾರೆ. ಅಷ್ಟೇ ಅಲ್ಲ ಇವರಲ್ಲಿ ಬಹುತೇಕರಿಗೆ ಕಾಂಗ್ರೆಸ್ಸೂ ಬೇಡವಾಗಿದೆ.

ಸದ್ಯಕ್ಕಂತೂ ಅಧ್ವಾಣಿ ದಿಕ್ಕೆಟ್ಟ ತಬ್ಬಲಿಯಂತೆ ಏಕಾಂಗಿಯಾಗಿ ನಿಂತಿದ್ದಾರೆ. ■



ಕೊನೆಗೂ ನಾವು ಹೆಂಡದ ಹಣವನ್ನು ಹರಿಸಿಯೇ ಪಾನ ನಿರೋಧವನ್ನು ಅಪೇಕ್ಷಿಸಿದ್ದ ರಾಷ್ಟ್ರಪಿತನ ಮತ್ತುಗಳನ್ನು ಹಿಂದೆ ಪಡೆಯಬೇಕಾಯಿತು.

ಆದ್ದರಿಂದ ಭಾರತದ ಮಾನ ಉಳಿಸಲು ಕುಡಿಯುತ್ತಲೇ ಇರಿ, ಚಿಯರ್ಸ್!

*****

ಮಾಸ್ಟರ್: ಈ ಸಲ 75% ಮಾರ್ಕ್ಸ್ ಬರೋಹಂಗೆ ಪ್ರಯತ್ನ ಪಡ್ತಿಯಾ?

ಶಿಷ್ಯ: 100% ಮಾರ್ಕ್ಸ್ ಬರೋಹಂಗೆ ಪ್ರಯತ್ನ ಪಡ್ತಿನಿ ಸಾರ್!

ಮಾಸ್ಟರ್: ಜೋಕ್ ಮಾಡಬೇಡಲೇ!


ಶಿಷ್ಯ: ಬಡ್ಡಿ ಮಗನೆ, ಯಾವನೋ ಮೊದಲು ಜೋಕ್ ಮಾಡಿದ್ದು?

*****

ಗಂಡ: ನೀನು ಚೆನ್ನಾಗಿ ಅಡುಗೆ ಮಾಡಿದರೆ ನಮ್ಮ ಅಡುಗೆಯವಳನ್ನು ಕಳುಹಿಸಿ ಪ್ರತಿ ತಿಂಗಳು 3,000 ರೂಪಾಯಿಗಳನ್ನು ಉಳಿಸಬಹುದು.

ಹೆಂಡತಿ: ನೀವು ನಿಮ್ಮ ಕೆಲಸವನ್ನು ಚೆನ್ನಾಗಿ ಮಾಡಿದರೆ ನಮ್ಮ ಡ್ರೈವರ್, ವಾಚ್‌ಮ್ಯಾನ್ ಮತ್ತು ತೋಟ ನೋಡಿಕೊಳ್ಳುವವನನ್ನು ಬಿಡಿಸಿ ತಿಂಗಳಿಗೆ 12,000 ರೂಪಾಯಿಗಳನ್ನು ಉಳಿಸಬಹುದು!

ಲಂಕೇಶ್ ಪ್ರಕಾಶನದ ಹೊಸ ಪುಸ್ತಕಗಳು



...ಾಗಲಕೋಟೆ: ...ಾಂಗ್ರೆಸ್ ...ಟಿಕೆಟ್ ...ಯಾರಿಗೆ?

...ಬಿಜೆಪಿ ಹೆಚ್ಚೂಕಡಿಮೆ ತನ್ನ ಟಿಕೆಟ್ ಹಂಚಿಕೆ ...ವನ್ನು ಮುಗಿಸಿ ಚುನಾವಣೆ ಎದುರಿಸಲು ಸಿದ್ಧ ...ದ್ದರೆ ಕಾಂಗ್ರೆಸ್ ಮಾತ್ರ ತನ್ನ ಟಿಕೆಟ್ ಯಾರಿಗೆ ...ಬೇಕು ಎಂಬ ಗೊಂದಲದಿಂದ ಇನ್ನೂ ಹೊರ ...ಲ್ಲ. ಬಾಗಲಕೋಟೆಯ ಅಷ್ಟೂ ವಿಧಾನಸಭಾ ಸೀಟು ... ಗೆದ್ದಿರುವ ಬಿಜೆಪಿಗೆ ಇಡೀ ಜಿಲ್ಲೆ ಭದ್ರಕೋಟೆ ...ದೆ. ಇಲ್ಲಿ ಜೆಡಿಎಸ್ ಅಷ್ಟೊಂದು ಪ್ರಭಾವಶಾಲಿ ...ಲ್ಲದಿರುವುದರಿಂದ ಈ ಭದ್ರಕೋಟೆಯನ್ನು ...ಮುಬೇಕೆಂದರೆ ಅದು ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ. ... ಅದು ಯಾರಿಗೆ ಟಿಕೆಟ್ ಕೊಡುತ್ತೆ ಎಂಬುವುದರ ... ನಿರ್ಧಾರವಾಗುವ ವಿಚಾರ.

...ಾಗಲಕೋಟೆ ಅಪ್ಪಟ ಲಿಂಗಾಯತರ ಕಾರಸ್ಥಾನವಾಗಿ ...ದರಿಂದ ಎಲ್ಲಾ ಪಕ್ಷಗಳೂ ಲಿಂಗಾಯತ ಅಭ್ಯರ್ಥಿ ... ಕಣಕ್ಕಿಳಿಸುತ್ತವೆ. ಹಾಲಿ ಸಂಸದನಾಗಿರುವ ...ದ್ದನಗೌಡರ್ ಕೂಡ ಲಿಂಗಾಯತರ ಒಳಪಂಗಡವಾದ ... ಸಮುದಾಯಕ್ಕೆ ಸೇರಿದವರು. ಈ ಹಿಂದೆ ಕೂಡ ...ಮಗೌಡರ್ ಅವರನ್ನು ಹೊರತುಪಡಿಸಿದರೆ ಈ ...ನ್ನು ಹೆಚ್ಚು ಬಾರಿ ಪ್ರತಿನಿಧಿಸಿದವರೆಂದರೆ ಲಿಂಗಾಯತ ...


...ಾಂಗ್ರೆಸ್‌ನ ಆರ್.ಎಸ್.ಪಾಟೀಲ್ ಎಂಬ ಜಂಭದ ... ಕೇವಲ ರೆಡ್ಡಿಗಳನ್ನು ಎತ್ತಿಕಟ್ಟದ್ದಲ್ಲದೇ ತನ್ನ ಅಳಿಯ ...ಶೇಖರ್ ಎಳಮೇಲಿಯನ್ನು ಫುಲ್ ಟೈಮ್ ಪುಢಾರಿ ...ಹಚ್ಚುವ ಮೂಲಕ ಜಿಲ್ಲೆಯಲ್ಲಿ ಕಾಂಗ್ರೆಸ್ ಅರ್ಧ ...ತ್ತುವುದಕ್ಕೆ ಕಾರಣನಾಗಿದ್ದ. ಆಮೇಲೆ ರೋಣಕ್ಕೆ ವಕ್ಕರಿಸಿಕೊಂಡು ಬಾಗಲಕೋಟೆ ಕಡೆ ತಲೆಹಾಕಿ ಮಲಗುವುದನ್ನೂ ನಿಲ್ಲಿಸಿಬಿಟ್ಟ. ಈತ ರೋಣಕ್ಕೆ ಕಾಲಿಟ್ಟ ಗಳಿಗೆಯಿಂದ ರೋಣದ ಕಾಂಗ್ರೆಸ್ ಕೂಡ ಆಕ್ಸಿಜನ್ ಇಲ್ಲದೇ ನರಳತೊಡಗಿತು. ಇದೆಲ್ಲಾ ಗೊತ್ತಿದ್ದೂ ಗೊತ್ತಿದ್ದೂ ಕಾಂಗ್ರೆಸ್‌ನ ಹೈಕಮಾಂಡ್ ಈ ಬಾರಿಯೂ ಆತನಿಗೆ ಗ್ರೀನ್‌ಸಿಗ್ನಲ್ ತೋರಿಸುತ್ತಿರುವುದು ಕಾಂಗ್ರೆಸ್‌ನ ದುರಂತ.

ಇನ್ನು ಕಾಂಗ್ರೆಸ್‌ನ ಹಾಲಿ ಜಿಲ್ಲಾಧ್ಯಕ್ಷ ಬಿ.ಬಿ.ಚಿಮ್ಮನಕಟ್ಟಿಯದ್ದೂ ಇದೇ ಕತೆ. ಆರ್.ಎಸ್.ಪಾಟೀಲ್ ಹಣದ ಥೈಲಿ ಹಿಡಿದುಕೊಂಡು ಜಿಲ್ಲಾ ಕಾಂಗ್ರೆಸ್ ಪಟ್ಟಕ್ಕಾಗಿ ಕಾದಿದ್ದಾಗ ಚಿಮ್ಮನಕಟ್ಟಿ ತ್ಯಾಗ ಮಾಡಿ ಅವನನ್ನು ಈ ಗದ್ದುಗೆಯಲ್ಲಿ ಕೂರಿಸಿದ್ದ. ನಂತರ ಪಾಟೀಲ್ ಗದಗಕ್ಕೆ ಮರಳಿದ ಮೇಲೆ ಖುದ್ದು ಚಿಮ್ಮನಕಟ್ಟಿಯೇ ಜಿಲ್ಲಾಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದ. ಹೆಸರಿಗೆ ಜಿಲ್ಲಾಧ್ಯಕ್ಷನಾದರೂ ವಾಸ್ತವದಲ್ಲಿ ಆತ ಬಾದಾಮಿಯನ್ನೇ ತನ್ನ ಕೇಂದ್ರ ಕಚೇರಿ ಮಾಡಿಕೊಂಡಿದ್ದ. ಚಿಮ್ಮನಕಟ್ಟಿ ತನ್ನ ಬಾದಾಮಿ ಷುಗರ್ಸ್‌ನಲ್ಲಿ ಕಳೆಯುವ ಸಮಯದಲ್ಲಿ ಒಂದಿಷ್ಟನ್ನಾದರೂ ಪಕ್ಷಕ್ಕಾಗಿ ನೀಡಿದ್ದರೆ, ಕಾರ್ಯಕರ್ತರನ್ನು ಹುರಿದುಂಬಿಸುವುದಕ್ಕೆ ಪ್ರಯತ್ನಿಸಿದ್ದರೆ ಜಿಲ್ಲೆಯಲ್ಲಿ ಕಾಂಗ್ರೆಸ್ ಈ ದುಸ್ಥಿತಿಗಿಳಿಯುತ್ತಿರಲಿಲ್ಲ. ಈಗ ಚುನಾವಣೆ ಘೋಷಣೆಯಾದ ಮೇಲಾದರೂ ಜಿಲ್ಲೆಯಾದ್ಯಂತ ಚುರುಕಾಗಿ ಓಡಾಡುವುದನ್ನು ಬಿಟ್ಟು ಎಲ್ಲಿಗೋ ನಾಪತ್ತೆಯಾಗಿ ಹೋಗಿದ್ದಾರೆ. ಈತನೂ ಈಗ ಟಿಕೆಟ್ ಕ್ಯೂನಲ್ಲಿ ನಿಂತಿದ್ದಾರೆ.

ಈ ಎರಡು ಮುದಿಗೂಬೆಗಳಿಂದ ಜಿಲ್ಲಾ ಕಾಂಗ್ರೆಸ್‌ಗೆ ಜೀವ ಬರೋದು ಕಷ್ಟ ಎಂಬುದು ಈಗ ಯುವ ಕಾಂಗ್ರೆಸ್ಸಿಗರಿಗೆ ಅರ್ಥವಾದಂತಿದೆ. ಆದ್ದರಿಂದಲೇ ಕೆಲ ಯುವಕರು ಟಿಕೆಟ್‌ಗಾಗಿ ಮುಂದೆ ಬಂದಿದ್ದಾರೆ. ಅವರಲ್ಲಿ ಎಸ್.ಜಿ.ನಂಜಯ್ಯನಮಠ, ಜಮಖಂಡಿಯ ಮಾಜಿ ಶಾಸಕ ರಾಮಣ್ಣ ಕಲುತಿ, ಪ್ರಭು ಷುಗರ್ಸ್‌ನ ಜಗದೀಶ್ ಗುಡಗುಂಟಿ, ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷ ಶಿವಕುಮಾರ್ ಮಲಘಾಣ, ಜೆ.ಟಿ.ಪಾಟೀಲ್, ಅಜಯ್‌ಕುಮಾರ್ ಸರನಾಯಕ ಮುಂತಾದವರು ಪ್ರಮುಖರು.

ಎಸ್.ಜಿ.ನಂಜಯ್ಯಮಠ ಮೂರು ಬಾರಿ ವಿಧಾನಸಭೆಯಲ್ಲಿ ಗೆದ್ದು ಶಾಸಕರಾದವರು. ಜಾತಿಯಿಂದ ಲಿಂಗಾಯತ ಜಂಗಮ. ಶಿಸ್ತು, ಬದ್ಧತೆಯಿರೋ ಮನುಷ್ಯನಾದರೂ ಚುನಾವಣೆಯಲ್ಲಿ ಖರ್ಚು ಮಾಡುವುದಕ್ಕೆ ಜೇಬಿನಲ್ಲಿ ಕಾಸಿಲ್ಲ, ಹೆಗಲಿನಲ್ಲಿ ಜೋಳಿಗೆಯಿದೆ, ಚೆನ್ನಾಗಿ ಮಾತನಾಡಬಲ್ಲ ಚಾಣಾಕ್ಷತೆಯಿದೆ, ಅಪ್ರೋಚ್‌ನಲ್ಲಿ ನಮ್ರತೆಯಿದೆ, ಎಲ್ಲಕ್ಕಿಂತ ಹೆಚ್ಚಾಗಿ ಕೈ-ಬಾಯಿ ಸರಿಯಿದೆ. ಆದರೆ, ಇದಿಷ್ಟೇ ಇದ್ದರೆ ಬಿಜೆಪಿಗಳನ್ನು ಸದೆಬಡಿಯೋದಕ್ಕೆ ಸಾಧ್ಯವಾಗುವುದಿಲ್ಲವಾದ್ದರಿಂದ ಇವರಿಗೆ ಟಿಕೆಟ್ ಸಿಗೋದು ಕಷ್ಟ.


ಜೆ.ಟಿ. ಪಾಟೀಲ್ ಜಾತಿಯಿಂದ ರೆಡ್ಡಿ ಲಿಂಗಾಯತ. ಎಚ್.ಕೆ.ಪಾಟೀಲರ ಸಂಬಂಧಿ. ಬೀಳಗಿ ವಿಧಾನಸಭಾ ಕ್ಷೇತ್ರವನ್ನು ಎರಡು ಬಾರಿ ಪ್ರತಿನಿಧಿಸಿದ್ದಾರೆ. ಗೆಲ್ಲಿಸಿದ ಜನರಿಗಾಗಿ, ಕ್ಷೇತ್ರಕ್ಕಾಗಿ ಮುತುವರ್ಜಿಯಿಂದ ಕೆಲಸ ಮಾಡುವ ಮನುಷ್ಯ. ಆದರೆ, ಜಂಭದ ಕೋಳಿ. ದುಡ್ಡಿನ ಅಮಲನ್ನು ನೆತ್ತಿಗೇರಿಸಿಕೊಂಡ ಮನುಷ್ಯ. ಈತನಿಗೆ ಬೀಳಗಿಯಲ್ಲಿ ಒಂದಿಷ್ಟು ಬೇಸ್ ಇದೆ ಬಿಟ್ಟರೆ ಇಡೀ ಬಾಗಲಕೋಟೆಯಲ್ಲಿ ಹೇಳಿಕೊಳ್ಳುವಂಥ ಜನಪ್ರಿಯತೆಯಿಲ್ಲ.


ಜಗದೀಶ್


ಶ್ರೀನಾಯಕ್


ಚಿಮ್ಮನಕಟ್ಟಿ


ನಂಜಯ್ಯ


ಮಲಘಾಣ

ರೆಡ್ಡಿ ವ್ಯಾಮೋಹ ಜಾಸ್ತಿ. ಯುವಕರ ದಂಡೂ ಜೆ.ಟಿ.ಯ ಬೆನ್ನಿನ ಹಿಂದೆ ಇಲ್ಲ. ಇದೆಲ್ಲ ಅವರ ವೀಕ್ ಪಾಯಿಂಟ್; ಹಣದ ಥೈಲಿಯೇ ಅವರ ಪ್ಲಸ್ ಪಾಯಿಂಟ್. ಹಾಗಾಗಿ ಈತನಿಗೂ ಈ ಬಾರಿ ಟಿಕೆಟ್ ಸಿಗೋದು ಗ್ಯಾರಂಟಿಯಿಲ್ಲ.

ಇನ್ನು ಅಜಯ್‌ಕುಮಾರ್ ಸರನಾಯಕ ಜಾತಿಯಿಂದ ರೆಡ್ಡಿಯಾದರೂ ಉಳಿದ ಲಿಂಗಾಯತ ಪಂಗಡಗಳಲ್ಲಿ, ಇನ್ನಿತರ ಜಾತಿಗಳ ಜನರ ನಡುವೆ ಸಹಜ ಬಾಂಧವ್ಯವನ್ನಿಟ್ಟುಕೊಂಡಿರುವ ವ್ಯಕ್ತಿ. ಈ ಹಿಂದೆ ರಾಮಕೃಷ್ಣ ಹೆಗಡೆ ಕಾಲದಲ್ಲಿ ಕ್ರೀಡಾ ಮಂತ್ರಿಯಾಗಿದ್ದ ಸರನಾಯಕ ಒಮ್ಮೆ ಸಂಸದನಾಗಿಯೂ ಆಯ್ಕೆಯಾಗಿದ್ದರು. ಆದರೆ, ಅದೆಲ್ಲ ಈಗ ಚರಿತ್ರೆ. ಮೊನ್ನೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಬೀಳಗಿ ಕ್ಷೇತ್ರದಲ್ಲಿ ಅಲ್ಪ ಮತಗಳ ಅಂತರದಿಂದ ಸೋತಿದ್ದರು. ಈಗ ಬಾಗಲಕೋಟೆಯ ಟಿಕೆಟ್ ಅನ್ನು ಇವರಿಗೆ ಕೊಡುವುದಕ್ಕೆ ಹೈಕಮಾಂಡ್‌ಗೆ ಒಲವಿದೆಯೆಂದೂ ಆದರೆ ಅದಕ್ಕೆ ಸರನಾಯಕ ಒಪ್ಪುತ್ತಿಲ್ಲವೆಂದೂ ಗುಲ್ ಇದೆ. ಹಾಗೇನಾದರೂ ಇವರು ಸ್ಪರ್ಧೆಯಿಂದ ಹಿಂದೆ ಸರಿದರೆ ಜೆ.ಟಿ. ಅಥವಾ ಜಂಗಮ ಜಗದೀಶ್ ಬೆಂಬಲಕ್ಕೆ ನಿಲ್ಲುವ ಛಾನ್ಸು ಜಾಸ್ತಿಯಿದೆ.

ಶಿವಕುಮಾರ್ ಮಲಘಾಣ ಜಾತಿಯಲ್ಲಿ ರೆಡ್ಡಿ ಲಿಂಗವಂತನಾದರೂ ಉಳಿದೆಲ್ಲ ಜನಸಮುದಾಯಗಳ ನಡುವೆ ಉತ್ತಮ ಬಾಂಧವ್ಯ [illegible] ಮನುಷ್ಯ. ಜನರ ನಡುವೆ ವಿಸ್ತತ ಸಂಪರ್ಕಗಳಿವೆ. ಈ ಹಿಂದೆ ಜನತಾಪಕ್ಷದಿಂದ ಲೋಕಸಭೆಗೆ ಸ್ಪರ್ಧಿಸಿ ಅಲ್ಪ ಅಂತರದಿಂದ ಸೋತಿದ್ದರು. ಎರಡು ಬಾರಿ ಜಿಲ್ಲಾ ಪಂಚಾಯತ್ ಅಧ್ಯಕ್ಷರಾಗಿ ಉತ್ತಮ ಕೆಲಸ ಮಾಡಿದ್ದರಿಂದ ಜನಪ್ರಿಯತೆ ಇದೆ. ಆದರೆ, ದುರಂತ ಎಂದರೆ ಈ ಬಾರಿ ಲೋಕಸಭಾ ಟಿಕೆಟ್ ನೀಡುವುದಕ್ಕೆ ಮಲಘಾಣರ ಹೆಸರನ್ನು ಹೈಕಮಾಂಡ್ ಪರಿಗಣನೆಗೆ ತೆಗೆದುಕೊಂಡಿಲ್ಲ.

ಜಗದೀಶ್ ಗುಡಗುಂಟ ಜಾತಿಯಿಂದ ಲಿಂಗಾಯತ ಜಂಗಮ. ಉತ್ಸಾಹಿ ಯುವಕ. ಗಾಣಿಗ ಲಿಂಗಾಯತ ಗದ್ದಿಗೌಡರನ್ನು ಮಕಾಡೆ ಮಲಗಿಸುವ ತಾಕತ್ತಿರುವ ಮನುಷ್ಯ. ಪ್ರಭುಲಿಂಗೇಶ್ವರ ಷುಗರ್ಸ್ ಮತ್ತು ಕೆಮಿಕಲ್ಸ್ ಫ್ಯಾಕ್ಟರಿಯ ಮಾಲಿಕ. ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸುಮಾರು ಒಂದು ಲಕ್ಷ ಜನರಿಗೆ ಆಶ್ರಯ ನೀಡಿರುವ ಫ್ಯಾಕ್ಟರಿಯಿದು. ಈತ ಕಾಂಗ್ರೆಸ್‌ಗೆ ಬಂದು ಒಂದು ದಶಕ ಕಳೆದಿದೆ. ಯುವ ಟಿಕೆಟ್ ಆಕಾಂಕ್ಷಿಗಳ ಪಟ್ಟಿಯಲ್ಲಿರುವ ಈತನಿಗೆ ಟಿಕೆಟ್ ತಪ್ಪಿಸಲು ಮುದಿ ಆಕಾಂಕ್ಷಿಗಳು ಪ್ರಯತ್ನ ನಡೆಸಿದ್ದಾರೆ. ಪಕ್ಷದ ಹಿಡಿತ ಯುವಕರಿಗೆ ಹೋದರೆ ತಮ್ಮ ರಾಜಕೀಯ ಭವಿಷ್ಯ ಮುಗಿದಂತೆಯೇ ಎಂಬ ಹೆದರಿಕೆ ಅವರದ್ದು. ಈತ ಜಂಗಮನಾಗಿರುವುದರಿಂದ (ಲಿಂಗಾಯತ ಸ್ವಾಮಿ) ಉಳಿದೆಲ್ಲ ಲಿಂಗಾಯತ ಪಂಗಡಗಳೂ ಸಾಮಾನ್ಯವಾಗಿ ಇವರನ್ನು ಬೆಂಬಲಿಸುತ್ತವೆ. ದುಡ್ಡಿನ ದೃಷ್ಟಿಯಿಂದ, ಜನಪ್ರಿಯತೆಯ ದೃಷ್ಟಿಯಿಂದ, ವಯಸ್ಸಿನ ದೃಷ್ಟಿಯಿಂದ – ಹೀಗೆ ಯಾವ ದಿಕ್ಕಿನಿಂದ ನೋಡಿದರೂ ಇದ್ದುದರಲ್ಲಿ ಜಿಲ್ಲಾ ಕಾಂಗ್ರೆಸ್‌ಗೆ ಜೀವ ತರಬಲ್ಲ ವ್ಯಕ್ತಿಯೆಂದರೆ ಗುಡಗುಂಟಿಯೇ. ರಾಜ್ಯ ಕಾಂಗ್ರೆಸ್ ನಾಯಕರು ಅವರನ್ನು ಪರಿಗಣಿಸಬೇಕಷ್ಟೆ. ಇಲ್ಲದಿದ್ದರೆ ಈ ಚುನಾವಣೆಯಲ್ಲೂ ಬಾಗಲಕೋಟೆಯೆಂಬ ಬಿಜೆಪಿ ಭದ್ರಕೋಟೆಯನ್ನು ಮುರಿಯುವುದು ಕಾಂಗ್ರೆಸ್‌ಗೆ ಕಷ್ಟವಾಗುತ್ತದೆ.

● ಮೇಘರಾಜ್



ಗುಲ್ಬರ್ಗಾ: ಮಹಾನಗರ ಪಾಲಿಕೆಯಲ್ಲಿ ಜಂಗೀಕುಸ್ತಿ

ಗುಲಬರ್ಗಾ ಮಹಾನಗರ ಪಾಲಿಕೆಗೆ ವಕ್ಕರಿಸಿದ ...ಷೋಳ ಎಂಬ ಭ್ರಷ್ಟ ಕಮೀಷನರ್ ಹಾಗೂ ... ಜೊತೆಗೆ ಸಿಕ್ಕಾಪಟ್ಟೆ ಅಮೇಧ್ಯ ತಿಂದ ಇಂಜಿನಿಯರ್ ...ಬ ಹಂದಿಗಳು ಕೊನೆಗೂ ಹೋದವು ಎಂದು ...ನ ಜನ ನಿಟ್ಟುಸಿರು ಬಿಡುವಷ್ಟರಲ್ಲಿ ಮಹಾನಗರ ...ಕೆ ಮತ್ತೊಮ್ಮೆ ಸುದ್ದಿಯಲ್ಲಿದೆ. ಈ ಬಾರಿಯ ... ಉಪಮೇಯರ್ ಮತ್ತು ಕಮೀಷನರ್ ನಡುವಿನ ...ೀ ಕುಸ್ತಿ ಕುರಿತದ್ದು.


...ಗುಲಬರ್ಗಾದಲ್ಲಿ ಮಹಾನಗರ ಪಾಲಿಕೆ ಅಸ್ತಿತ್ವಕ್ಕೆ ...ದ ತರುವಾಯ ಒಬ್ಬನೊಬ್ಬ ಐಎಎಸ್ ಅಧಿಕಾರಿ ...ಷನರ್ ಹುದ್ದೆಯಲ್ಲಿ ಬಂದು ಕುಳಿತಿರಲಿಲ್ಲ. ಇದು ... ಬಡ್ತಿ ಹೊಂದಿದವರು, ಪೌರಾಡಳಿತ ಸೇವೆಯ ...ಾರಿಗಳೇ ಕಮೀಷನರ್ ಆಗಿ ಬಂದಿದ್ದರು. ತೀರಾ ...ಚೆಗೆ ಗುಲಬರ್ಗಾದ ಪ್ರಭಾರಿ ಜಿಲ್ಲಾಧಿಕಾರಿಯಾಗಿ ... ತಿಂಗಳು ಕಾರ್ಯನಿರ್ವಹಿಸಿದ್ದ ಡಾ.ಕೆ.ಜಿ. ...ದೀಶ್ ಅವರ ಮಹಾನಗರ ಪಾಲಿಕೆಯ ಕಮೀಷನರ್ ... ಸರಕಾರ ವರ್ಗಾವಣೆ ಮಾಡಿದಾಗ ಬಹಳಷ್ಟು ... ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದರು.

... ವರ್ಷಗಳಿಂದ ಮಹಾನಗರ ಪಾಲಿಕೆಯ ...ವನ್ನು ಹಾಗೂ ಕೊಳೆಯನ್ನು ಹಂತಹಂತವಾಗಿ ಜಗದೀಶ್ ಕಿತ್ತೊಗೆಯುತ್ತಾರೆ ಎಂಬ ನಂಬುಗೆ ಜನರಿಗಿತ್ತು. ಅವರ ನಂಬುಗೆಯೇನು ಹುಸಿಯಾಗಲಿಲ್ಲ. ಕೇಳುವವರೆ ಇಲ್ಲದೆ ಅಕ್ಷರಶಃ ಅನಾಥವಾಗಿದ್ದ ಮಹಾನಗರ ಪಾಲಿಕೆಗೆ ಕಳೆ ತುಂಬಿದ್ದೇ ಜಗದೀಶ್. ಇಷ್ಟು ವರ್ಷಗಳ ಕಾಲ ಹೆಸರಿಗೆ ಮಾತ್ರ ಮಹಾನಗರ ಪಾಲಿಕೆಯ ನೌಕರರಾಗಿದ್ದ ಜನ ತಮ್ಮ ಹುದ್ದೆಯ ಕುರ್ಚಿಯ ಮೇಲೆ ಕುಳಿತು ಕೆಲಸ ಮಾಡಿದ್ದೇ ಜಗದೀಶ್ ಬಂದ ತರುವಾಯ.

ಕಚೇರಿಯಲ್ಲಿನ ಬ್ರಹ್ಮಾಂಡ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿದ ಜಗದೀಶ್ ಜನನ – ಮರಣ ನೊಂದಣಿಯನ್ನು ಆನ್ ಲೈನ್ ಮಾಡಿದರು. ನಾಲ್ಕು ವಲಯ ಕಚೇರಿ ಮಾಡಿ ಐವತ್ತೈದು ವಾರ್ಡ್‌ಗಳನ್ನು ವಿಭಜಿಸಿ ಆಯಾ ವಾರ್ಡ್ ಕೆಲಸಗಳನ್ನು ವಲಯ ಕಚೇರಿಗಳಿಗೆ ವಹಿಸಿಕೊಟ್ಟು ಪಾಲಿಕೆಯನ್ನು ಜನರ ಬಳಿಗೆ ಕೊಂಡೊಯ್ದರು. ಕೇವಲ ಪರ್ಸೆಂಟೇಜ್‌ಗಾಗಿ ಕೆಲಸ ಮಾಡುತ್ತಿದ್ದ ಇಂಜಿನಿಯರ್‌ಗಳು ಎ.ಸಿ. ಕೊಠಡಿ ಬಿಟ್ಟು ದಾರಿಯ ಮೇಲೆ ನಡೆದಾಡಿ ಕಾಮಗಾರಿಯನ್ನು ಗಮನಿಸುವಂತಾದರು. ವ್ಯಾಪಾರಸ್ಥರು ನಗರಪಾಲಿಕೆಯಿಂದ ಟ್ರೇಡ್ ಲೈಸನ್ಸ್ ಪಡೆಯಬೇಕು ಎಂದು ಜಗದೀಶ ಆಜ್ಞೆ ಹೊರಡಿಸಿ ಸರಕಾರದ ಬೊಕ್ಕಸಕ್ಕೆ ಅಪಾರ ನಷ್ಟ ಉಂಟುಮಾಡುತ್ತಿದ್ದನ್ನು ತಡೆದರು. ಇದೆಲ್ಲ ಜಗದೀಶ್ ಅವರ ಎಫೆಕ್ಟ್ ಅಂದರೆ ತಪ್ಪಾಗಲಾರದು.

ಈ ದಕ್ಷತೆಯ ಜೊತೆಜೊತೆಗೆ ಡಾ. ಜಗದೀಶ್ ವಿನಯವಂತಿಕೆ ರೂಢಿಸಿಕೊಂಡಿದ್ದರೆ ಅದು ಅವರ ವ್ಯಕ್ತಿತ್ವಕ್ಕೊಂದು ಗರಿಯಾಗುತ್ತಿತ್ತು. ತಾನು ಭ್ರಷ್ಟನಲ್ಲ, ಜನರಿಗಾಗಿ ಕೆಲಸ ಮಾಡುವ ಐಎಎಸ್ ಅಧಿಕಾರಿ ಎಂಬುದು ಕೇವಲ ಸ್ವಾಭಿಮಾನದ ಹಂತಕ್ಕೇ ನಿಲ್ಲದೇ ಅದೊಂದು ಅಹಮ್ಮಾಗಿ ತಲೆಗೇರಿಬಿಟ್ಟಿದೆ. ಜನತೆಯಿಂದ ನೇರವಾಗಿ ಚುನಾಯಿತನಾಗಿ ಬಂದ ಪಾಲಿಕೆಯ ಸದಸ್ಯರು ಮೇಯರ್- ಉಪಮೇಯರ್‌ಗಳು ಕಮೀಷನರ್‌ರಿಗೆ ಭೇಟಿಯಾಗಬೇಕೆಂದರೆ ನಿಗದಿತ ಸಮಯದಲ್ಲಿ ಮಾತ್ರ ಭೇಟಿ ಯಾಗುವ ಅವಕಾಶ ಇದೆ. ಇದು ಮೇಲು ನೋಟಕ್ಕೆ ಶಿಸ್ತುಬದ್ಧ ನಿಯಮ ಅನ್ನಿಸಿದರೂ ಒಳಗಿನ ದುರಹಂಕಾರವನ್ನು ಸೂಚಿಸುತ್ತದೆ. ಕಮೀಷನರರ ಈ ನಡವಳಿಕೆ ಬಹುತೇಕ ನಗರ ಪಾಲಿಕೆಯ ಸದಸ್ಯರಿಗೆ ರೇಜಿಗೆ ತಂದದ್ದು ಸುಳ್ಳಲ್ಲ. ಅವರೆಲ್ಲ ಕಮೀಷನರ್‌ರನ್ನು ಹೈರಾಣ ಮಾಡಬೇಕೆಂದು ಸಮಯಕ್ಕಾಗಿ ಹೊಂಚು ಹಾಕಿದ್ದರು.





ಮಾಜಿ ಮುಖ್ಯಮಂತ್ರಿ ಧರ್ಮಸಿಂಗ್ ಅವರ ಸಹೋದರ ಸಂಬಂಧಿಯಾಗಿರುವ ಉಪ ಮೇಯರ್ ಪ್ರಮೋದ ತಿವಾರಿಗೆ ಸಹಜ ವಾಗಿಯೆ ಸುಪಿರಿಯಾರಿಟಿ ಕಾಂಪ್ಲೆಕ್ಸ್. ಮೇಯರ್ ಸಹೀದಾ ಬೇಗಂ ಮಾತು ಒತ್ತಟ್ಟಿಗಿರಲಿ, ತನ್ನ ಮಾತನ್ನೂ ಈ ಮಾಮೂಲಿ ಕಮೀಷನರ್ ಉಪೇಕ್ಷಿಸುತ್ತಾನೆಂದು ಆತನಿಗೆ ಕೋಪವಿತ್ತು. ಅದಕ್ಕಾಗಿ ಅವನೂ ಜಗದೀಶ್‌ಗೆ ಬಿಸಿ ಮುಟ್ಟಿಸುವುದಕ್ಕೆ ಕಾದಿದ್ದ. ಮೊನ್ನೆ ಈ ಕಳ್ಳನಿಗೊಂದು ಪಿಳ್ಳೆನೆವ ಸಿಕ್ಕೇಬಿಟ್ಟಿತು ಉಪ ಮೇಯರ್‌ಗಾಗಿ ಇರುವ ಕಾರು ರಿಪೇರಿಗಾಗಿ ಗ್ಯಾರೇಜಿನಲ್ಲಿತ್ತು. ಅದನ್ನು ಬೇಗ ತರಿಸಿಕೊಡುವುದಕ್ಕೆ ಕಮೀಷನರ್ ಕ್ರಮ ತೆಗೆದುಕೊಂಡಿದ್ದರು. ಆದರೆ ಹೇಗಾದರೂ ಸೈ ಕಾಲು ಕೆದರಿ ಜಗಳ ತೆಗೆಯಬೇಕೆಂದು ಹೊಂಚು ಹಾಕಿದ್ದ ಪ್ರಮೋದ್‌ಗೆ ಯಾವ ಕಾರಣವೂ ಬೇಕಿರಲಿಲ್ಲ. ಮೊನ್ನೆ ಸೋಮವಾರ ಮಧ್ಯಾಹ್ನ ತನ್ನ ಬೆಂಬಲಿಗ ಸದಸ್ಯರೊಂದಿಗೆ ಬಂದು ಕಮೀಷನರ್ ಕಾರಿನಲ್ಲಿ ಕುಳಿತುಕೊಂಡು ಬೇರೆಲ್ಲಿಗೋ ಕರೆದುಕೊಂಡು ಹೋಗುವಂತೆ ಡ್ರೈವರ್‌ಗೆ ಅಪ್ಪಣೆ ಮಾಡಿದ್ದಾನೆ. 'ಸಾಹೇಬರು ಊಟಕ್ಕೆ ಹೋಗುವವರಿದ್ದಾರೆ, ಅವರಿಂದ ಒಂದು ಮಾತು ಹೇಳಿಸಿ' ಎಂದು ಡ್ರೈವರ್ ವಿನಂತಿಸಿಕೊಂಡಿದ್ದಾನೆ. ಕೊನೆಗೆ ಪ್ರಮೋದ್ ಕಮೀಷನರ್ ಕಚೇರಿಯ ಒಳಹೊಕ್ಕು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಲ್ಲದೇ, ಅವರ ಮೇಲೆ ತೋಳು ಏರಿಸಿಕೊಂಡು ಹೋಗಿದ್ದಾನೆ.

ಇಂಥ ಸಂದರ್ಭದಲ್ಲಿ ಕಮೀಷನರ್ ಒಂದಿಷ್ಟು ಚಾಕಚಕ್ಯತೆ ಪ್ರದರ್ಶಿಸಿ ಸ್ವಲ್ಪ ಜಾಣತನ ಪ್ರದರ್ಶಿಸಿದ್ದರೆ ಪಾಲಿಕೆಯಲ್ಲಿ ಈ ಜಂಗಿ ಕುಸ್ತಿಯೇ ನಡೆಯುತ್ತಿರಲಿಲ್ಲ. ಈ ಜಟಾಪಟಿಯಲ್ಲಿ ಪಾಲಿಕೆಯ ಸದಸ್ಯರೆಲ್ಲಾ ಪಕ್ಷ ಭೇದ ಮರೆತು ಕಮೀಷನರ್ ಡಾ.ಕೆ.ಜಿ.ಜಗದೀಶ್ ವಿರುದ್ಧ ತಿರುಗಿಬಿದ್ದರೆ ಪಾಲಿಕೆಯ ನೌಕರರು ಕಮೀಷನರ್ ಪರವಾಗಿ ನಿಂತಿಬಿಟ್ಟರು.

ಕೆಂಪುಗೂಟದ ಕಾರಿನ ನೆಪದಲ್ಲಿ ಒಣ ಪ್ರತಿಷ್ಠೆಗಾಗಿನ ಸದರಿ ಕುಸ್ತಿ ಈಗತಾನೆ ಆರಂಭವಾಗಿದೆ. ಅದು ಸದ್ಯಕ್ಕೆ ಮುಗಿಯುವ ಲಕ್ಷಣ [illegible] ಬೀದಿಗೆ ಇಳಿದು ಕ್ಯಾಕರಿ ... ಗಿಯಬೇಕಷ್ಟೆ.

● ವಿಶ್ವಾರಾಧ್ಯ ಸತ್ಯಂಪೇಟೆ



ಮುಸ್ಲಿಮರ ಕೊಡುಗೆ ಬೇಕಾದಷ್ಟಿದೆ

● ಡಾ. ಸಾರಾ ಅಬೂಬಕ್ಕರ್

ಮುಸ್ಲಿಮರಿಂದ ಈ ದೇಶಕ್ಕೆ ಏನೂ ಒಳ್ಳೆಯದಾಗಿಲ್ಲವೇ? 'ಭಾರತ ಪ್ರಕಾಶಿಸುತ್ತಿದೆ' ಎಂಬ ಮಾತಿನ ಹಿಂದೆ ಮುಸ್ಲಿಮರ ಕೊಡುಗೆಯೂ ಸಾಕಷ್ಟಿದೆ. ನಮ್ಮ ಹಿಂದಿ ಸಿನಿಮಾ ಕ್ಷೇತ್ರವನ್ನೇ ನೋಡಿ. 40ರ ದಶಕದಿಂದ ಪ್ರಾರಂಭಿಸಿ ದಿಲೀಪ್‌ಕುಮಾರ್, ನರ್ಗೀಸ್ ಮೊದಲ್ಗೊಂಡು ಇಂದಿನವರೆಗೂ ಮಿಂಚುತ್ತಿರುವ ಮುಸ್ಲಿಮರಿಗೆ ಲೆಕ್ಕವಿಲ್ಲ.

ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಕರ್ನಾಟಕವನ್ನು ಗುಜರಾತ್ ಮಾಡಲಾಗುವುದು ಎಂಬ ಮಾತುಗಳು ಅಲ್ಲಲ್ಲಿ ಕೇಳಿ ಬರುತ್ತಿದ್ದವು. ಅದೇ ರೀತಿ ಬಿಜೆಪಿ ಅಧಿಕಾರಕ್ಕೆ ಬಂದಂದಿನಿಂದಲೇ ಕರ್ನಾಟಕದ ಕರಾವಳಿ ಜಿಲ್ಲೆಯನ್ನು ಯಾವ ರೀತಿ ಕೇಸರೀಕರಣಗೊಳಿಸಲಾಗುತ್ತಿದೆ ಎಂಬುದನ್ನು ನಾವು ನೋಡುತ್ತಲೇ ಇದ್ದೇವೆ. ವಿದ್ಯಾರ್ಥಿಗಳು ತಮ್ಮ ಸಹಪಾಠಿಗಳೊಡನೆ ಐಸ್‌ಕ್ರೀಂ ಪಾರ್ಲರ್‌ಗೆ ಹೋಗಬಾರದು; ಪರಿಚಯಸ್ಥರನ್ನು ಕಂಡರೆ ಮಾತನಾಡಿಸಬಾರದು; ಪರಿಚಯದ ನಗು ಬೀರಬಾರದು; ಪೊಲೀಸರಿಗೆ ದೂರು ನೀಡಿದರೆ ದೂರು ನೀಡಿದವರನ್ನೇ ಬಂಧಿಸಿ ಚಿತ್ರಹಿಂಸೆ ನೀಡಿ ಬೀದಿಗೆಸೆಯಲಾಗುತ್ತದೆ. ಹೆಣ್ಣುಗಂಡುಗಳ ಮೇಲೆ ನಿರ್ಬಂಧಗಳನ್ನು ಹೇರುತ್ತಲೇ ಜನಸಾಮಾನ್ಯರ ಬದುಕನ್ನು ಅಸಹನೀಯವಾಗಿಸುತ್ತಿದ್ದಾರೆ. ವೈದ್ಯಕೀಯ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿ ಲಾಲ್‌ಭಾಗ್ ಬಸ್‌ಸ್ಟ್ಯಾಂಡ್‌ನಲ್ಲಿ ನಿಂತು ಮಾತನಾಡುವುದನ್ನು ಕಂಡ ಬಸ್ಸಿನ ಟೈಂ ಕೀಪರ್ ಇನ್ನೂ ಕೆಲವರೊಡನೆ ಆ ವೈದ್ಯಕೀಯ ವಿದ್ಯಾರ್ಥಿಯ ಮೇಲೆ ಹಲ್ಲೆ ನಡೆಸಿ ಆ ಹುಡುಗಿಯನ್ನು ರಿಕ್ಷಾದಲ್ಲಿ ಕರೆದೊಯ್ದರು. ವಿದ್ಯಾರ್ಥಿ ಮುಸ್ಲಿಮನಾಗಿದ್ದುದು ಇದಕ್ಕೆ ಕಾರಣವಾಗಿತ್ತು. ಇದು ಯಾವ ಪತ್ರಿಕೆಯಲ್ಲೂ ಸುದ್ದಿಯಾಗಲಿಲ್ಲ. ಇಂತಹ ಘಟನೆಗಳು ಇತ್ತೀಚೆಗೆ ಅಲ್ಲಲ್ಲಿ ನಡೆಯುತ್ತಲೇ ಇರುತ್ತವೆ. ಇವುಗಳನ್ನು ಚಿಕ್ಕಪುಟ್ಟ ಘಟನೆಗಳೆಂದೇ ಹೇಳೋಣ. ಆದರೆ ಕೆಲವು ದಿನಗಳ ಹಿಂದೆ ನಡೆದ ಪಬ್ ಪ್ರಕರಣವನ್ನೂ ಕೂಡಾ "ಇದೊಂದು ಸಣ್ಣ ಘಟನೆ, ಇದನ್ನು ಮಾಧ್ಯಮಗಳು ದೊಡ್ಡದು ಮಾಡಿವೆ" ಎಂದು ರಾಜಕಾರಣಿಗಳು ವೇದಿಕೆಯ ಮೇಲಿನಿಂದ ಹೇಳುತ್ತಿರುವುದನ್ನು ಕೇಳುವಾಗ ಯಾವ ರೀತಿ ಪ್ರತಿಕ್ರಿಯಿಸಬೇಕೆಂದು ಅರ್ಥವಾಗುವುದಿಲ್ಲ. ಯಾವ ನಿಯಮವನ್ನೂ ಉಲ್ಲಂಘಿಸದ ಹರೆಯದ ಹೆಣ್ಣು ಮಕ್ಕಳನ್ನು ಸಾರ್ವಜನಿಕ ಸ್ಥಳದಲ್ಲಿ ಕೂದಲು ಹಿಡಿದೆಳೆದು ಹೊಡೆದು ಒದ್ದು ಹೊರಗೆ ಹಾಕುವುದನ್ನು ತಾಲಿಬಾನೀಕರಣವೆಂದಲ್ಲದೇ ಬೇರೇನೆಂದು ಹೇಳಬೇಕು? ನಮ್ಮೂರಿನ ಮೇಯರ್ ಮತ್ತು ನ್ಯಾಯವಾದಿಗಳು ಸಚಿವೆ ರೇಣುಕಾ ಚೌಧರಿಯವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಿದ್ದಾರೆ. ರೇಣುಕಾ ಚೌಧರಿಯವರು ಯಾರನ್ನೂ ಕೊಲೆ ಮಾಡಿಲ್ಲ; ಅಥವಾ ಹೆಣ್ಣು ಮಕ್ಕಳನ್ನು ಅಟ್ಟಾಡಿಸಿಕೊಂಡು ಹೊಡೆದು ಒದ್ದು ಹೊರಹಾಕಿಯೂ ಇಲ್ಲ. ಈ ವಿಷಯದಲ್ಲಿ ಮಂಗಳೂರಿನ ನಾಗರಿಕರು ಪತ್ರಿಕಾಗೋಷ್ಠಿ ಕರೆದು ರೇಣುಕಾ ಅವರಿಗೆ ನಾಗರಿಕರ ಬೆಂಬಲ ಸೂಚಿಸಿ, ರೇಣುಕಾ ಚೌಧರಿ ತಾಲಿಬಾನೀಕರಣವೆಂದದ್ದನ್ನು ಸಮರ್ಥಿಸಿದರು. ಆಗ ಅಲ್ಲಿಗೆ ಬಂದಿದ್ದ ಟಿ.ವಿ. ಚಾನೆಲ್ ವರದಿಗಾರನೊಬ್ಬ ಪತ್ರಿಕಾ ಗೋಷ್ಠಿ ಮುಗಿದ ಬಳಿಕ "ಉತ್ತರ ಭಾರತದಲ್ಲಿ ಇಂತಹ ಘಟನೆಗಳು ಆಗುತ್ತಲೇ ಇರುತ್ತವೆ. ಅದಕ್ಕೆಲ್ಲ ಈ ರೀತಿ ಪ್ರಚಾರ ದೊರೆಯಲಿಲ್ಲವಲ್ಲಾ? ಇದಕ್ಕೆ ಇಷ್ಟು ಪ್ರಚಾರವೇಕೆ?" ಎಂಬ ಪ್ರಶ್ನೆ ಹಾಕಿದ್ದಾನೆ. ಅಂದರೆ ಹೆಣ್ಣುಮಕ್ಕಳು ಮತ್ತು ಮಹಿಳೆಯರ ಮೇಲೆ ಯಾರೂ ಎಂತಹ ದೌರ್ಜನ್ಯವನ್ನೂ ಎಸಗಬಹುದು. ಅದಕ್ಕೆ ಪ್ರಚಾರ ನೀಡಬಾರದು ಅದೊಂದು ಸಣ್ಣ ವಿಷಯವೆಂದು ಬಿಟ್ಟುಬಿಡಬೇಕು. ತನಿಖೆ ಮಾಡಲು ಬಂದ ಮಹಿಳಾ ಆಯೋಗದ ಸದಸ್ಯೆ ನಿರ್ಮಲಾ ವೆಂಕಟೇಶ್ ದೌರ್ಜನ್ಯಕ್ಕೊಳಗಾದ ಮಹಿಳೆಯರನ್ನು ಸಂದರ್ಶಿಸದೆ ಪಬ್‌ನ ಮೇಲೆ ಕ್ರಮ ಕೈಗೊಳ್ಳಬೇಕೆಂದು ವರದಿ ಕಳುಹಿಸಿದ್ದಾರೆ. 'ಹೆಣ್ಣೇ ಹೆಣ್ಣಿನ ಶತ್ರು' ಎಂದು ಗಂಡಸರು ಮಹಿಳೆಯರನ್ನು ಹಂಗಿಸುತ್ತಿದ್ದುದಕ್ಕೂ ಮಹಿಳೆಯರು ಇಂತಹ ಪಕ್ಷಪಾತ ವರದಿ ನೀಡಿದಕ್ಕೂ ಸರಿಯಾಯಿತು! ನಿರ್ಮಲಾ ವೆಂಕಟೇಶ್ ಬಿಜೆಪಿ ಸೇರಲು ಇಷ್ಟೆಲ್ಲಾ ಕಸರತ್ತು ಮಾಡಬೇಕಾಗಿತ್ತೇ? ಇಂದಿನ ರಾಜಕಾರಣಿಗಳ ಈ ನಡವಳಿಕೆಗಳನ್ನು ನಾಟಕವೆನ್ನಬೇಕೋ, ದೊಂಬರಾಟವೆನ್ನಬೇಕೋ ತಿಳಿಯದು.






ತಪ್ಪು ಮಾಡುವುದು ಮಾನವ ಸಹಜ ಗುಣ. ಆದರೆ ತಪ್ಪನ್ನು ಒಪ್ಪಿಕೊಂಡು ಇನ್ನು ಮುಂದೆ ಆಗದಂತೆ ನೋಡಿಕೊಳ್ಳುತ್ತೇವೆ ಎನ್ನುವುದು ಅಪರಾಧವೆಸಗಿದವರ ದೊಡ್ಡಗುಣ. ಆದರೆ ಇಷ್ಟೆಲ್ಲ ಮಾಡಿಯೂ ಇದೊಂದು ಸಣ್ಣ ಘಟನೆ ಎನ್ನುವುದು, ನಾವು ಇನ್ನು ಮುಂದೆ ಕೂಡಾ ಹೀಗೆಯೇ ವರ್ತಿಸುತ್ತೇವೆನ್ನುವುದು ಈ ಜನರು ತಲುಪಿರುವ ಅಧೋಗತಿಯನ್ನು ಸೂಚಿಸುತ್ತದೆಯಲ್ಲವೇ? ಇಂತಹ ಜನರನ್ನು ಈ ದೇಶದ ನಾಗರಿಕ ಪ್ರಜೆಗಳೆಂದು ಒಪ್ಪಿಕೊಳ್ಳಲು ಹೇಗೆ ಸಾಧ್ಯ?

ಇನ್ನು ಪತ್ರಿಕೆಗಳ ಕೇಸರೀಕರಣವನ್ನು ನೋಡಿ. ಕೇರಳದ ಎಂಎಲ್‌ಎಯವರ ಪುತ್ರಿಯ ಪ್ರಕರಣದಲ್ಲಿ ಆಕೆ ಪ್ರಯಾಣಿಸುತ್ತಿದ್ದ ಬಸ್ಸಿನಲ್ಲಿದ್ದವನು ಆಕೆಯ ತಮ್ಮನ ಸ್ನೇಹಿತನಾಗಿದ್ದರೂ, 'ಆಕೆಯ ಗೆಳೆಯ' ಎಂದೇ ಪತ್ರಿಕೆಗಳು ಬರೆದವು. ಮಾತ್ರವಲ್ಲ ಆಕೆಯ ಮೇಲೆ ಆಕ್ರಮಣ ಮಾಡಿದವರು ಡಿವೈಎಫ್‌ಐ ಕಾರ್ಯಕರ್ತರೆಂದು ಯಾವ ಅಳುಕೂ ಇಲ್ಲದೇ ಸುಳ್ಳು ಪ್ರಚಾರ ಮಾಡಿದರು. ಹಾಗೆಯೇ ಕಿನ್ನಿಗೋಳಿಯ ಹುಡುಗಿಯ ಆತ್ಮಹತ್ಯೆಗೆ ಅನ್ಯಕೋಮಿನ ಹುಡುಗ ಅತ್ಯಾಚಾರ ಮಾಡಿದ್ದು ಕಾರಣವೆಂದು ಬರೆಯಿತು. ಕಿನ್ನಿಗೋಳಿಯ ಸತ್ಯ ಘಟನೆ ಏನೆಂದು "ಲಂಕೇಶ್" ಪತ್ರಿಕೆ ಓದಿದ ಬಳಿಕ ತಿಳಿಯಿತು. ಈ ಎರಡೂ ಪ್ರಕರಣಗಳಲ್ಲೂ ಪೊಲೀಸ್ ತನಿಖೆ ನಡೆಯುತ್ತಿದೆ ಮತ್ತು ಈ ವಿಷಯವನ್ನು ಪೊಲೀಸರು ದೃಢೀಕರಿಸಿಲ್ಲ. ಆದರೆ ಪತ್ರಿಕೆ (ಪ್ರಜಾವಾಣಿ ಕೂಡಾ) ಡಿವೈಎಫ್‌ಐ ಮತ್ತು ಸಲೀಂ ಎಂಬುವವನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ಆಗಿದೆ. ಇನ್ನು ಇವರಿಗೆ ಶಿಕ್ಷೆ ಕೊಡುವುದು ಮಾತ್ರ ಬಾಕಿ!

ಇಂದು ಮಂಗಳೂರಿನಲ್ಲಿ ಮುಸ್ಲಿಮರಿಗೆ ಮನೆ ಬಾಡಿಗೆಗಾಗಲಿ, ಕೊಂಡುಕೊಳ್ಳಲಾಗಲಿ ದೊರೆಯುತ್ತಿಲ್ಲ. ಅಂಗಡಿಗಳಲ್ಲಿ ನೌಕರರ ಅವಶ್ಯಕತೆ ಇದ್ದರೂ ಕೆಲಸ ಖಾಲಿ ಇದ್ದರೂ ಮುಸ್ಲಿಮರಿಗೆ ನೌಕರಿ ನೀಡುವುದಿಲ್ಲ. 'ನಾವು ಮುಸ್ಲಿಮರನ್ನು ತೆಗೆದುಕೊಳ್ಳುವುದಿಲ್ಲ' ಎಂದು ಅಳುಕಿಲ್ಲದೇ

ನಗರದ ಬಹುರೂಪಿಗಳ ಚಿತ್ರಿಸುವ 'ಬಹುಮುಖಿ'

ಪುಸ್ತಕ ವಿಮರ್ಶೆ



ಬಹುಮುಖಿ (ನಾಟಕ)

ವಿವೇಕ ಶಾನಭಾಗ

ಪುಟಗಳು : 60 ಬೆಲೆ: ರೂ. 50/-


ಅಕ್ಷರ ಪ್ರಕಾಶನ

ಹೆಗ್ಗೋಡು, ಸಾಗರ, ಕರ್ನಾಟಕ

ಕಳೆದ ಎರಡು ದಶಕಗಳಿಂದ ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವ ವಿವೇಕ್ ಶಾನಭಾಗ ಕನ್ನಡದ ವಿಶಿಷ್ಟ ಕತೆಗಾರರು. ಸೂಕ್ಷ್ಮಸಂವೇದನೆಗಳನ್ನು ಅಭಿವ್ಯಕ್ತಿಯ ಕೇಂದ್ರವಾಗಿಸಿಕೊಂಡ ಈ ಲೇಖಕರು ಈಗಾಗಲೇ 'ಸಹಿ ಗೊಂಬೆ' ಎಂಬ ನಾಟಕವನ್ನು ಬರೆದಿದ್ದು ಅದು ನೀನಾಸಮ್ ತಿರುಗಾಟದ ಮೂಲಕ ಅನೇಕ ಕಡೆ ಪ್ರದರ್ಶನಗೊಂಡಿದೆ. ಇವರ ಎರಡನೆಯ ನಾಟಕ 'ಬಹುಮುಖಿ' ಪ್ರದರ್ಶನಕ್ಕೆಂದೇ ಆಕಾರ ತಳೆದಿದ್ದು ಹಲವು ಪ್ರದರ್ಶನಗಳ ಮೂಲಕ ಅಕ್ಷರದಂತಹ ಪ್ರತಿಷ್ಠಿತ ಪ್ರಕಾಶನದಿಂದ ಪ್ರಕಟಗೊಂಡಿದೆ.

ಪ್ರದರ್ಶನಕ್ಕೆಂದೇ ಆದ್ಯತೆಯ ಮೇಲೆ ರಚಿತಗೊಳ್ಳುವ ಅಥವಾ 'ಸೂಚಿಸಿದ ವಸ್ತು'ವಿನ ಹಂದರದ ಮೇಲೆ ನಾಟಕ ಮೈತಳೆಯುವ ಪರಂಪರೆ ನಮ್ಮಲ್ಲಿ ಹೊಸತೇನಲ್ಲ. ಜೊತೆಗೆ ಪ್ರಸಿದ್ಧ ನಾಟಕಕಾರರ ಒಡೆದ ಮೈಮನಸ್ಸುಗಳ ಥೀಮ್ ಒಳಗೊಂಡಂತಹ ನಾಟಕಗಳು ರಚಿತವಾಗುವಂತಹ ಕಾಲಘಟ್ಟವಿದಲ್ಲ. ಇಂದಿನ ಸಮಾಜದ ಸಮಸ್ಯೆಗಳು, ನಿರೀಕ್ಷಿಸುವ ಉತ್ತರಗಳು ಕಾಲಧರ್ಮಕ್ಕೆ ಅನುಗುಣವಾಗಿರುವುದರಿಂದ ನಾಟಕಕಾರರಾದ ಗಿರೀಶ್ ಕಾರ್ನಾಡ್, ಲಂಕೇಶ್ ಹಾಗೂ ಚಂದ್ರಶೇಖರ ಕಂಬಾರರ ನಾಟಕಗಳು ಇಂದು ನಮಗೆ ಪ್ರಸ್ತುತವಲ್ಲ.

ರಂಗಭೂಮಿ ಹಾಗೂ ರಂಗಕೃತಿಗಳು ಇಂದು ಜಾಗತೀಕರಣ, ಕುಸಿಯುತ್ತಿರುವ ಔದ್ಯೋಗಿಕತೆ, ಭಯೋತ್ಪಾದಕತೆ, ಮತಾಂಧತೆಗಳಂತಹ ಬಹುಮುಖಿ ಸಮಸ್ಯೆಗಳನ್ನು ತನ್ನ ಒಡಲಲ್ಲಿ ಹಿಡಿದಿಡಬೇಕಿದೆ. ಪ್ರಸಿದ್ಧ ಕತೆಗಾರರ, ಕಾದಂಬರಿಕಾರರ ಕೃತಿಗಳನ್ನು ರೂಪಾಂತರಿಸುವ, ಲೇಖಕರ ಕೃತಿಗಳ ಮೂಲಕ ಅವರ ಸಮಗ್ರ ಚಿತ್ರಣವನ್ನು ಕೊಡುವ ಪ್ರಯೋಗಗಳು ಇಂದು ರಭಸದಿಂದ ನಡೆಯುತ್ತಿವೆ. ಸಮಕಾಲೀನತೆಯನ್ನು ಸಮಯೋಚಿತವಾಗಿ ರಂಗಭೂಮಿ, ರಂಗಕೃತಿಯಲ್ಲಿ ಇಂದು ಹಿಡಿದಿಡುವ ಪ್ರಯತ್ನ ನಡೆಯಬೇಕಿದೆ. ಈ ನಿಟ್ಟಿನಲ್ಲಿ ಅಲ್ಲೊಂದು ಇಲ್ಲೊಂದು ಪ್ರಯತ್ನಗಳು ನಡೆಯುತ್ತಿವೆ. ಅಂತಹ ಒಂದು ಪ್ರಯತ್ನವೇ ವಿವೇಕ ಶಾನಭಾಗರ 'ಬಹುಮುಖಿ'ಯಾಗಿದೆ



ಹೆಸರೇ ಸೂಚಿಸುವಂತೆ ಭಾರತದ ಬಹುಮುಖಿ ಚಿತ್ರಣವನ್ನು ಹಿಡಿದಿಡುವ ನಾಟಕವಿದಾಗಿದೆ. ನಗರದಲ್ಲಿ ಅನಿವಾರ್ಯವಾಗಿ ವಾಸಿಸುವ ಬಹುಸಂಸ್ಕೃತಿಯ ಹಲವು ನೆಲೆಗಳ ಶೋಧವೂ ಇಲ್ಲಿ ನಡೆದಿದೆ. ಸಂಸ್ಕೃತಿ ಎಂದಾಗ ನಗರ ಜೀವನ ಒಳಗೊಳ್ಳಬಹುದಾದ ಹಲವು ಸಂಸ್ಕೃತಿಗಳು ಜೀವನಕ್ಕಾಗಿ ನಡೆಸುವ ಕಸರತ್ತು ಮತ್ತು ಕರಾಮತ್ತುಗಳು ಇಲ್ಲಿ ಚಿತ್ರಿತಗೊಂಡಿವೆ. ಮುಖ್ಯನಗರಿಯ ಪತ್ರಿಕಾ ಕಚೇರಿಯಲ್ಲಿ ಆರಂಭವಾಗುವ ಈ ನಾಟಕ ಅಂತ್ಯಗೊಳ್ಳುವುದು ಪೊಲೀಸ್ ಸ್ಟೇಷನ್‌ನಲ್ಲಿ.

ಇಲ್ಲಿನ ಎಲ್ಲರೂ ಧಾವಂತದಲ್ಲಿ ಓಡುವವರೇ. ಎಲ್ಲರೂ ಅವರವರ ಗುರಿಗಳ ಬೆನ್ನು ಹತ್ತಿದ್ದಾರೆ. ಅದೃಷ್ಟ ಪರೀಕ್ಷೆಗೆ ತೊಡಗಿದ್ದಾರೆ. ಪತ್ರಿಕೆಯ ಸಂಪಾದಕ ಆನಂದ ಬರಾದಾರನ ಬದುಕು ಆರಂಭವಾಗುವುದೇ ಪತ್ರಕರ್ತನಾಗಿ. ಸ್ಟೋರಿಗಳ ಬೆನ್ನುತ್ತಿದ ಅವನು ರೋಚಕ ಸುದ್ದಿಗಳಿಂದಾಗಿಯೇ ವೃತ್ತಿ ಜೀವನದಲ್ಲಿ ಯಶಸ್ವಿಯಾದವನು. ತನ್ನ ಕೆಳಗೆ ಕೆಲಸ ಮಾಡುವ ಪತ್ರಕರ್ತರಿಂದಲೂ ಅದನ್ನೇ ಬಯಸುವವನು. ಸಂಜಯ ಇಂತಹ ಒಬ್ಬ ಯುವ ಪತ್ರಕರ್ತ. ತನ್ನ ವೃತ್ತಿಯಲ್ಲಿ ಯಶಸ್ವಿಯಾಗುವ ಆಸೆಯಿಂದ ಕೆಂಪೇಗೌಡರ ವಂಶಸ್ಥ ಎಂದು ಹೇಳಿಕೊಂಡ ಶೇಖರ್ ಎಂಬುವನ ಬಲೆಗೆ ಬಿದ್ದು ಅವನ ಕತೆಯನ್ನು ನಂಬಿ ಪತ್ರಿಕೆಗೆ ಒಂದು ಲೇಖನ ಮಾಡುತ್ತಾನೆ. ರಾತ್ರೋರಾತ್ರಿ ಈ ಲೇಖನ ಭೂಗಳ್ಳರನ್ನು, ಮಾಫಿಯಾ ಜಗತ್ತನ್ನು, ರಾಜಕಾರಣವನ್ನು, ಪತ್ರಿಕೋದ್ಯಮವನ್ನು ತಲ್ಲಣಗೊಳಿಸಿಬಿಡುತ್ತದೆ. ಇದರ ಕೇಂದ್ರವಾದ ಸಂಜಯ ಮತ್ತು ಶೇಖರ್ ತಲೆತಪ್ಪಿಸಿಕೊಳ್ಳುತ್ತಾರೆ.

ಪತ್ರಿಕೋದ್ಯಮದಲ್ಲಿ ಯಶಸ್ವಿಯಾಗಲು ಸಂಜಯ ಕೆಂಪೇಗೌಡನ ವಂಶಸ್ಥನೆಂದು ಶೇಖರನ ಕತೆ ಬಳಸಿಕೊಂಡರೆ ಅರ್ಚಕನ ಮಗನಾದ ಶೇಖರ್ ತನ್ನ ಹೊಟ್ಟೆಪಾಡಿಗಾಗಿ ಕೆಂಪೇಗೌಡನ ವಂಶಾವಳಿಯ ಕತೆಯನ್ನು ಬಳಸಿಕೊಳ್ಳುತ್ತಾನೆ. ಈ ನಾಟಕದ ಇನ್ನೊಂದು ಪಾತ್ರ ಗುರು ಜಕ್ಕೂಜಿ. ಅವನೂ ಕೂಡ ಉದರನಿಮಿತ್ತಂ ಬಹುಕೃತ ವೇಷಂ ಎನ್ನುವಂತೆ ತನ್ನ ಜೀವನವನ್ನು ಬದಲಾಯಿಸಿಕೊಂಡವನು. ಶ್ರೀಮಂತ ಕುಟುಂಬಗಳಲ್ಲಿನ ಒಂಟಿತನದಿಂದಾಗಿ ನರಳುವ ಹೆಣ್ಣುಗಳ ಸಮಸ್ಯೆಗಳಿಗೆ ಸಾಂತ್ವನ ಹಾಗೂ ಧೈರ್ಯ ತುಂಬುವುದು ಅವನ ಕೆಲಸ. ಸಮಾಜದಲ್ಲಿ ತನ್ನದೇ ಆದ ವರ್ಚಸ್ಸನ್ನು ಬೆಳೆಸಿಕೊಂಡು ರಾಜಕಾರಣ, ಅಧಿಕಾರ ಸ್ಥಾನಗಳಲ್ಲಿ ತನ್ನ ಮಾತು ನಡೆಸುವವನಾಗಿದ್ದಾನೆ.

ಬಾಸಿಂಗದವನ ಮಗನಾದ ಸಂಜಯ, ಅರ್ಚಕನ ಮಗನಾದ ಶೇಖರ, ಜೋಯಿಸರ ಮಗನಾದ ಜಕ್ಕೂಜಿ-ಬದುಕಿನ ನಿರ್ವಹಣೆಗಾಗಿ ಕಂಡುಕೊಂಡ ದಾರಿಗಳು ಅನೇಕ. ಈ ಮೂರೂ ಪಾತ್ರಗಳು ಬದುಕಿಗಾಗಿ ಮಹಾನಗರಗಳಲ್ಲಿ ಹೊರಗಿನಿಂದ ಬಂದವರು ನಡೆಸುವ ಹುಡುಕಾಟಗಳು, ಬುದ್ಧಿವಂತಿಕೆಯ ಮಾರಾಟಗಳು ಅಸ್ತಿತ್ವಕ್ಕಾಗಿ ನಡೆಸುವ ಹೋರಾಟಗಳಾಗಿವೆ. 'ಚರಿತ್ರೆ ಪುರಾಣ'ವೆಂಬ ಸರಕನ್ನು ಇಲ್ಲಿ ನಂಬುವ ಮುಗ್ಧರಿಗಾಗಿ ಮಾರಾಟ ಮಾಡಲಾಗುತ್ತದೆ ಕೊಳ್ಳುಬಾಕ ಸಂಸ್ಕೃತಿಯಲ್ಲಿ ಪತ್ರಿಕೋದ್ಯಮವೂ, ಇತಿಹಾಸವೂ, ಮನಸ್ಸಿನ ಸ್ವಾಸ್ಥ್ಯವೂ ಬೆಲೆಕೊಟ್ಟುಕೊಳ್ಳಬೇಕಾದ ಸರಕೇ. ಈ ಮಾರಾಟದಲ್ಲಿ ನ್ಯಾಯ-ಅನ್ಯಾಯಗಳ ಚರ್ಚೆಯೇ ಏಳದು. ಜಗತ್ತಿನ ಹಂಗು ತೊರೆದ ಸಾಧು ಸಂನ್ಯಾಸಿಗಳು ಹೆಂಗಸರಿಗೆ ಶಾಂತಿ ಕೊಡಿಸುತ್ತಾರೆ, ಪೊಲೀಸರನ್ನು ರಾಜಕಾರಣಿಗಳನ್ನು ನಿಯಂತ್ರಿಸುತ್ತಾರೆ. ಪತ್ರಕರ್ತನೊಬ್ಬ ರೋಚಕ ಸುದ್ದಿಯ ಪ್ರಕಟಣೆಯಿಂದಾಗಿ ಜಗತ್ತು ತನ್ನ ಬಹುಮುಖಿ ವ್ಯವಸ್ಥೆಯೊಂದಿಗೆ ಬಿಚ್ಚಿಕೊಂಡಿದೆ. ಕೊನೆಗೆ ಶೇಖರನು ಹೇಳುವಂತೆ ಯಾವುದು ಇತಿಹಾಸ, ಯಾವುದು ಪುರಾಣ, ಯಾವುದು ವೈಯಕ್ತಿಕತೆ ಎಂಬ ಗೆರೆಗಳು ಮಾಸಿ ಹೋಗುತ್ತವೆ. ಕಂಬಾರರ 'ಹರಕೆಯ ಕುರಿಯಂತೆ' ಯಾರು ಯಾರನ್ನು ಬ[illegible]ಳ್ಳುತ್ತಾರೆ ಎಂಬುದನ್ನು ಸ್ಪಷ್ಟಪಡಿಸಲಾರದ ಜಗತ್ತೊ[illegible] ಅನಾವರಣಗೊಂಡಿದೆ.

'ಶೇಖರ್' ಮತ್ತು 'ಜಕ್ಕೂಜಿ' ಜನಸಾಮಾನ್ಯರು ಅಸಾಮಾನ್ಯನಾಗುವ ಸಾಧ್ಯತೆ ತೋರುವ ಪಾತ್ರಗಳು. ಇಂದಿನ ನಮ್ಮ ಜಗತ್ತು ಹಿಂದಿನ ಯುಗ ಹಾಗೂ ಯುಗ ಪುರುಷರು ನಿರ್ಮಿಸಿದ ಮಾದರಿಗಳನ್ನು ಕಳೆದುಕೊಂಡಿದೆ. ನಾಯಕನ ಜಾಗದಲ್ಲಿ ಖಳನಾಯಕ ವಿಜೃಂಭಿಸುತ್ತಾನೆ. ಅವನ ಬುದ್ಧಿವಂತಿಕೆ, ಮಾತಿನ ಚಮಕ್ ಜನರನ್ನು ನಿಯಂತ್ರಿಸುವ ಶಕ್ತಿ ಅವನಿಗೊಂದು ನಾಯಕತ್ವ ಕೊಟ್ಟಿದೆ. ಬದುಕಲೇಬೇಕಾದ ಅನಿವಾರ್ಯತೆ ಜನಸಾಮಾನ್ಯನಲ್ಲೂ ಮುನ್ನುಗ್ಗುವ ಧೈರ್ಯ ಮೂಡಿಸುತ್ತದೆ. ಪೊಲೀಸರ ಕೈಸೆರೆಯಾದ ಶೇಖರ್ ಜೈಲಿನಲ್ಲಿ ತನ್ನ ಬ[illegible] ಹೇಳುವ ಬೇರೆಬೇರೆ ಹೆಸರು, ಬೇರೆ ಬೇರೆ ಕತೆಗಳ[illegible]

ತ್ತಾರೆ. ಮುಸ್ಲಿಮರ ಮೇಲೆ ಆಕ್ರಮಣ
ಯ ನೆಪಹುಡುಕುತ್ತಾರೇನೋ?
ಹಾರಿ ಹೋಟೆಲ್‌ಗಳಿಗೆ ಹೋಗಿ
ಮಾಡಿದ್ದೀರಾ' ಎಂದು ದಾಂಧಲೆ
ತ್ತಾರೆ. ಇಂತಹ ಜನಾಂಗ ದ್ವೇಷಕ್ಕೆ
ಕೊನೆ?

ಮುಸ್ಲಿಮರಿಂದ ಈ ದೇಶಕ್ಕೆ ಏನೂ
ಅದಾಗಿಲ್ಲವೇ? 'ಭಾರತ ಪ್ರಕಾಶಿಸುತ್ತಿದೆ'
ಮಾತಿನ ಹಿಂದೆ ಮುಸ್ಲಿಮರ
ಗೆಯೂ ಸಾಕಷ್ಟಿದೆ. ನಮ್ಮ ಹಿಂದಿ
ಕ್ಷೇತ್ರವನ್ನೇ ನೋಡಿ. 40ರ ದಶಕದಿಂದ
ಳಿಸಿ ದಿಲೀಪ್‌ಕುಮಾರ್, ನರ್ಗೀಸ್
ಟ್ಟೊಂಡು ಇಂದಿನವರೆಗೂ ಮಿಂಚುತ್ತಿರುವ
ಮರಿಗೆ ಲೆಕ್ಕವಿಲ್ಲ. ಈಗಂತೂ ಹಿಂದಿ
ಚಿತ್ರ ಜಗತ್ತಿನಲ್ಲಿ ಖಾನ್‌ಗಳದ್ದೇ
ಮಾನಿಕೆ. ಇತ್ತೀಚಿನ ಆಸ್ಕರ್ ಪ್ರಶಸ್ತಿಯನ್ನೇ
ಈ ದೇಶಕ್ಕೆ ಮೊತ್ತಮೊದಲ ಬಾರಿಗೆ
ಪ್ರಶಸ್ತಿ ತಂದುಕೊಟ್ಟವರು ಮೂವರು
ಮರು. ಕ್ರಿಕೆಟ್ ಟೀಂ ಅನ್ನು ಒಂದು
ತಂದವರೇ ಮನ್ಸೂರ್ ಅಲಿಖಾನ್
ಟೆನ್ನಿಸ್‌ನಲ್ಲಿ ಮೊತ್ತಮೊದಲು
ರಾಷ್ಟ್ರೀಯ ಮಹಿಳಾ ಪ್ರಶಸ್ತಿ
ಕೊಟ್ಟವಳು ಸಾನಿಯಾ ಮಿರ್ಜಾ.
ಮೇ ಸಂಗೀತ, ಚಿತ್ರಕಲೆ ಮುಂತಾಗಿ
ಕ್ಷೇತ್ರ ನೋಡಿದರೂ ಅಲ್ಲೆಲ್ಲವೂ
ಮರ ಕೊಡುಗೆಗಳು ಎದ್ದುಕಾಣುತ್ತವೆ.
ಮೊದಲ ಪರಮವೀರ ಚಕ್ರ ಪಡೆದಾತನು
ಮ್ಮನಾದ ಅಬ್ದುಲ್ ಹಮೀದ್.

ಕಾರ್ಪೊರೇಷನ್ ಬ್ಯಾಂಕಿನ ಸ್ಥಾಪಕರು
ಯ ಅಬ್ದುಲ್ಲಾ ಸಾಹೇಬ್. ಆದರೆ
ಕಾರ್ಪೇರೇಶನ್ ಬ್ಯಾಂಕಿನ ಸೇವೆಯಲ್ಲಿ
ಮರು ಬೆರಳೆಣಿಕೆಯಷ್ಟಾದರೂ
ದರೇನೋ ಕರ್ನಾಟಕ ಬ್ಯಾಂಕಿನ
ಕಲ್ಲೊಬ್ಬರು ಮುಸ್ಲಿಮರಾಗಿದ್ದರೂ ಇಂದು
ಹೆಸರು ಯಾರಿಗೂ ನೆನಪೇ ಇಲ್ಲ!
ಮರು ಮತ್ತು ದಲಿತರನ್ನು ವ್ಯವಸ್ಥಿತವಾಗಿ
ಗೊತ್ತರಿಸುವುದು ಹಿಂದಿನಿಂದಲೂ
ಕೊಂಡು ಬರುತ್ತಲೇ ಇದೆ.

ವ ಪ್ರಯತ್ನ ಮರುಕ ಹುಟ್ಟಿಸುತ್ತದೆ. ತನ್ನ
ಗೌಡನ ವಂಶಾವಳಿಯ' ಕಥೆ ಕೊನೆಗೊಂಡ
ಚರಿತ್ರೆಯೆಂಬ ಹೆಸರಿನಲ್ಲಿ ಮೋಸಹೋಗುವ
'ಟಿಪ್ಪುವಿನ' ಕತೆಯನ್ನು ಹೊಸೆದು
ಸಿಕೊಳ್ಳುತ್ತಾನೆ. ಇಲ್ಲಿ ವಿವೇಕ್‌ರವರು ಚಿತ್ರಿಸಿದ
ಮ, ಶೇಖರ, ಗುರು ಜಕ್ಕೂಜಿ ಮಹಾನಗರ
ಮತ್ತೆಮತ್ತೆ ನಂಬುವವರಿದ್ದ ಕಡೆ ತಲೆಯೆತ್ತುವ
ರೂಪಿಗಳು. ಬುದ್ಧಿಬಲದಿಂದಲೇ ಬದುಕ
ವ ಬ್ರಹ್ಮಾಂಡರು.

ಳಿದಂತೆ ಊರ್ಮಿಳಾ, ಶಕೂ ಮುಂತಾದ
ಳು ಪ್ರಧಾನಪಾತ್ರಗಳನ್ನು ಪೋಷಿಸುತ್ತವೆ.
ಹೆಣ್ಣಿನ ಸಂಬಂಧ ಮದುವೆ ಎನ್ನುವ
ಂತ ಪರಸ್ಪರ ನಿಷ್ಠೆಯ ಮೇಲೆ ಅವಲಂಬಿಸಿದೆ.
ದ ಸಂಭಾಷಣೆಗಳು, ಪರಸ್ಪರರನ್ನು ನಂಬಿಸುವ
ಆಟದ ಪ್ರಯತ್ನ ಈ ನಾಟಕದಲ್ಲಿ ಎದ್ದು
ತ್ತದೆ. ಸಂಜಯನ ರೋಚಕದ ಸುದ್ದಿ ಟ್ರೈಪ್
ರು ವಂತೆಯೇ ಈ ಕಡೆ ಊರ್ಮಿಳಾಳ
ಮ ಸಿದ್ಧತೆಯೂ ನಡೆಯುತ್ತದೆ. ಖಾದ್ಯವೊಂದು
ರ, ರುಚಿಗಳನ್ನು ಬಳಸಿಕೊಂಡು
ಗುವಂತೆ ಸುದ್ದಿಯೂ ಸಿದ್ಧ ವಾಗುತ್ತದೆ
ಕಲ್ಪನೆ ಸಹಜವೆನ್ನುವಂತೆ ಚಿತ್ರಿತವಾಗಿದೆ.
ದಲ್ಲಿ ಮಹಾನಗರಗಳಲ್ಲಿ ವಾಸಿಸುವ ಜನ
ತಮ್ಮ ಅಸ್ತಿತ್ವಕ್ಕಾಗಿ ತಳೆಯಬೇಕಾದ ಬೇರೆಬೇರೆ
ಅನುಭವಿಸಬೇಕಾದ ಒತ್ತಡಗಳು, ಸಹಜ
ದ ಸಂಭ್ರಮ ಕಳೆದುಕೊಂಡ ಹತಾಶ
ನ್ನು ಈ ನಾಟಕ ಒಡಿದಿಡುತ್ತದೆ. ಮೊದಲ
ಉಂಟಾದ ಒತ್ತಡ, ಹತಾಶೆಯನ್ನು ಕೊನೆಯ
ರೆಗೂ ಕಾಪಾಡಿಕೊಳ್ಳಲಾಗಿದೆ. ಮಾತು,
ಮಥಿಸಿಯೇ ಘಟನಾವಳಿಗಳನ್ನು ರೂಪಿ
ತಂತ್ರವನ್ನು ಲೇಖಕರು ಇಲ್ಲಿ ಬಳಸಿದ್ದರೂ
ಕತೆಗಿಂತ ಮಾತೇ ಇಲ್ಲಿ ಹೆಚ್ಚು ವಿಜೃಂಭಿ
ಈ ಮಿತಿಯೇನೇ ಇದ್ದರೂ ನಗರದಲ್ಲಿನ
ರೂಪಿಗಳನ್ನು, ಅವುಗಳ ವ್ಯಕ್ತಿತ್ವವನ್ನು ಅನಾ
ಗೊಳಿಸುವ ಈ ನಾಟಕ ಇತ್ತೀಚಿಗಿನ ನಾಟಕ
ಗಮನ ಸೆಳೆಯುವಂತಹದ್ದು ಎಂದು
ವಾಗಿ ಹೇಳಬಹುದಾಗಿದೆ.

● ಡಾ. ಎಚ್.ಎಲ್. ಪುಷ್ಪ

ಕಡಿದಾಳು ಶಾಮಣ್ಣ

ಕಾಡ ತೊರೆಯ ಹಾಡು 13



ಅಕ್ಷರ ರೂಪ: **ಅಕ್ಷತಾ ಕೆ.**

ಸೇತುವೆ ಉದ್ಘಾಟನೆ: ಬಾರದಂತೆ ಗುಂಡೂರಾಯರಿಗೆ ಬೆದರಿಕೆ

ರೈತ ಸಂಘದ ಚಟುವಟಿಕೆಗಳು ರಾಜ್ಯದಾದ್ಯಂತ ತೀವ್ರವಾಗಿ ನಡೆಯುತ್ತಿದ್ದ ಸಂದರ್ಭ ಅದು. ರೈತ ಸಂಘದ ಎಲ್ಲ ಆದೇಶ ಮತ್ತು ಆದರ್ಶಗಳನ್ನು ಪ್ರಣಾಳಿಕೆಯಲ್ಲಿ ಬರೋದಕ್ಕಿಂತ ಮುಂಚೆಯೇ ತೀರ್ಥಹಳ್ಳಿಯಲ್ಲಿ ಜಾರಿಗೆ ತರಲು ನಾವು ಕಟಬದ್ಧರಾಗಿದ್ವಿ. ನಮ್ಮ ಕಾರ್ಯದರ್ಶಿ ಕೋಡ್ಲು ವೆಂಕಟೇಶ ಅಂತೂ ಯಾರನ್ನು ಎದುರು ಹಾಕಿಕೊಳ್ಳಲೂ ಹಿಂದೆಮುಂದೆ ನೋಡ್ತಿರಲಿಲ್ಲ. "ಕಾನೂನಂತೆ ಕಾನೂನು ಇವರಪ್ಪನದಂತೆ ಕಾನೂನು'' ಎನ್ನುತ್ತಾ ಮುನ್ನುಗ್ತಿರೋದೆ. ಅಧಿಕಾರಿ, ಪುಢಾರಿ ಯಾರಿಗೂ ಕ್ಯಾರೆ ಅಂತಿರಲಿಲ್ಲ.

ಇದೇ ಹೊತ್ತಲ್ಲಿ ಮಂಡಗದ್ದೆ ಸಮೀಪದ ಮುಡಬದ ಸೇತುವೆ ಕಾಮಗಾರಿ ಸಂಪೂರ್ಣಗೊಂಡಿದ್ದರೂ ಆ ಸೇತುವೆಯನ್ನು ಜನೋಪಯೋಗಕ್ಕೆ ಬಿಡದೆ ಯಾರೂ ಸೇತುವೆ ಮೂಲಕ ಓಡಾಡದಂತೆ ಅಡ್ಡಲಾಗಿ ಬೇಲಿ ಕಟ್ಟಿದ್ದರು. ಸೇತುವೆ ಉದ್ಘಾಟನೆಯಾಗುವವರೆಗೂ ಅಲ್ಲಿ ಸಂಚಾರ ಮಾಡುವಂತಿರಲಿಲ್ಲ. ಸೇತುವೆ ನಿರ್ಮಾಣಗೊಂಡು ಮೂರು ತಿಂಗಳಾಗಿದ್ದರೂ ಉದ್ಘಾಟನೆಯ ನೆಪವೊಡ್ಡಿ ಜನ ಸಂಚಾರಕ್ಕೆ ಅಡ್ಡಿ ಮಾಡಿದ್ದರು. ಜನರೂ ಸಹ ಅಧಿಕಾರಿಗಳನ್ನು ಎದುರು ಹಾಕಿಕೊಳ್ಳಲು ಹೆದರಿ ಬೇರೆ ಮಾರ್ಗದಲ್ಲಿ ಸುತ್ತು ಹಾಕಿಕೊಂಡು ಓಡಾಡುತಿದ್ದರು. ಮೂರು ತಿಂಗಳಾದರೂ ಸೇತುವೆ ಉದ್ಘಾಟನೆಯಾಗದಿರುವುದಕ್ಕೆ ಕಾರಣವೂ ಇತ್ತು. ಈ ಸೇತುವೆಯ ಕಾಮಗಾರಿ ಮಾಡಿದ ಕಂಟ್ರಾಕ್ಟರ್ ತುಂಬಾ ಪ್ರಾಮಾಣಿಕರು. ಇಂಜಿನಿಯರ್‌ಗಳಿಗೆ ಸರಿ ಲಂಚ ತಿನ್ನಿಸಿ ಕಳಪೆ ಕಾಮಗಾರಿ ಮಾಡಿ ಬಿಲ್ ಮಾಡಿಸಿಕೊಳ್ಳುವವರ ಜಾತಿಗೆ ಸೇರಿದವರಲ್ಲ. ಅವರು ಸರಿಯಾದ ಸಮಯಕ್ಕೆ ಕಾಮಗಾರಿ ಮುಗಿಸಿಕೊಟ್ಟರು. ಆದರೆ ಇಂಜಿನಿಯರ್ ಪಿಡಬ್ಲೂಡಿ ಅಧಿಕಾರಿಗಳು ಮತ್ತು ಆಡಳಿತದಲ್ಲಿದ್ದ ಕಾಂಗ್ರೆಸ್ ಪಕ್ಷದ ಪುಢಾರಿಗಳು ಎಲ್ಲ ಸೇರಿ ಮುಖ್ಯಮಂತ್ರಿಗಳನ್ನ ಕರೆಸಿ ಉದ್ಘಾಟನೆ ಮಾಡಿಸಬೇಕು ಎಂದು ಕಂಟ್ರಾಕ್ಟರ್‌ಗೆ ಹೇಳಿದ್ರು. ಅದಕ್ಕೆ ಬಿಲ್‌ಕುಲ್ ಒಪ್ಪದ ಕಂಟ್ರಾಕ್ಟರ್ "ನೋಡಿ, ಸೇತುವೆ



ಕಾಮಗಾರಿ ಮುಗಿಸಿಕೊಡೋದು ನನ್ನ ಜವಾಬ್ದಾರಿ, ಅದನ್ನು ಮಾಡಿದ್ದೀನಿ. ಉದ್ಘಾಟನೆಗೂ ನನಗೂ ಸಂಬಂಧ ಇಲ್ಲ. ಸೇತುವೆ ಮೇಲೆ ಜನ ನಡೆದಾಡಿದರೆ ಅದೆ ಉದ್ಘಾಟನೆ'' ಎಂದು ಉತ್ತರ ಕೊಟ್ಟರು. ಮುಖ್ಯಮಂತ್ರಿಗಳನ್ನು ಕರೆಸಿ ಉದ್ಘಾಟನೆ ಮಾಡಿಸದಿದ್ದರೆ ಕಾಮಗಾರಿಯ ಬಿಲ್ ಮಾಡಲ್ಲ ಅಂತ ಅಧಿಕಾರಿಗಳು ಧಮಕಿ ಹಾಕಿದರೂ ಆ ಕಂಟ್ರಾಕ್ಟರ್ ಸೊಪ್ಪು ಹಾಕಲಿಲ್ಲ. ಅಂತೂ ಸೇತುವೆ ನಿರ್ಮಾಣವಾಗಿ ದಿನಗಳೇ ಉರುಳಿದರೂ ಜನಸಂಚಾರಕ್ಕೆ ಅದರಿಂದ ಯಾವುದೇ ಉಪಯೋಗ ಆಗಲಿಲ್ಲ.

ಕಂಟ್ರಾಕ್ಟರ್ ತನ್ನ ಖರ್ಚು ವೆಚ್ಚದಲ್ಲಿ ಮುಖ್ಯಮಂತ್ರಿಗಳನ್ನು ಕರೆಸಿ ಸೇತುವೆ ಉದ್ಘಾಟನೆ ಮಾಡಿಸಲು ಯಾವಾಗ ಒಪ್ಪಲಿಲ್ಲವೋ ಸ್ಥಳೀಯ ಕಾಂಗ್ರೆಸ್ ಪುಢಾರಿಗಳಿಗೆ ಅದೊಂದು ಪ್ರೆಸ್ಟೀಜ್ ಪ್ರಶ್ನೆಯಾಗಿಬಿಟ್ಟಿತು. ಮುಖ್ಯಮಂತ್ರಿಗಳನ್ನು ಕರೆಸಿಯೇ ಸೇತುವೆ ಉದ್ಘಾಟನೆ ಮಾಡಿಸಬೇಕು ಎಂದು ಅವರು ಗಟ್ಟಿ ನಿರ್ಧಾರ ಮಾಡಿಬಿಟ್ಟರು. ಮಂಡಗದ್ದೆಯ ಶೆಟ್ಟರೊಬ್ಬರು ಬಾಂಬೆಯಲ್ಲಿ ದೊಡ್ಡ ಉದ್ಯಮಿಯಾಗಿದ್ದಾರೆ. ಅವರು ಇಲ್ಲಿ ಕಲ್ಯಾಣ ಮಂಟಪ ಎಲ್ಲ ಕಟ್ಟಿಸಿದ್ದಾರೆ. ಆ ಶೆಟ್ಟರು ಮತ್ತು ಊರಿನ ಒಂದಿಬ್ಬರು ದೊಡ್ಡ ಕುಳಗಳು ಮುಖ್ಯಮಂತ್ರಿಗಳು ಬಂದುಹೋಗುವ ಖರ್ಚು ವೆಚ್ಚ ವಹಿಸಿಕೊಳ್ಳಲು ತಯಾರಾಗಿದ್ದೆ ಸೈ ಕಾಂಗ್ರೆಸ್ ಪುಢಾರಿಗಳು ಅಧಿಕಾರಿಗಳಿಗೆ ಹೇಳಿ ಮುಖ್ಯಮಂತ್ರಿ ಗುಂಡೂರಾಯರಿಗೆ ಸೇತುವೆ ಉದ್ಘಾಟನೆಗೆ ಆಹ್ವಾನ ನೀಡಿಯೇ ಬಿಟ್ಟರು.

ಗುಂಡೂರಾಯರು ಬರೋ ದಿನಾಂಕವೂ ಫಿಕ್ಸ್ ಆಯ್ತು. ತೀರ್ಥಹಳ್ಳಿಗೆ ಹೆಲಿಕಾಪ್ಟರ್‌ನಲ್ಲಿ ಬಂದು ಇಲ್ಲಿನ ಪ್ರವಾಸಿಮಂದಿರದಲ್ಲಿ ತಿಂಡಿ ತಿಂದು ನಂತರ ಇಲ್ಲಿಂದ ಮಂಡಗದ್ದೆಗೆ ಹೋಗಿ ಸೇತುವೆ ಉದ್ಘಾಟನೆ ಮಾಡೋದು ಅಂತೆಲ್ಲ ನಿರ್ಧಾರ ಆಯ್ತು. ತೀರ್ಥಹಳ್ಳಿಯ ರಸ್ತೆಗಳು, ಪ್ರವಾಸಿ ಮಂದಿರ ಎಲ್ಲ ತಿಂಗಳಿಗೆ ಮುಂಚೆಯೇ ಶೃಂಗಾರ ಆಗಲಿಕ್ಕೆ ಶುರುವಾಯಿತು. ಮಂಡಗದ್ದೆಯಲ್ಲೂ ಒಂದು ಪ್ರವಾಸಿ ಮಂದಿರವಿದೆ. ಅದರ ಗೋಡೆಗಳಿಗೆ ಅಲ್ಲ, ಮೇಲಿನ ಹೆಂಚುಗಳಿಗೂ ಕೆಂಪು ಬಣ್ಣ ಹೊಡೆದು ಶೃಂಗಾರ ಮಾಡಿದ್ರು. ಗುಂಡೂರಾಯರ ಆಗಮನಕ್ಕೆ ಹೀಗೆ ಭರ್ಜರಿ ಸಿದ್ಧತೆಗಳಾಗ್ತಿದ್ದಾಗ ನಾವು ರೈತ ಸಂಘದೋರು ಇದನ್ನೆಲ್ಲ ಗಮನಿಸ್ತಾ ಇದ್ವಲ್ಲ, ಒಂದ್ಕಡೆ ಎಲ್ಲರೂ ಸೇರಿದಾಗ ಮುಖ್ಯಮಂತ್ರಿಗಳು ತೀರ್ಥಹಳ್ಳಿಗೆ ಬರುವುದಕ್ಕೆ ತಗಲುವ ವೆಚ್ಚವನ್ನು ಲೆಕ್ಕ ಹಾಕಿದ್ವಿ. ಸೇತುವೆ ನಿರ್ಮಾಣಕ್ಕೆ ತಗುಲಿದ ವೆಚ್ಚಕ್ಕಿಂತ ಹೆಚ್ಚಿನ ಹಣ ಖರ್ಚಾಗುವ ಸಂಭವ ಕಂಡುಬಂತು.

ತಾಲ್ಲೂಕಿನ ಜನ ಅತಿವೃಷ್ಟಿಗೆ ಸಿಲುಕಿ ಸಂಕಷ್ಟದಲ್ಲಿದ್ದಾಗ ಒಂದು ಸೇತುವೆ ಉದ್ಘಾಟನೆಗೆ ಮುಖ್ಯಮಂತ್ರಿಗಳು ಅಷ್ಟೆಲ್ಲ ಖರ್ಚು ಮಾಡಿಕೊಂಡು ಬರುವ ಅಗತ್ಯ ಇದ್ಯಾ ಎಂಬ ಪ್ರಶ್ನೆ ಎದುರಾಯಿತು. ಕೋಡ್ಲು ವೆಂಕಟೇಶ್ "ಏನಾದ್ರೂ ಮಾಡಿ ಮುಖ್ಯಮಂತ್ರಿಗಳು ಇಲ್ಲಿಗೆ ಬರದಿದ್ದ ಹಾಗೆ ಮಾಡಬೇಕು ಶಾಮಣ್ಣ" ಎಂದ. "ಹಂಗೆ ಮಾಡಿದ್ರೆ ಕಾಂಗ್ರೆಸ್‌ನೋರು ಸುಮ್ಮನಿರ್‍ತಾರ? ಹೊಡೆದಾಟಕ್ಕೆ ಬರ್‍ತಾರೆ" ಅಂತ ನಾನು ಹೇಳಿದ್ರೆ "ಅವರೇನಾದ್ರೂ ಹೊಡೆದಾಟಕ್ಕೆ ಬಂದ್ರೆ ನಾವು ಹುಳಿಚಪ್ಪಿನ ರುಚಿ ತೋರಿಸೋದು ಇದ್ದೆ ಇದ್ಯಲ್ಲ" ಎಂದ. ಹುಳಿಚಪ್ಪು ಅಂದ್ರೆ ಹುಳಿ ಸೊಪ್ಪಿನ ಬರಲು, ಅದರಲ್ಲಿ ಹೊಡೆದರೆ ಉರಿ ತಡೆದುಕೊಳ್ಳಲಿಕ್ಕೆ ಎಂಥವರಿಗೂ ಸಾಧ್ಯವಿಲ್ಲ. ಕೋಡ್ಲು ವೆಂಕಟೇಶನ ಭಾಷೆಯೆ ಹಾಗೆ. ಮಲೆನಾಡಿನ ಗ್ರಾಮ್ಯ ನುಡಿಗಟ್ಟು, ಗಾದೆ ಎಲ್ಲ ಅವನ ನಾಲಿಗೆ ತುದಿಯಲ್ಲಿಯೇ ಇರ್‍ತಿತ್ತು.

ಮುಖ್ಯಮಂತ್ರಿಗಳು ಬರೋದು ಬೇಡ ಅಂತ ಪ್ರತಿಭಟನೆ ಏನಾದ್ರು ಮಾಡಿದ್ರೆ ಅವರು ಬರೋದನ್ನು ತಡಿಬಹುದು ಆದರೆ ಸೇತುವೆ ಉದ್ಘಾಟನೆಯಾಗಲ್ಲ. ಇದರಿಂದ ಏನು ಸಾಧನೆಯಾಗಲ್ಲ. ಬದಲಿಗೆ ಸೇತುವೆ ಉದ್ಘಾಟನೆಯಾಗಿ ಜನ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು ಮತ್ತು ಅದಕ್ಕೆ ಅಷ್ಟು ಖರ್ಚು ಮಾಡಿಕೊಂಡು ಗುಂಡೂರಾಯರು ಬರದ ಹಾಗೆ ತಡೆಯಬೇಕು ಅನ್ನೋ ನಿರ್ಧಾರಕ್ಕೆ ಬಂದ್ವಿ. ಈ ಸೇತುವೆ ನಿರ್ಮಾಣ ಕಾರ್ಯದಲ್ಲಿ ಕೂಲಿಯಾಗಿ ದುಡಿದ ಮಲ್ಲಣ್ಣ ಅನ್ನುವವರು ಮುಡುಬದಲ್ಲಿದ್ದರು. ಅವರಿಂದ ಸೇತುವೆ ಉದ್ಘಾಟನೆ ಮಾಡಿಸುವುದು ಅಂತ ನಿರ್ಧರಿಸಿದ್ವಿ. ಗುಂಡೂರಾಯರಿಗೆ ಈ ಕುರಿತು ಒಂದು ಪತ್ರ ಬರೆದು ರಿಜಿಸ್ಟರ್ ಪೋಸ್ಟ್ ಮಾಡಿದ್ವಿ. "ಈ ಸೇತುವೆ ನಿರ್ಮಾಣ ಕಾಮಗಾರಿಯಲ್ಲಿ ಕೂಲಿಯಾಳಾಗಿ ದುಡಿದ ಮಲ್ಲಣ್ಣ ಅನ್ನುವವರ ಅಮೃತ ಹಸ್ತದಿಂದ ಮುಡುಬ ಸೇತುವೆ ಉದ್ಘಾಟನೆ ಮಾಡಿಸಲು ನಿರ್ಧರಿಸಿದ್ದೇವೆ. ನೀವು ಬಂದು ಹೋಗುವುದಕ್ಕೆ ತಗಲುವ ವೆಚ್ಚವೇ ಸೇತುವೆ ನಿರ್ಮಾಣಕ್ಕಾದ ವೆಚ್ಚಕ್ಕಿಂತ ಅಧಿಕವಾಗಿದ್ದು ನೀವು ಬರುವ ಅವಶ್ಯಕತೆ ಇಲ್ಲ" ಎಂದು ಆ ಪತ್ರದಲ್ಲಿ ಬರೆದಿದ್ದೆವು. ಆದರೆ ವಾರ ಕಳೆದರೂ ನಮಗೆ ಮುಖ್ಯಮಂತ್ರಿಗಳ ಕಚೇರಿಯಿಂದ ಯಾವುದೇ ಉತ್ತರ ಬರಲಿಲ್ಲ. ಅಲ್ಲಿಗೆ ಮುಖ್ಯಮಂತ್ರಿಗಳು ಬಂದೇ ಬರ್‍ತಾರೆ ಅಂತ ಖಾತ್ರಿಯಾಯಿತು. ಅದಕ್ಕೆ ನಾವು ಮುಖ್ಯಮಂತ್ರಿಗಳಿಂದ ಉದ್ಘಾಟನೆ ಆಗೋ ಎರಡು ದಿನ ಮುಂಚೆಯೆ ನಾವು ಮಲ್ಲಣ್ಣನಿಂದ ಉದ್ಘಾಟನೆ ಮಾಡಿಸೋದು ಎಂದು ನಿರ್ಧರಿಸಿದ್ವಿ. ಎಲ್ಲ ಗುಟ್ಟು ಗುಟ್ಟಾಗೆ ನಡಿಬೇಕಿತ್ತು. ಇಲ್ಲದಿದ್ದರೆ ಕಾಂಗ್ರೆಸಿನ ಪುಡಾರಿಗಳು ನಮ್ಮ ಕೆಲಸಕ್ಕೆ ಅಡ್ಡಿ ಮಾಡೋದು ಖಾತ್ರಿಯಾಗಿತ್ತು. ಕಾರ್ಯಕ್ರಮದ ಕರಪತ್ರ ಹಾಕಿಸಿ ಗುಟ್ಟಾಗಿ ಹಂಚಲು ಪ್ರಾರಂಭಿಸಿದ್ವಿ.

ಜಿಲ್ಲಾಧಿಕಾರಿಗಳು ರೈತ ಸಂಘದ ಅಧ್ಯಕ್ಷರಾದ ರುದ್ರಪ್ಪನವರನ್ನು ಕರೆಸಿ ಇದರ ಬಗ್ಗೆ ವಿಚಾರಣೆ ನಡೆಸಿದ್ರಂತೆ. ರುದ್ರಪ್ಪನವರು "ಇದರ ಬಗ್ಗೆ ನಮಗೆ ಮಾಹಿತಿ ಇಲ್ಲ. ಮತ್ತೆ ಈ ವಿಷಯಕ್ಕೆ ನಾವು ಪ್ರವೇಶ ಮಾಡೋದಿಲ್ಲ. ಅದು ತಾಲ್ಲೂಕು ರೈತ ಸಂಘದವರ ನಿರ್ಧಾರ ಇರಬಹುದು. ಆ ರೀತಿ ಅವರು ನಿರ್ಧಾರ ತಗಂಡ್ರೆ ನಾವೇನು ಹೇಳಕ್ಕಾಗಲ್ಲ" ಎಂದು ಹೇಳಿದರಂತೆ. ಅವರು ನನ್ನನ್ನ ಮತ್ತು ಕೋಡ್ಲು ವೆಂಕಟೇಶರನ್ನು ಕರೆಸಿ ಈ ಬಗ್ಗೆ ಕೇಳಿದ್ರು. ರುದ್ರಪ್ಪನವರು ಹಳೆಯ ಕಾಂಗ್ರೆಸ್ಸಿಗರೆ. ಅವರದು "ಅಧಿಕಾರದಲ್ಲಿರುವವರ ಜೊತೆ ಡಿಪ್ಲೊಮ್ಯಾಟ್ ಆಗಿ ಇರಬೇಕು. ಸರ್ಕಾರದ ಜೊತೆ ಜಗಳ ಆಡೋದರಿಂದ ಏನು ಪ್ರಯೋಜನ ಇಲ್ಲ" ಅನ್ನೋ ಮನೋಧರ್ಮ. ಅವರಿಗೆ ನಮ್ಮ ಇಂತಹ ಪ್ರತಿಭಟನೆಗಳೆಲ್ಲ ಇಷ್ಟ ಆಗ್ತಿರಲಿಲ್ಲ. ಆದರೆ ಬೇಡವೆ ಬೇಡ ಅಂತ ಖಡಾಖಂಡಿತವಾಗಿ ಹೇಳಕ್ಕೂ ಹಿಂಜರಿಯೋರು. ನಾಳೆ ಏನಾದ್ರೂ ಅದರಿಂದ ಅನಾಹುತ ಆದರೆ ನಾವ್ಯಾರು ಬರಲ್ಲ ತಿಳ್ಕಳಿ ಎಂದು ಎಚ್ಚರಿಕೆಯ ಮಾತು ಹೇಳಿ ನಮ್ಮನ್ನು ಕಳಿಸಿದ್ರು.

ಅನಿತಾ ಕೌಲ್ ಕೂಡಾ ನಮ್ಮನ್ನು ಕರೆಸಿ ನೀವು ಸೇತುವೆ ಉದ್ಘಾಟನೆಗೆ ಅಡ್ಡಿ ಪಡಿಸೋಕೆ ಪ್ರಯತ್ನ ಮಾಡ್ತಿದೀರಿ ಅಂತ ನಮಗೆ ಮಾಹಿತಿ ಬಂದಿದೆ, ಅದಕ್ಕೆ ನಿಮ್ಮನ್ನು ಕರೆಸಿ ವಿಚಾರಿಸುತ್ತಿದ್ದೇನೆ ಎಂದ್ರು. ನಾವು "ಈ ಬಗ್ಗೆ ನಮಗೆ ಗೊತ್ತೆ ಇಲ್ಲ, ನಾವು ಸೇತುವೆ ಉದ್ಘಾಟನೆಯನ್ನು ಯಾರಿಂದಲೂ ಮಾಡಿಸಕ್ಕೆ ಹೊರಟಿಲ್ಲ, ನಮಗೂ ಇದಕ್ಕೂ ಸಂಬಂಧವೇ ಇಲ್ಲ'' ಎಂದು ನಿರಾಕರಿಸಿ ಬಿಟ್ವಿ.. ನಮ್ಮೇಲೆ ಎಲ್ರೂ ಕಣ್ಣಿಟ್ಟಿದ್ದಾರೆ ಅನ್ನೋ ಹೊತ್ತಿಗೆ ನಾವು ಇನ್ನೊಂದಿಷ್ಟು ಜಾಗ್ರತರಾದ್ವಿ. ಮತ್ತೆ ಮಲ್ಲಣ್ಣನಿಂದಲೇ ಉದ್ಘಾಟನೆ ಮಾಡಿಸೇ ಮಾಡಿಸ್ತೀವಿ ಅನ್ನೋ ಛಲ ತಂದ್ಕಂಡ್ವಿ. ನಾವೊಂದಿಷ್ಟು ಜನ ಮನೆಗೂ ಹೋಗದೆ ಮಂಡಗದ್ದೆಯಲ್ಲೆ ಬೀಡು ಬಿಟ್ವಿ. ಅಲ್ಲೆ ಶ್ಯಾನಂದೂರು ಪುಟ್ಟಣ್ಣನವರ ಪತ್ನಿ ಶಾರದಮ್ಮನವರ ತಮ್ಮ ಮಂಜುನಾಥ್‌ರ ಮನೆಯಲ್ಲಿ ನಮಗೆ ಊಟ ತಿಂಡಿ ವ್ಯವಸ್ಥೆ ಮಾಡೋರು. ದಿನಾನು ಸುತ್ತಮುತ್ತಲ ಹಳ್ಳಿಹಳ್ಳಿಗಳ ಮನೆ ಸುತ್ತೋದು, ಉದ್ಘಾಟನಾ ಕಾರ್ಯಕ್ರಮಕ್ಕೆ ಬರಕ್ಕೆ ಅವರನ್ನು ಒಪ್ಪಿಸೋದು, ಬಂದೆ ಬರ್‍ತೀವಿ ಅಂತ ಅವರಿಂದ ಖಾತ್ರಿ ಮಾಡಿಕೊಂಡು ಬೇರೆ ಕಡೆ ಕರೆಯಲು ಹೋಗ್ತಿದ್ದಿದು. ತುಂಬಾ ಜನ ಬಹಳ ಒಳ್ಳೆ ಕೆಲಸ ಮಾಡ್ತಿದೀರಿ ಬಂದೆ ಬರ್‍ತೀವಿ ಅಂತಾನೇ ಹೇಳೋರು. ಆದರೂ ಒಳಗೆ ಈ ಕಾರ್ಯಕ್ರಮಕ್ಕೆ ಜನ ಬರ್‍ತಾರ ಅನ್ನೋ ಅನುಮಾನವಂತೂ ಇದ್ದೇ ಇತ್ತು. ಕಾರ್ಯಕ್ರಮಕ್ಕೆ ಬಂದೆ ಬರ್‍ತೀವಿ ಅನ್ನೋ ಅಂತವರನ್ನು ಒಟ್ಟು ಐನೂರು ಜನರನ್ನ ಒಗ್ಗೂಡಿಸಿದ್ವಿ. ಮತ್ತೆ ಅವರಿಗೆಲ್ಲ ಕಂಡಿಶನ್ ಮಾಡಿದ್ವಿ ಪ್ರತಿಯೊಬ್ಬರು ಮನೆಯಿಂದ ಬರ್‍ತಾ ಶಂಕು, ಜಾಗಟೆ ತಗಂಡ ಬರ್‍ಬೇಕು ಅಂತ.

ಇಷ್ಟೆಲ್ಲ ಆದಮೇಲೂ ನಮಗೆ ಮಲ್ಲಯ್ಯನದೆ ಹೆದರಿಕೆ. ಕಾರ್ಯಕ್ರಮದ ದಿನವೇ ಆತ ಕೈ ಕೊಟ್ಟರೆ ಏನು ಮಾಡೋದು ಅಂತ. ಅದಕ್ಕಿಂತ ಹೆಚ್ಚಾಗಿ ಕಾಂಗ್ರೆಸ್‌ನೋರು ಏನಾದ್ರೂ ಆಮಿಷ ಒಡ್ಡಿ ಅಥವಾ ಬಲವಂತವಾಗೆ ಅವನನ್ನು ಎಲ್ಲಾದರೂ ಸಾಗಿಸಿ ಅಡಗಿಸಿಟ್ಟರೆ ಏನು ಕಥೆ? ಅದಕ್ಕೆ ದಿನಾ ಬಂದು ಮಲ್ಲಣ್ಣನ ಮನೆಗೆ ಹೋಗಿ ಖಾತ್ರಿ ಮಾಡಿಕೊಂಡು ಬರೋದು. ಇದನ್ನೆಲ್ಲ ನೋಡ್ತಾ ಮಲ್ಲಣ್ಣನಿಗೂ ಒಂದು ರೀತಿ ಛಲ ಬಂದು ಬಿಟ್ಟಿತ್ತು. "ನೀವು ನನ್ನ ಮೇಲೆ ನಂಬಿಕೆ ಇಡಿ. ನಾನು ದೇವರಬನದಲ್ಲಿ ಬಂದೆ ಬರ್‍ತೀನಿ ಅಂತ ಆಣೆ ಇಟ್ಟದೀನಿ. ನಂಬಿಕೆ ಕಳಿಬೇಡಿ, ಬಂದೆ ಬರ್‍ತೀನಿ'' ಎಂದು ಭರವಸೆ ನೀಡಿದ್ರು.

ಅಂದು ಸುಮಾರು ಐನೂರು ಜನ ಸೇತುವೆಯ ಬಳಿ ಸೇರಿದ್ವಿ. ಮಲ್ಲಣ್ಣನಿಗೆ ಜೋಡು ಗಾದಿ ಹೊದೆಸಿ ಶೃಂಗರಿಸಿದ ಗಾಡಿಯಲ್ಲಿ ಕೂರಿಸಿ ನಾವೆಲ್ಲ ಜಾಗಟೆ ಬಾರಿಸುತ್ತಾ ಶಂಖ ಊದುತ್ತಾ ಸೇತುವೆಯ ತಡೆಯನ್ನು ಮುರಿದು ಹಾಕಿ ಮಲ್ಲಣ್ಣನನ್ನು ಕೂರಿಸಿದ್ದ ಗಾಡಿಯ ಹಿಂದೆ ಸಾಗಿದ್ವಿ. ಸೇತುವೆಯ ಇನ್ನೊಂದು ತುದಿಯಲ್ಲಿ ದೇವರ ಬನವಿತ್ತು, ಅಲ್ಲಿಗೆ ಎಲ್ಲರೂ ತೆರಳಿ ಹಣ್ಣು ಕಾಯಿ ಒಡೆದು ಗಂಟೆ ಜಾಗಟೆ ಬಡಿದು ಪೂಜೆ ಸಲ್ಲಿಸಿದ್ವಿ. ಅಲ್ಲಿಗೆ ಸೇತುವೆ ಉದ್ಘಾಟನೆ ಕಾರ್ಯಕ್ರಮ ಸಾಂಗವಾಗಿ ನಡೆದು ಸೇತುವೆ ಸಾರ್ವಜನಿಕ ಸಂಚಾರಕ್ಕೆ ಮುಕ್ತವಾಯಿತು. ಅವತ್ತು ನಾವೇನು ಮಾಡುತಿದ್ದೇವೆ ಎಂದು ನೋಡಲು ಎನ್.ಡಿ ಶ್ರೀನಿವಾಸ್, ಗಾಯಕ ಡಿ.ಟಿ.ಚಂದ್ರಶೇಖರ್ ಮತ್ತಿತರ ತುಂಬಾ ಜನರು ಸೇರಿದ್ದರು. ಪೊಲೀಸರು ಇದ್ದರಾದರೂ ನಮಗೆ ಯಾವುದೇ ಅಡ್ಡಿ ಮಾಡಲಿಲ್ಲ. ಆಮೇಲೆ ನಮಗೆ ತಿಳಿದ ಸಂಗತಿ ಏನೆಂದರೆ ನಾವು ಬರೆದ ಪತ್ರಕ್ಕೆ ಪ್ರತಿಯಾಗಿ ಮುಖ್ಯಮಂತ್ರಿ ಕಚೇರಿಯಿಂದ ಜಿಲ್ಲಾಧಿಕಾರಿಗಳ ಕಚೇರಿಗೆ ಪತ್ರ ಬಂದಿದೆ. ಅದರಲ್ಲಿ ತಾವು ಸೇತುವೆ ಉದ್ಘಾಟನೆಗೆ ಬರುತ್ತಿಲ್ಲ ಎಂದೂ ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ಆದರೆ ವಿಷಯ ತಿಳಿದರೆ ರೈತ ಸಂಘದವರು ಈ ವಿಷಯದಲ್ಲಿ ಗೆದ್ದ ಹಾಗಾಗುತ್ತೆ ಎಂದು ಅಧಿಕಾರಿಗಳು ಮತ್ತು ಇಲ್ಲಿನ ರಾಜಕಾರಣಿಗಳು ಸೇರಿ ಆ ವಿಷಯ ಬಾಯೇ ಬಿಟ್ಟಿಲ್ಲ. ನಮ್ಮಿಂದಲೂ ಉದ್ಘಾಟನೆ ನಡಿಬಾರದು ಅಂತ ಅಡ್ಡಿ ಮಾಡುತ್ತಲೇ ಬಂದಿದ್ದಾರೆ. ಕೊನೆಗೂ ಅವರ ಕೈಲಿ ಏನೂ ಮಾಡಕ್ಕಾಗಲಿಲ್ಲ. ಮಲ್ಲಣ್ಣನಿಂದ ಸೇತುವೆ ಉದ್ಘಾಟನೆ ಆಗಿಯೇ ಬಿಟ್ಟಿತು.

ಆದರೆ ಮನುಷ್ಯನ ಅಸಹನೆ ಅನ್ನೋದು ಎಷ್ಟು ಆಳವಾಗಿರುತ್ತೆ ಅನ್ನೋದಕ್ಕೆ ಹೇಳ್ತೀನಿ: ಕೂಲಿಯಾಳೊಬ್ಬರಿಂದ ಸೇತುವೆ ಉದ್ಘಾಟನೆ ಆಗ್ತಾ ಇರೋ ಚಾರಿತ್ರಿಕ ಸಂದರ್ಭದ ನೆನಪಿಗೆ ಒಂದು ಕಲ್ಲಿನಲ್ಲಿ ಮಲ್ಲಣ್ಣನವರ ಅಮೃತ ಹಸ್ತದಿಂದ ಉದ್ಘಾಟನೆಯಾದ ಸೇತುವೆ ಎಂದು ಕೊರೆಸಿ ಆ ಕಲ್ಲನ್ನು ಸೇತುವೆ ಉದ್ಘಾಟನೆಯ ದಿನ ಅಲ್ಲಿ ನೆಡಿಸಿದ್ದೆವು. ಆ ಕಲ್ಲನ್ನು ಎರಡೇ ಎರಡು ದಿನದೊಳಗೆ ಯಾರೋ ದುಷ್ಟರು ಕಿತ್ತು ನದಿಗೆ ಎಸೆದಿದ್ದರು.

"ಎಡೂರಪ್ಪ ನಮಿಗ್ಯಲ್ಲ ಒಂದು ಸವುರುಪಾಯಿ ಕಳಿಸ್ಯವುನೆ

ಬಯಲುಸೀಮೆ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಎಡೂರಪ್ಪ ಒಂದು ಸವುರುಪಾಯಿ ಕಳಿಸ್ಯವುನಂತೆ ಕಣಮಾವ" ಎಂದಳು ಜುಮ್ಮಿ.

"ಯಾರಿಗೇ?"

"ವಾಟಿಸ್ನೆ, ಕ್ವಾಸೆ, ಗ್ವಂಡೆ, ಇವುರಿಗ್ಯಲ್ಲ ಬಂದದಂತೆ."

"ಓಟಾಕಿ ಅಂತ ಕಳಿಸಿರಬೇಕು ಕಂಡ್ವೇ" ಎಂದ ಸೀರ.

"ಓಟಿಗೆ ಸವುರುಪಾಯಿ ಕೊಡಕ್ಕೆ ಇದೇನು ಬಳ್ಳಾರಿ ಜಿಲ್ಲೇನೊ?" ಎಂದ ಉಗ್ರಿ.

"ಅಂಗರೆ ಬಳ್ಳಾರಿ ಜಿಲ್ಲೆಲಿ ಸವುರುಪಾಯಿ ನ್ಯಡಿತಾಯಿದ್ದತೆ ಓಟಿನ ರೇಟು?"

"ಸವುರುಪಾಯಿ ಹಿಂದೆ ನ್ಯಡಿತು. ಈಗ ಎಷ್ಟಾಗ್ಯದೊ ಗೊತ್ತಿಲ್ಲ. ಒಂದೊವರ ಸವುರಕೋದ್ರು ಹೋಯ್ತೆಯ."

"ಅದಿರ್ಲಿ, ಎಡೂರಪ್ಪ ಸವುರುಪಾಯಿ ಕಳಿಸಿರದ್ಯಾಕೆ ಹೇಳ್ಳ" ಎಂದ ಕಾಳಮಾವ.

"ಆಗ ಸಣ್ಣ ಹಿಡುವಳಿದಾರ್ರಿಗೆ ಅನುಕೂಲಾಗ್ಲಿ ಅಂತ ಬೀಜ ಗ್ವಬ್ಬರಕೆ ಒಂದು ಸವುರ ಕೊಡ್ತಿನಿ ಅಂದಿದ್ನಲ್ಲ ಮಾವ, ಆ ದುಡ್ಡು ಈಗ ಬಂದದೆ."

"ಅಲ್ಲ ಕಂಡ್ಯ, ಉತ್ತು ಬಿತ್ತು, ಆದೋಟಾರಂಭ ಬಡಕಂಡು, ಮನಿಗೆ ತುಂಬಿಸಿಗಂಡು ಕುಂತಿರುವಾಗ, ಇವುನ ಬೀಜ ಗ್ವಬ್ಬರದ ದುಡ್ಡು ಬತ್ತದೆ ಅಂದ್ರೆ ಏನೇಳನಾ?" ಎಂದ ಕಾಳಮಾವ.

"ಉಗಾದಿ ಹಬ್ಬಕಾಯ್ತದೆ ತಗೊ" ಎಂದ ಸೀರ.

"ಅಂಗೆ ಆಯ್ತುಪ್ಪ ಹಬ್ಬಕೂ ಆಯ್ತದೆ, ವರ್ಸತೊಡಕುನೂ ಮಾಡಬವುದು."

"ಅಂಗರೆ ವಳ್ಳೆ ಟೇಮಿಗೆ ದುಡ್ಡು ಕಳಿಸ್ಯವುನೆ ಬುಡು."

"ಅವುನು ಬುದ್ಧಿವಂತನೆಯ ಬುಡು. ಯಲಕ್ಸನ್ ಟೇಮಿಗೆ ಸರಿಯಾಗಿ ಕಳಿಸ್ಯವುನೆ."

"ಥೂ, ಸರ್ಕಾರದಲ್ಲಿ ದುಡ್ಡಿರಲಿಲ್ಲವಂತೆ ಕಣಮಾವ. ಈಗ ಯತ್ಲುದ್ರೊ ತಗದು ಇತ್ತಗೆ ಯಸ್ತವುನೆ."

"ಸಣ್ಣ ಹಿಡುವಳಿ ದಾರ್ರಿಗೆ ವರಸಕ್ಕೊಂದು ಸವುರ ಕೊಡದಾದ್ರೆ ಅದುವಳ್ಳೆ ಇದೆಯ ಬುಡ್ಯ" ಎಂದ ಸೀರ.

"ನೋಡ ಮಾವ, ಒಂದು ಸವುರುಪಾಯಿಗೆ ಹಿಂಗ್ಯಲ್ಲ ಕುಣದಾಡದೇನು ಬ್ಯಾಡ. ಅಂಗೇ ನೋಡಿದ್ರೆ ಐದು ಸವುರ ಕೊಡೊ ಸಗತಿ ಸರ್ಕಾರಕದೆ. ಮಠಕ್ಕೇ ನೂರೈವತ್ತು ಕೋಟಿ ಕೊಡೋನತ್ರ ರೈತರಿಗೆ ಐದು ಸವುರ ಕೊಡೊ ದುಡ್ಡಿಲ್ಲವೆ? ಅಷ್ಟಕ್ಕೂ ರೈತ ಬ್ಯಳೆ ಬ್ಯಳಿತನೆ, ಮಠ ಏನು ಶ್ಯಾಟ ಬ್ಯಳದವೆ?"

"ಅವು ದಾನದರ್ಮ ಮಾಡ್ತವೆ, ಅದ್ಕೆ ಕೊಟ್ಟಿರ ಬೇಕು ಬುಡು."

"ಕಾಸೀಸಗಂಡ ಮಠದೋರು ಸುಮ್ಮನಿದ್ದ ರೇನೊ ಉಗ್ರಿ? ಅವುರು ಎಡೂರಪ್ಪನಿಗೆ ಓಟು ಕೊಡಿ ಅಂತ ಭಕ್ತರಿಗೆ ಹೇಳ್ತವೆ" ಎಂದುಕೊಂಡು ವಾಟಿಸ್ನೆ ಬಂದ.

"ಅದ್ಯಾವ ಮಠದೋರ್ಲ ಅಂಗೇಳೊವು?"

"ಸುಮಾರು ಮಠ ಹೇಳ್ತವೆ ದ್ವಡಪ್ಪ, ಪರೆಗ್‌ಜಾಂಪಲ್ ಶಿವಮೊಗ್ಗದತ್ರಯಿರೊ ಒಂದು ಮಠ ಡೈರೆಕ್ಟಾಗಿ ಕ್ಯಾನುವಾಸನೆ ಮಾಡ್ತರಂತೆ. ಇನ್ನು ಸಿರಿಗೆರೆ ಸ್ವಾಮಿ ಬಾಯಿ ಬುಟ್ಟು ಓಟು ಕೇಳದೆ ಬ್ಯಾಡ, ಅವುರ ಜನಾಂಗ ಬಿಜೆಪಿಗೇ ಓಟು ಮಾಡ್ತದಂತೆ. ಇದ್ದದ್ರಲ್ಲಿ ನಮ್ಮ ಚುಂಚನಗಿರಿಸ್ವಾಮಿನೆ ಯಾರಿಗೂ ಓಟು ಕೇಳದಿಲ್ಲ, ಗೆದ್ದೋರ ಕರದು ಕ್ಯಲಸ ಮಾಡಿಸಿಗತ್ತದೆ. ದಿಸೀಸ್ ರಿಯಲಿ ಮೆಚ್ಚಗಳೊ ಮ್ಯಾಟ್ರು."

"ನಿಜಬುಡು, ಅಂಗೆ ಇರಬೇಕು. ನೋಡಾಗ್ಲೆ ಅಧಿಕಾರದಲ್ಲಿ ಇಲ್ದೆಯಿರೊ ದ್ಯಾವೇಗೌಡ್ರ ಫ್ಯಾಮಿಲಿ ಬುಟ್ಟು ಬಿಜೆಪಿ ಸಪೊರ್ಟು ಮಾಡೊ ಖೇಣಿ ಕಟೌಟ್ ತಂದು ಮಠದತ್ರ ಹಾಯ್ಕಂಡಿದ್ದರಂತೆ. ಅದಪ್ಪ ರಾಜಕೀಯ ಅಂದ್ರೆ."

"ಅದನ್ಯಲ್ಲ ರಾಜಕೀಯ ಅನ್ನಕ್ಕೆ ಬರದಿಲ್ಲ ಕಣೊ ಉಗ್ರೀ. ರಾಜಕೀಯ ಅಂದ್ರೆ ಏನು ತಿಳಕಂಡೆ ನೀನು? ಇಂತ ಮ್ಯಾಟ್ರನ್ಯಲ್ಲ ರಾಜಕೀಯ ಅನ್ನಬ್ಯಾಡ. ಅನ್ನದೆ ಅನಿವಾರ್ಯ ಆದ್ರೆ ಅವಕಾಶವಾದಿ ರಾಜಕೀಯ ಅನ್ನು" ಎಂದ ವಾಟಿಸ್ನೆ.

"ಅದ್ಯಾಕ್ಲ ಅಂಗಂತೀ?" ಎಂದಳು ಜುಮ್ಮಿ.

"ಅಲ್ಲಾ ಕಣಕ್ಕ ನಮ್ಮ ಸ್ವಾಮಿಗಳು ಕಾಲಕ್ಕೆ ತಕ್ಕಂತೆ ಆಟ ಆಡದ ರಾಜಕೀಯ ಅನ್ನಕ್ಯಾದತೆ?"

"ಇನ್ನೇನಂತಿಲ?"

"ಧರ್ಮ ಮತ್ತು ರಾಜಕಾರಣ, ಅಥವಾ ಜಾತಿ ಮತ್ತು ರಾಜಕಾರಣ, ಅಥವಾ ಅವಕಾಶವಾದಿ ರಾಜಕಾರಣ ಅನ್ನಬವುದು ಅಷ್ಟೆ."

"ನರಿ ಹೂಸು ಘಟ್ಟಕ್ಕೇರ್ಯತ್ಲ?"



"ಏರದು ಬೇಕಾಗಿಲ್ಲ ದ್ವಡಪ್ಪ, ನರಿ ಹೂಸದು ನಿಸರ್ಗ ನಿಯಮ. ಅಂಗೆ ವಾಟಿಸ್ನೆ ಟೀಕೆ ಮಾಡದ ಯಾರೂ ತಡಿಯಕ್ಯಾಗದಿಲ್ಲ."

"ಏನಾರ ಒಂದು ಸಿಕ್ಕಿದ್ರೆ ಸಾಕು ಸಂದಿಗಂಟ ಹೇಳಿಕಂಡು ತಿರುಗ್ತನೆ" ಎಂದಳು ಜುಮ್ಮಿ.

"ಅವುನೊಂಥರಾ ಟಿವಿ ನ್ಯೆನಿದ್ದಂಗೆ ಕಣೆ."

"ಟಿವಿ ನ್ಯೆನಾದ್ರೆ ನಾನು ಟೆನ್ ಕಣೊ ಉಗ್ರಿ. ನಮ್ಮ ಏರಿಯಾದಲ್ಲಿ ಯಾರೂ ಪೇಪರ್ ತರುಸ್ದೆಯಿರದ್ರಿಂದ ನಾನು ಬರದನ್ನೆ ಕಾಯ್ತಾಯಿದ್ದು ಮ್ಯಾಟ್ರು ಕೇಳಿಕಂಡು ಮಾತಾಡ್ತರೆ ಗೊತ್ತೆ?"

"ನೀನೇ ಸುಳ್ಳಪ್ಪ ಇನ್ನ ನಿನ್ನ ಮಾತ ಕಟಗಂಡು ಮಾತಾಡ್ತರಲ್ಲ ಜನ, ಅವುರ ಮಾತಲ್ಲಿ ಸತ್ಯ ಹುಡಕ

"ಇವತ್ತು ಪೇಪರ್‌ಗಳು ಅಂಗೆ ಆಲವೇನೊ ಆ ಇರ್ಲಿ ನೀನೊಂದು ಪೇಪರ್ ತರುಸೊ ಚಿಕ್ಕಣ್ಣ ಯ ಟೈಮಾದ್ರಿಂದ ಜಾಸ್ತಿ ಗಿರಾಕಿ ಬತ್ತರೆ."

"ಈಗ ಬರೋರೆ ಸಾಕು ತಗೊ, ಅದಕಬ್ಯಾರೆ ದು ತರ್ಲಿ."

"ಡೈಲಿ ತ್ರೀ ರುಪೀಸ್ ಕೊಡಕ್ಯಾಗದಿಲವೇನ

"ನಾನೆ ನಿನಿಗೊಂದು ಕಾಪಿ ಕೊಡ್ತಿನಿ, ಒಂದು ಪ ತಂದಾಕು ಮತ್ತೆ ನೋಡ್ದಸ."

"ಯಾವ ಪೇಪರ್ ತಂದಾಕ್ಲೊ?"

"ಇಜ್ಜೆಯ ಕರ್ನಾಟ್ಕ ತಂದಾಕು. ಒಂದು ಕೊಡ್ತಿನಿ."

"ಥೂ ನಿನ್ನ, ವಳ್ಳೆ ಟೇಸ್ಟೆಯಿಲವಲ್ಲೊ ನಿಂಗೆ. ವಿ ಕರ್ನಾಟಕ ಓದದಕಿಂತ ಆ ಚೆಡ್ಡಿ ಮಂಜನ್ನ ಕರದು ನಿಮಿಸ ಮಾತಾಡ್ಸಿದ್ರೆ ಸಾಕಪ್ಪ."

"ಅಂಗಂತಿಯಾ?"

"ಊ ಕಣೊ, ಅವುನು ವತ್ತರೆಲೆ ಓದಿ ಸಂದಿಗಂಟ ಅದ್ನೆ ಹೇಳಿಕಂಡು ತಿರುಗ್ತನೆ. ಓದ್ದ ಏನು ಬರದವುರೆ ಅಂತ ಹೇಳ್ತನೆ. ಆ ಪೇಪರ್ ಇಲ್ ಇರಲಿಲ್ಲ, ನಮಿಗ್ಯಲ್ಲ ದೇಸದ ಸಮಾಚಾರ ಗೊ ರಲಿಲವೆ?"

ವಿಡಂಬನೆ

ಉದ್ಯೋಗ ಅವಕಾಶ

ಈಗ ಎಲ್ಲೆಡೆ ಆರ್ಥಿಕ ಬಿಕ್ಕಟ್ಟು ಉಂಟಾಗಿ ನಿರುದ್ಯೋಗ ಸಮಸ್ಯೆ ಉಲ್ಬಣವಾಗುತ್ತಿರುವುದರಿಂದ, ಜನರ ನೆರವಿಗೆ ಬರಲು ಸಂಘ ಪರಿವಾರದ ನಾವು ನಿರ್ಧರಿಸಿದ್ದೇವೆ. ಸೂಕ್ತ ವ್ಯಕ್ತಿಗಳು ನಮ್ಮ ಸಂಘ ಪರಿವಾರದ ಸಂಘಟನೆಗಳಾದ ಆರ್‌ಎಸ್‌ಎಸ್, ಬಿಜೆಪಿ, ಭಜರಂಗದಳ, ವಿಶ್ವಹಿಂದೂ ಪರಿಷತ್ತಿನ ಕಚೇರಿಗಳಲ್ಲಿ ತಮ್ಮ ಅರ್ಜಿಗಳನ್ನು ಸಲ್ಲಿಸಬಹುದು.

- **ನಮ್ಮ ಪರಿಚಯ:** ದೇಶದೆಲ್ಲೆಡೆ ಲೂಟಿ, ದರೋಡೆ, ದಲಿತ ಮತ್ತು ಅಲ್ಪಸಂಖ್ಯಾತ ಮುಸಲ್ಮಾನ್ ಮಹಿಳೆಯರ ಮೇಲೆ ಅತ್ಯಾಚಾರ ನಡೆಸುವ ಕೃತ್ಯಗಳಲ್ಲಿ ನಾವೀಗಾಗಲೇ ದಾಖಲೆ ನಿರ್ಮಿಸಿದ್ದೇವೆ. ಈಗ ಇಂತಹ ದೇಶಭಕ್ತ ಕಾರ್ಯಗಳನ್ನು ಎಲ್ಲೆಡೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ನಡೆಸುವ ಯೋಜನೆ ನಮ್ಮದಾಗಿದೆ. ಅದರಲ್ಲೂ ಚುನಾವಣೆಗಳು ನಡೆಯಲಿರುವ ಈ ಸಂದರ್ಭದಲ್ಲಿ ಇಂತಹ ದೇಶ ಉಳಿಸುವ ಕಾರ್ಯವನ್ನು ಹೆಚ್ಚು ದಕ್ಷತೆಯಿಂದ ಮಾಡಬೇಕಾಗಿದೆ.
- **ಉದ್ಯೋಗ ವಿವರಣೆ:** ಲೂಟಿ, ಅತ್ಯಾಚಾರ, ಸಾರ್ವಜನಿಕ ಮತ್ತು ಖಾಸಗಿ ಆಸ್ತಿಗಳ ನಾಶ, ದರೋಡೆ, ಸುಳ್ಳು ಹೇಳುವುದು.
- **ಸಂಬಳ:** ನಗದು ಹಣ ಮತ್ತು ಲೂಟಿಯ ಪೂರ್ಣಪಾಲು ನಿಮ್ಮ ಕುಟುಂಬಕ್ಕೆ ರಕ್ಷಣೆ, ಸರ್ಕಾರಿ ಕಾಂಟ್ರಾಕ್ಟ್‌ಗಳು, ನಿಮಗೆ ಪೊಲೀಸ್ ಬಂದೋಬಸ್ತ್ ಮತ್ತು ಸ್ಥಳೀಯ ಚುನಾವಣೆಗಳಲ್ಲಿ ಬಿಜೆಪಿಯ ಟಿಕೆಟ್.
- **ವಿಶೇಷ ಸೂಚನೆ:** ನಿಮಗೆ ಬೇಕಾದಷ್ಟು ತ್ರಿಶೂಲ, ತಲ್ವಾರ್, ಪೆಟ್ರೋಲ್, ಸೀಮೆಎಣ್ಣೆ, ಲಾಠಿ, ಬಾಂಬ್‌ಗಳು ಮತ್ತು ಕೇಸರಿ ಬಣ್ಣದ ಬಟ್ಟೆಗಳನ್ನು ನಿಮಗೆ ಉಚಿತವಾಗಿ ನೀಡಲಾಗುವುದು.

ನಿಮ್ಮ ಮತ್ತು ಭಾರತ ದೇಶದ ಭವಿಷ್ಯಕ್ಕಾಗಿ ಈ ಅತ್ಯಾಕರ್ಷಕ ಅವಕಾಶವನ್ನು ಪಡೆದು ತಕ್ಷಣವೇ ತಮ್ಮ ಅರ್ಜಿಗಳನ್ನು ನಮ್ಮ ಸಂಘ ಪರಿವಾರದ ಕಚೇರಿಗಳಿಗೆ ಸಲ್ಲಿಸಿ.

ಆರ್‌ಎಸ್‌ಎಸ್

ಜೈ ಭಾರತ್! ಜೈ ಅಧ್ವಾಣಿ!

Statement about ownership and other particulars of **'Ranjane Bodha Prachodane Lankesh'** Weekly, Bangalore as required under Rule 8 of Registration of Newspapers (Central) Rule, 1956.

FROM - IV

(See Rule 8)

1.	Place of Publication	:	Bangalore
2.	Periodicity of Publication	:	Weekly
3.	Printer's Name	:	Gauri Lankesh
	Whether Citizen of India	:	Yes
	Address	:	No. 9, E.A.T. Street, Basavanagudi, Bangalore-560 004.
4.	Publisher's Name	:	Gauri Lankesh
	Whether Citizen of India	:	Yes
	Address	:	No. 9, E.A.T. Street, Basavanagudi, Bangalore-560 004.
5.	Editor's Name	:	Gauri Lankesh
	Whether Citizen of India	:	Yes
	Address	:	No. 9, E.A.T. Street, Basavanagudi, Bangalore-560 004.

I, Gauri Lankesh, hereby declare that the particulars given above are t to the best of my knowledge and belief.

Date : 8.3.2009

Sd/-.
GAURI LANKESH

ಾಗಿಲೆ ಕಣದ ಪ್ಲುಟ ತಂದಾಕು, ಅದರಲ್ಲಿ ಸಿನುಮದ ಸುದ್ದಿ ಜಾಸ್ತಿಯಿರತದೆ."
ಾ, ಅವುನು ಯಾವುದೇ ಸುದ್ದಿಗೆ ವಗ್ಗರಣೆ ಜಾಸ್ತಿ ಹಾಕಿರತನೆ ಕಗೊ.
ಿ ಓದಿದ ಮ್ಯಾಲೆ ಸರಿಯಾದ ಸುದ್ದಿಗೆ ಇನ್ಯಾವದಾರ ಪತ್ರಿಕೆ
ಬ ಅನ್ನುಸ್ತದೆ."

ೋಗ್ಲಿ, ನೀನೇ ಓದಿರೊ ಯಾವುದ್ನಾರ ತಂದಾಕು."

ಜಾವಾಣಿ ತತ್ತಿನಿ. ಅದರಲ್ಲಿ ನ್ಯೂಸಿಗಿಂತ ವಾಚಕರ ವಾಣಿ ಚನಾಗಿರತದೆ.
ಮ್ಮ ಕ್ಲೋಜ್ ಫ್ರೆಂಡ್ ಎಂ.ಪಿ. ಪ್ರಕಾಶ್ ಕಾಲಮಿಷ್ಟಾಗಿರೊ ಉದಯವಾಣಿ
ಅಂದ್ರೆ ಅದೀಪ್ರಾಂತ್ಯಕ್ಕೆ ಬರದಿಲ್ಲ."

ಂಗರೆಲ್ಲಿ ಬತ್ತದದೂ?"

ಾರತದ ಭೂಭಾಗನೆ ಒಂದಾದ್ರೆ, ದಕ್ಷಿಣ ಕನ್ನಡನೇ ಒಂದು ಅನ್ನೊ
ಪ್ರದೇಶ ಒಂದದೆ. ಆ ಪ್ರದೇಶದಲ್ಲಿ ಅದು ನ್ಯಡಿತದೆ. ಸುಳ್ಳು ಸುದ್ದಿ
ಅದಕೆ ಕಳ್ಳು ಕುಡದಂಗೆ. ಅದ ತರಸನ ಅಂದ್ರೆ ಇಲ್ಲ್ಯಾರು ಏಜೆಂಟರಿಲ್ಲ,
ಿ ತರಸನ ಅಂದ್ರೆ ಮ್ಯಾಟ್ರು ಹಳೆದಾಯ್ತದೆ. ಆದಕ್ಕಿಂತ ಅದ ಓದದೆಯಿದ್ರು
ಈಗಿರದಕ್ಕಿಂತ ಇನ್ನು ಚನಾಗಿರತಿವಿ."

ಂಗಾದ್ರುದ ಓದಿದ್ರೆ ಕೆಟ್ಟೋಯ್ತಿವಾ?"

ೂ ಕಣಕ್ಕ, ಅದು ಮುಸ್ಲಿಂ ವಿರೋಧಿ ಪೇಪ್ರು. ನಮ್ಮ ನಡುವೆಯಿರೊ
ದೇ ಜನಾಂಗನ ಬೈಬಾರದು, ಸುಮ್ಮಸುಮ್ಮನೆ ಹೊಗಳಲೂಬಾರದು.
ಈ ಪತ್ರಿಕೆ ಅದ್ಯಾರನೊ ಹೊಗಳತದಂತೆ ದಲಿತ್ರು ಮುಸ್ಲಿಮರ ಟೀಕೆ
ದಂತೆ."

ುತ್ತೆ ಅಂತಾ ಪತ್ರಿಕೆಗೆ ಎಂ.ಪಿ. ಪ್ರಕಾಶ್ ಯಾಕೆ ಬರಿತಾಯಿದ್ದರೊ?"

ುದಯವಾಣಿಯುವರ ಮನಸ ಬದ್ಲಾಸಿ ವಳ್ಳೆ ಜನ ಮಾಡನ ಅಂತ
ುಯಿರಬೌದು."


ಡಿಗೂ ನೀನು ಯಾವ ಪೇಪರ್ ತರಸಬೇಕು ಅನ್ನದ
ುಯಿಲವಲ್ಲೊ?" ಎಂದ ಉಗ್ರಿ.

ೋಡೋ ಉಗ್ರಿ, ನನ್ನ ಲೆವೆಲ್ಲಿನ ಪತ್ರಿಕೆ ತಂದು ಓದಿ ಅಂತ ಹೇಳಕ್ಕೋದ್ರೆ
ಾವೆಲ್ಲು ಅಭಿರುಚಿಯ ನಿಮ್ಮ ಮ್ಯಾಲೆ ಹೇರಿದಂಗಾಯ್ತದೆ. ಅದಕ್ಕಿಂತ
ನ್ನಡಪ್ಪ ಪತ್ರಿಕೆನೆ ಓದದೆ ಯಂಬತ್ತು ವರ್ಷದತ್ತ್ರ ಬಂದೇ ಬುಟ್ಟವುನೆ.
ರ ಚಿಗಪ್ಪನೂ ಅವುನ ಹಿಂದೆನೆ ಅವುನೆ. ಇನ್ನು ನಮ್ಮ ಜುಮ್ಮಕ್ಕನಿಗೂ
ೂ ಸಮಂದ ಇಲ್ಲ, ನೀನಂತೂ ಇಸುಗೂಲ್ ಮೇಷ್ಟ್ರಗಳ ತರ
"

ದ್ಯಾಕ್ಲ ಮೇಟ್ರು ಅಂತಿ?"

ೂ ಕಣಕ್ಕ, ನಮ್ಮ ಮೇಷ್ಟ್ರುಗಳು ಯಾವ ಅಂಗಡಿ, ಹೋಟ್ಲಲ್ಲಿ
ಪೇಪರ್ ಬತ್ತದೆ ಅಂತ ಅಲ್ಲಿಗೋಗಿ, ಕಾಪಿ ಕುಡುದು, ಒಂದಕ್ಸರ
ಂಗೆ ಓದಿ ಬತ್ತರೆ. ದಿ ಸೀಸ್ ಸೇಮ್ ಟು ಅವರ್ ಟೀಚಿಂಗ್

ಸಾವಿನ ಬೀಜಗಳು




ಹೋದ ಸಲ 'ಟೀಕೆ-ಟಿಪ್ಪಣಿ' ಬರೆಯಲು ಕೆಲವು ಲೇಖನ ಓದಿದ್ದೆ; ಅವುಗಳಲ್ಲಿ ಬಹುಮುಖ್ಯವಾದದ್ದು ಮಾರ್ಗರೆಟ್ ಬರ್ಕ್-ವೈಟ್ ಅವರ ಪುಸ್ತಕ. ಮೇಲುನೋಟಕ್ಕೆ ಈ ಪುಸ್ತಕ ಸಾಮಾನ್ಯವಾದದ್ದು; ಇದರಲ್ಲಿ ಬಲಭಾಗದ ಪುಟಗಳಲ್ಲಿ 'ಇಂಟರ್‌ವ್ಯೂ ವಿತ್ ಫ್ರೀಡಂ' ಎಂದು ಅಚ್ಚಾಗಿದೆ. ಮುಖಪುಟದಲ್ಲಿ ಮಾತ್ರ 'ಹಾಫ್ ವೇ ಟು ಇಂಡಿಯಾ' ಎಂದು ಅಚ್ಚಾಗಿದೆ. ನಮ್ಮ ಸ್ವಾತಂತ್ರ್ಯ ಸಂಗ್ರಾಮ ಮತ್ತು ಗಾಂಧೀಜಿಯ ಕೊಲೆ ಕುರಿತು "ಇದು ಮತ್ತೊಂದು ಪುಸ್ತಕ" ಎಂದು ಓದತೊಡಗಿದೆ. ಆದರೆ ಈ ಪುಸ್ತಕದ ವೈಶಿಷ್ಟ್ಯ ಹೊಳೆಯತೊಡಗಿತು. ಬರ್ಕ್-ವೈಟ್ ವಿಚಿತ್ರ ರೀತಿಯ ವಸ್ತುನಿಷ್ಠೆ ಮತ್ತು ಪ್ರಾಮಾಣಿಕತೆಯನ್ನು ಈ ಪುಸ್ತಕದಲ್ಲಿ ತೋರಿದ್ದಾರೆ. ಈಕೆ ಗಾಂಧೀಜಿಯ ಅಭಿಮಾನಿ; ಆದರೆ ಕುರುಡು ಅಭಿಮಾನಿಯಲ್ಲ. ಹಾಗೆಯೇ ಈಕೆ ಸಿನಿಕಳಲ್ಲ, ಉದ್ಧಟಳಲ್ಲ.

ಗಾಂಧೀಜಿ ಯಂತ್ರಗಳನ್ನು ತಿರಸ್ಕರಿಸುತ್ತಿದ್ದರು; ಬರ್ಕ್-ವೈಟ್ ಯಂತ್ರ ಪ್ರೇಮಿ. ಗಾಂಧೀಜಿ ಬಿರ್ಲಾ ಬಜಾಜ್‌ಗಳನ್ನು ಇಷ್ಟಪಡುತ್ತಿದ್ದರು. ಬರ್ಕ್-ವೈಟ್ ಈ ಇಷ್ಟವನ್ನು ಕುತೂಹಲ ಮತ್ತು ಅನುಮಾನದಿಂದ ನೋಡುತ್ತಿದ್ದಳು.

ರಾಜೀವ್ ಮರಣವನ್ನಪ್ಪಿರುವ ಈ ಸಂದರ್ಭದಲ್ಲಿ ಗಾಂಧೀಜಿಯವರ ಮರಣದ ಬಗ್ಗೆ ನಾನು ಯೋಚಿಸುವಂತೆ ಈ ಪುಸ್ತಕ ಮಾಡಿತು. ಗಾಂಧೀಜಿ ಸತ್ತದ್ದು ಜಾತೀಯತೆಯ ವಿರುದ್ಧ ಹೋರಾಡಿದ್ದಕ್ಕೆ. ಹಿಂಸೆಯ ವಾತಾವರಣದಲ್ಲಿ ಅಹಿಂಸೆಯನ್ನು ಹೊಮ್ಮಿಸಲು ಯತ್ನಿಸಿದ್ದಕ್ಕೆ ಎಂಬುದು ಎಲ್ಲರಿಗೂ ಗೊತ್ತಿದೆ. ಗಾಂಧೀಜಿ ಮಡಿದಾಗ ಬರ್ನಾಡ್ ಶಾ ಹೇಳಿದರು: "ಈ ಬದುಕಿನಲ್ಲಿ ತೀರಾ ಒಳ್ಳೆಯದಾಗಿರುವುದು ಎಷ್ಟು ಅಪಾಯಕರ ಎಂಬುದನ್ನು ಈ ಕೊಲೆ ತೋರುತ್ತದೆ."

ಗಾಂಧೀಜಿಯವರ ದ್ವಂದ್ವಗಳಲ್ಲಿ ಕೂಡ ಅವರ ಮರಣದ ಬೀಜಗಳಿದ್ದವು. ಗಾಂಧೀಜಿ ರಾಜಕಾರಣಿಯಾಗಿರಲಿಲ್ಲ; ಆದರೆ ರಾಜಕಾರಣಿಗಳ ಎಲ್ಲ ಕೃತ್ಯಗಳಿಗೂ ಪರೋಕ್ಷವಾಗಿ ಕಾರಣರಾಗಿದ್ದರು. ಇದನ್ನು ಬರ್ಕ್-ವೈಟ್ ಬಹುಸೂಕ್ಷ್ಮವಾಗಿ, ಒರಟುತನವಿಲ್ಲದೆ ಬರೆಯುತ್ತಾರೆ.



ಗಾಂಧೀಜಿ 'ಟ್ರಸ್ಟೀಶಿಪ್' ಎಂಬ ಸಿದ್ಧಾಂತ ರೂಪಿಸಿಕೊಂಡು ಒಳ್ಳೆಯ ಶ್ರೀಮಂತರನ್ನೆಲ್ಲ ಸಮರ್ಥಿಸುತ್ತಿದ್ದರು. ಆದರೆ ಈ ದೇಶದಲ್ಲಿ ಒಳ್ಳೆಯದು, ಕೆಟ್ಟದರ ನಡುವಿನ ಗೆರೆ ಬೇಗ ಮಾಸಿಹೋಗುತ್ತದೆ ಎಂಬುದನ್ನು ಗಮನಿಸಿರಲಿಲ್ಲ. 1948 ರಲ್ಲಿ ಗಾಂಧೀಜಿ ಕೋಮು ಸಾಮರಸ್ಯಕ್ಕಾಗಿ ಕೊನೆಯ ಉಪವಾಸ ಮಾಡಿದ್ದು ಎಲ್ಲರೂ ಬಲ್ಲರು. ಸಹಸ್ರಾರು ಹಿಂದೂಗಳು, ಮುಸ್ಲಿಮರು ಕೋಮುದಳ್ಳುರಿಯಲ್ಲಿ ಸಾಯುತ್ತಿದ್ದಾಗ "ಹಿಂದೂಗಳು ಮುಸ್ಲಿಮರು ತಮ್ಮ ದ್ವೇಷ, ಕ್ರೌರ್ಯ ತೊರೆದು ಒಂದಾಗುವವರೆಗೆ ನಾನು ಉಪವಾಸ ನಿಲ್ಲಿಸುವುದಿಲ್ಲ" ಎಂದು ಗಾಂಧೀಜಿ ಉಪವಾಸ ಕೈಗೊಂಡರು. ಜನ ಮೊದಲೆರಡು ದಿನ ಇದನ್ನು ನಿರ್ಲಕ್ಷಿಸಿದರು; ಗಾಂಧೀಜಿ ಉಪವಾಸದಿಂದ ಬಳಲುತ್ತಿದ್ದಂತೆ, ಸಾವಿಗೆ ಹತ್ತಿರವಾಗುತ್ತಿದ್ದಂತೆ ಜನ ಸೇರತೊಡಗಿದರು, ದೇಶದ ಎಲ್ಲ ಸ್ತರದ, ಜಾತಿಯ ಜನ ಗುಂಪುಗುಂಪಾಗಿ ಬಂದು ಉಪವಾಸ ನಿಲ್ಲಿಸಲು ಕೇಳಿಕೊಳ್ಳತೊಡಗಿದರು. ಬಿರ್ಲಾ ಭವನದಲ್ಲಿ ಉಪವಾಸ ಮಾಡುತ್ತಿದ್ದ ಗಾಂಧೀಜಿಯೇ ಅಚ್ಚರಿಪಡುವಂತೆ ಲಕ್ಷಾಂತರ ಜನರು ಘೇರಾಯಿಸಿ ಬೇಡಿಕೊಳ್ಳತೊಡಗಿದರು. ದಿಲ್ಲಿಯ ಕಾರ್ಖಾನೆಗಳ ಕಾರ್ಮಿಕರು ಬೃಹತ್ ಮೆರವಣಿಗೆಯಲ್ಲಿ ಬಂದು ಉಪವಾಸ ನಿಲ್ಲಿಸಲು ಮನವಿ ಸಲ್ಲಿಸಿದರು. ಆದರೆ ಬರ್ಕ್-ವೈಟ್ ಒಂದು ವಿಚಿತ್ರವನ್ನು ಗಮನಿಸಿದಳು. ಬಿರ್ಲಾ ಬಟ್ಟೆ ಗಿರಣಿಯ ಕಾರ್ಮಿಕರು ಮಾತ್ರ ಬರಲಿಲ್ಲ, ಗಾಂಧೀಜಿಯವರು ಉಪವಾಸವನ್ನು ಮುಕ್ತಾಯಗೊಳಿಸಿದ ಮೇಲೆ ಬರ್ಕ್-ವೈಟ್ ಈ ಬಿರ್ಲಾ ಬಟ್ಟೆಗಿರಣಿಯ ಕಾರ್ಮಿಕರ ಹಟ್ಟಿಗೆ ಹೋದಳು. ಅಲ್ಲಿನ ಸ್ಥಿತಿ ನೋಡಿ ಆಕೆಗೆ ಆಘಾತವಾಯಿತು. ಅತ್ಯಂತ ಕೊಳಕಾದ, ನೀರಿಗೆ ಗತಿ ಇಲ್ಲದ, ಕಾಲಿಡಲು ಜಾಗವಿಲ್ಲದ ಹಟ್ಟಿ ಅದು. ಇಲ್ಲಿಯ ಜನ ಹೇಳಿದರು: "ಗಾಂಧೀಜಿ ಒಳ್ಳೆಯವರಿರಬಹುದು. ಆದರೆ ಬಿರ್ಲಾ ಅವರು ನಮ್ಮನ್ನು ಯಾವ ಸ್ಥಿತಿಗೆ ತಂದಿದ್ದಾರೆ ನೋಡಿ! ಬಿರ್ಲಾ ದೇಶದ ಎಲ್ಲೆಡೆ ಕಟ್ಟಿಸಿದ ನೂರಾರು ಬೃಹತ್ ದೇವಾಲಯದಲ್ಲಿ ನಾಲ್ಕನ್ನು ಕಟ್ಟಿಸದೆ ಕಾರ್ಮಿಕರಿಗೆ ನೆರವಾಗಿದ್ದರೂ ಅವರಿಗೆ ಅಷ್ಟಿಷ್ಟು ನೆಮ್ಮದಿ ಸಿಗುತ್ತಿತ್ತು."

ಬರ್ಕ್-ವೈಟ್ ಗಾಂಧೀಜಿ ಮತ್ತು ಬಿರ್ಲಾ ಬಗ್ಗೆ ವ್ಯಸನಗೊಂಡು ಹಿಂದಿರುಗಿದರು. ಆಕೆ ಗಾಂಧೀಜಿಗೆ ಈ ವಿಷಯ ಸೂಚಿಸಿದರು. ಗಾಂಧೀಜಿ ನಂಬಲಿಲ್ಲ, ಯಾಕೆಂದರೆ ಬಿರ್ಲಾ ಕಾರ್ಖಾನೆಯ ನಡುವರ್ಗದ ಗುಮಾಸ್ತರು, ಲೆಕ್ಕಗರಿಗೆ ಒಳ್ಳೆಯ ಮನೆ ಕಟ್ಟಿಸಿ ಕೊಟ್ಟು ಗಾಂಧೀಜಿಯ ಕಣ್ಣಿಗೆ ಮಣ್ಣೆರಚಿದ್ದ.

ಬಿರ್ಲಾ ಬಗ್ಗೆ ಕೆಂಡವಾದ ಬರ್ಕ್-ವೈಟ್ ಆತನ ಸಂದರ್ಶನ ನಡೆಸುವಾಗ ವಿಷಯ ಎತ್ತಿದಳು. ಬಿರ್ಲಾ ಎಲ್ಲರೂ ತಿಳಿದದ್ದಕ್ಕಿಂತ ಭಂಡನಾಗಿದ್ದ. ವಿಷಯ ತೇಲಿಸಿ, "ನಾನು ಗಾಂಧೀಜಿಗೆ ಮೂರು ದಶಕದಿಂದ ನೆರವಾಗಿದ್ದೇನೆ" ಅಂದ.

"ನೀವು ಕಾರ್ಖಾನೆ ನಡೆಸುತ್ತಿದ್ದೀರಿ. ಗಾಂಧೀಜಿ ಚರಕವನ್ನು ನಂಬುತ್ತಾರೆ. ಆದರೂ ನೀವು ಹೇಗೆ ಸ್ನೇಹದಿಂದಿದ್ದೀರಿ?"

ಬಿರ್ಲಾ ಹೇಳಿದ: "ಅವರ ಸಿದ್ಧಾಂತ ಅವರಿಗೆ, ನಮ್ಮ ನಂಬಿಕೆ ನಮಗೆ ಗಾಂಧೀಜಿಯವರ ಬಗ್ಗೆ ನಮಗೆ ಅಪಾರ ಗೌರವವಿದೆ."

ಗಾಂಧೀಜಿಯವರ ಟ್ರಸ್ಟೀಶಿಪ್ ಸಿದ್ಧಾಂತ ಹೀಗೆ ನಶಿಸಿತ್ತು.

-ಜೂನ್ 2, 1991



ತಿಂಗಳು

ಜಿ.ಪಿ. ಬಸವರಾಜುರವರ
ಹೊಸ ಸಾಹಿತ್ಯ
ಮಾಸಿಕ

ಸಾಹಿತ್ಯಾಸಕ್ತರಿಗೊಂದು ಸಿಹಿ ಸುದ್ದಿ. ಕವಿ ಜಿ.ಪಿ. ಬಸವರಾಜು
ಗಳು' ಎಂಬ ಹೊಸ ಸಾಹಿತ್ಯ ಮಾಸಿಕ ರೂಪಿಸುವ ಪ್ರಯತ್ನಕ್ಕೆ
ಾಕಿದ್ದಾರೆ. ಮೈಸೂರಿನ ಅಭಿರುಚಿ ಪ್ರಕಾಶನದ ಗಣೇಶ್ ಈ
ಸಿಕದ ಪ್ರಕಾಶಕ.


ಜಿ.ಪಿ. ಬಸವರಾಜು ಪ್ರಜಾವಾಣಿ ಬಳಗದ 'ಮಯೂರ'ವನ್ನು
ದನೆಯ ತಾಜಾ ಮಾಸಿಕವನ್ನಾಗಿ ರೂಪಿಸಿ ಕನ್ನಡದ ಸಾಹಿತ್ಯಾಸಕ್ತರು
ಪ್ರೀತಿಸುವಂತೆ ನೋಡಿಕೊಂಡಿದ್ದರು. ಈ 'ತಿಂಗಳು' ಅವರ
ಸ ಪತ್ರಿಕೆ. ಅದು ಯಶಸ್ವಿಯಾಗಿ ಕನ್ನಡ ಸಾಹಿತ್ಯದ ಪರಿಸರದಲ್ಲಿ
ತ್ತು ಓದುಗರ ಮನೆ-ಮನದಲ್ಲಿ ತಿಂಗಳ ಬೆಳಕಿನಂತೆ ಹಬ್ಬಲಿ
ಬುದೇ ನಮ್ಮ ಹಾರೈಕೆ.

ಆಸಕ್ತರು ದಯವಿಟ್ಟು ಇವರೊಂದಿಗೆ ಮಾತನಾಡಿ.
ಜಿ.ಪಿ. ಬಸವರಾಜು 9980560013
ಅಭಿರುಚಿ ಗಣೇಶ್ 9448608926
ನಿಮ್ಮೆಲ್ಲರ ಬೆಂಬಲ ಇವರಿಗಿರಲಿ.

-ಲಂಕೇಶ್ ಬಳಗ

ಸೂ.:
ಎಚ್. ಕೇಶವಮೂರ್ತಿಯುವರ ಆರೋಗ್ಯ ಸರಿ
ಲ್ಲದಿರುವುದರಿಂದ ಅವರ 'ಆಣಕ' ಈ ವಾರವೂ
ಕಟವಾಗುತ್ತಿಲ್ಲ.

-ಸಂ



ಲಂಕೇಶರ ಹುಟ್ಟುಹಬ್ಬಕ್ಕೆ ಒಂದು ಕವಿತೆ

ನಾವು ಎಲ್ಲರೂ
ನೀವು ಇದ್ದಿದ್ದರೆ
ಈ ಎಲ್ಲದರ ಕುರಿತು
ಏನು ತೀರ್ಮಾನ ತೆಗೆದುಕೊಳ್ಳುತ್ತಿದ್ದಿರಿ ಎಂದು
ಯೋಚಿಸುತ್ತಾ ಕುಳಿತಿರುವೆವು.
ಹೀಗೆ ನೀವು ಸಾರ್ವಜನಿಕ ತೀರ್ಮಾನಗಳನ್ನು
ತೆಗೆದುಕೊಳ್ಳುತ್ತಿರಲಿಲ್ಲ ಎಂಬುದು ಬಹುಶಃ
ನಮಗೆ ಗೊತ್ತಿಲ್ಲ ಎನ್ನುವುದೂ ಒಂದು
ಚರ್ಚೆಯ ವಿಷಯವಾಗಿರುವುದು.

ನಿಮ್ಮ ಬಕ್ಕತಲೆಯ ಒಳಗೆ ಸುಳಿದಾಡುತ್ತಿದ್ದ
ಮಿಂಚುಗಳು,ಅಳ್ಳೆದೆಯವರ ಮೇಲೆ ಸದಾ ಮಸೆಯುತ್ತಿದ್ದ ಸೃಜನಶೀಲ
ಮಚ್ಚು ಮತ್ತು ಎಲ್ಲ ಸುಂದರಿಯರ ಬೆವರಸೆಲೆ
ಹುಡುಕಿಕೊಂಡು ಅಂಡಲೆಯುತ್ತಿದ್ದ
ಮಹಾನಾಚುಗೆಬುರುಕ ವಿದ್ವತ್ತು.
ನಡೆಯುತ್ತಿರುವುದು ಸದಾ ತಂತಿಯ ಮೇಲೆಂಬ
ದೊಂಬರ ಹುಡುಗಿಯ
ವಿನಾಕಾರಣ ಆಪತ್ತಿನ ಭಯ, ಅದಕ್ಕೂ ಮಿಗಿಲಾಗಿದ್ದ
ಅವ್ವನಂತಹ ಮೊಸರು ಮಾರುವ ನಿಯತ್ತು.

ನಾಚುಗೆಯ, ಲೆಕ್ಕಾಚಾರದ, ಪತರಗುಟ್ಟುವ,
ಕವಿತೆಯ, ಗದ್ಯದ, ಬೈಗುಳಗಳ
ಈ ಎಲ್ಲದರ ತಳದಲ್ಲಿ ಉಳಿಯುವ
ಅಲ್ಲೋಲಕಲ್ಲೋಲದಂತಹ ಏಕಾಂತದ ನಡುವೆಯೂ
ನೀವು ನೀಡುತ್ತಿದ್ದ ಕಠಿಣ ಏಟು.
ಅವುಗಳನು ಉಂಡೂ ಸುಖಿಸುತ್ತಿದ್ದ

ಮಹಾ ಪೋಕರಿ ಸಾಮಾಜಿಕ ಮನಸ್ಸು,
ಹಾದರದವಳ ಮಹಾ ಲೆಕ್ಕಾಚಾರ
ಮತ್ತು ಗರತಿಯ ಹುಚ್ಚುಕೋಡಿ ಮನಸ್ಸು
ಲಂಕೇಶ್ ನೀವು ಇದ್ದಿದ್ದರೆ ಕೌದಿಯೊಳಗೆ ಸದಾ
ತಾಪದಿಂದ ಕಾತರಿಸುತ್ತಿದ್ದ ನಿಮಗೆ ಬಹಳಷ್ಟು ಕಥೆಕಟ್ಟಿ
ಹೇಳ ಬಹುದಿತ್ತು. ಮತ್ತು ಬಹಳಷ್ಟು ಕೇಳಬಹುದಿತ್ತು
ಈ ಎಲ್ಲ ಬಿಕ್ಕಟ್ಟು ಯಾಕೆ ಬೇಕಿತ್ತು!

● ಅಬ್ದುಲ್ ರಶೀದ್

ಕೃಪೆ: www.kendasampige.com

ನಾಗತಿಹಳ್ಳಿ ರಂಗ ಪ್ರವೇಶ ವೈಖರಿ...!


ಕವಿ ರಮೇಶು

ನಾಗತಿಹಳ್ಳಿ ರಮೇಶ್ ಮತ್ತೆ ಪ್ರತ್ಯಕ್ಷರಾಗಿದ್ದಾರೆ.

ಅವರ ಹೊಸ ಮತ್ತು ಮೊಟ್ಟಮೊದಲ ಕವನ ಸಂಕಲನ 'ಸಮುದ್ರ ಮತ್ತು ಮಳೆ' ಹಾಗೂ 'ಅವ್ವ' ಎಂಬ ಸೀಡಿ ಕಡಲೇಪುರಿಯಂತೆ ಕರ್ನಾಟಕದಾದ್ಯಂತ ಉಚಿತವಾಗಿ ಬಿಕರಿಯಾಗುತ್ತಿವೆ.

ಈ ರಮೇಶು ಎಂಬ ತಾಯಿ ಪ್ರೀತಿಯ ಕವಿ ಸುರಕ್ಷಿತವಾಗಿ ಮತ್ತೆ ಪ್ರತ್ಯಕ್ಷರಾದರೆಂಬ ವಿಚಾರ ಇಲ್ಲಿ ಯಾಕೆ ಮುಖ್ಯವಾಯಿತೆಂದರೆ ಆತ ಗೋಕರ್ಣ-ಕಾರವಾರ ಮುಂತಾದ ಸಮುದ್ರಗಳಿಗೆ ಧುಮುಕಿ ಆತ್ಮಹತ್ಯೆ ಮಾಡಿಕೊಳ್ಳಲಿದ್ದಾನೆಂಬ ಪುಕಾರುಗಳಿದ್ದವು. ಕೊನೆಗೆ ಈ ಸಮುದ್ರದ ಆಳ ಸಾಲದೆಂದು ಗೋವಾ ಕಡೆ, ಹಿಂದೂ ಮಹಾಸಾಗರ ಆಳವಾಗಿದ್ದು ಮುಳುಗಲು ತಕ್ಕ ಸ್ಥಳವೆಂದು ಯೋಚಿಸಿ ಅಲ್ಲಿಗೆ ಧಾವಿಸಿದ್ದಾರೆಂದು ಅನೇಕ ಸಾಹಿತ್ಯಾಸಕ್ತರು ಮಾತಾಡಿಕೊಳ್ಳುತ್ತಿದ್ದರು. ಆದರೆ ಅಂತ ಅನಾಹುತವೇನೂ ಸಂಭವಿಸದೆ ಗೋವಾದಲ್ಲೂ ಮುಳುಗದ ನಾಗತಿಹಳ್ಳಿ ರಮೇಶ್ ಊಟಿಯಲ್ಲಿ ತೇಲಿದ್ದಾರೆ. ಅಲ್ಲಿ **Sri culture** ಎಂಬ ವಿನೂತನ ಸರ್ಕಾರಿ ಇಲಾಖೆಯ ಆಶ್ರಯದಲ್ಲಿ ಅವರ ಕವನ ಸಂಕಲನ ಹಾಗೂ ಸೀಡಿ ಬಿಡುಗಡೆಯಾಗಿ ಈಗ ಕರ್ನಾಟಕದತ್ತ ಹೊರಟುಬಂದಿವೆ.

ಇವೆಲ್ಲಾ ಸಂಭವಿಸುವ ಮುನ್ನ ಚಿತ್ರದುರ್ಗ ಸಾಹಿತ್ಯ ಸಮ್ಮೇಳನದಲ್ಲಿ ಏನಾಯಿತೆಂಬುದನ್ನು ಒಂದೆರಡು ಮಾತುಗಳಲ್ಲಿ ಹೇಳಬೇಕು. ಅಲ್ಲಿಗೆ ರಮೇಶ್ ಆಗಮನವಾಗುತ್ತಿದೆ ಎಂಬ ಸುದ್ದಿ ಹರಡಿ ಅಲ್ಲಿದ್ದ ಮಂಡ್ಯ ಜಿಲ್ಲೆಯ ಅನೇಕ ಸಾಹಿತಿಗಳು-ಸಾಹಿತ್ಯಾಸಕ್ತರು ಕೂಡಲೇ ಸ್ಥಳಬಿಟ್ಟು ತಪ್ಪಿಸಿಕೊಂಡು ಹೊರಟರು. ಅದೇ ತಾನೆ ಪೊಲೀಸರ ಎನ್‌ಕೌಂಟರ್‌ನಿಂದ ಪಾರಾಗಿ ಬಂದ ನಕ್ಸಲರಂತೆ ಕಾಣುತ್ತಿದ್ದ ಅಂತ ಅನೇಕರನ್ನು ಕಾರಣ ಕೇಳಲಾಗಿ ಈ ರಮೇಶ್ ತಮ್ಮ ಮೇಲೆ ದಾಳಿ ನಡೆಸುವ ಸಂಭವವಿದ್ದುದರಿಂದ ಈ ರೀತಿ ತಪ್ಪಿಸಿಕೊಂಡೆವೆಂದು ಮಾಹಿತಿ ನೀಡಿದ್ದರು.

ಏನಿದೆಲ್ಲಾ ವಿಚಿತ್ರ ಎಂದು ನಿಮಗನ್ನಿಸಬಹುದು. ಆದರೆ ಇವೆಲ್ಲವೂ ದಿಟ. ರಮೇಶ್‌ರನ್ನು ಗೇಲಿ ಮಾಡಲು ನಾವ್ಯಾರೂ ನಿಲ್ಲಬೇಕಿಲ್ಲ. ಈತ ಭಯಾನಕ ಭ್ರಮೆಗಳಿರುವ, ಸಾಮಾನ್ಯರು ತಡೆದುಕೊಳ್ಳಲಾರದಷ್ಟು ಭಾವ ತೀವ್ರತೆಯ ವ್ಯಕ್ತಿ. ಈತನ ಆಸಕ್ತಿಗಳು ಪತ್ರಿಕೋದ್ಯಮದಿಂದ ಶುರುವಾಗಿ ಈಗ ಸಾಹಿತ್ಯ, ಸಿನಿಮಾ, ಪರಿಸರದಲ್ಲಿ ಚೆದುರಿಹೋಗಿವೆ. ಬರೆದಿರುವುದು ಕಡಿಮೆಯೇ. ಆದರೂ ತನ್ನನ್ಯಾರೋ ತುಳಿಯುತ್ತಿದ್ದಾರೆ, ಬೆಳವಣಿಗೆಗೆ ಅಡ್ಡಗಾಲಾಕಿದ್ದಾರೆ ಎಂದೆಲ್ಲಾ ಕಲ್ಪಿಸಿಕೊಳ್ಳುತ್ತಿರುತ್ತಾರೆ. ಒಂದೋ ಉಸಿರುಗಟ್ಟುವಂತೆ ಅಪ್ಪಿಕೊಳ್ಳುವುದು ಇಲ್ಲಾ ಇರಿಯುವಂತೆ ನುಗ್ಗುವುದು ಈತನ ಸದ್ಯದ ಮನಸ್ಥಿತಿ. ಇಂತಹ **extreme** ಗಳು ಯಾಕೆ ಬೇಕು, ಇದರಿಂದೇನು ಪ್ರಯೋಜನ ಎಂದು ಬಹಳ ಜನರಿಗೆ ಅನ್ನಿಸಿದೆ. ಆದರೆ ರಮೇಶ್‌ಗೆ ಹಾಗನ್ನಿಸಬೇಕಲ್ಲ?

ಕನ್ನಡ ಸಾಹಿತ್ಯ ಜಗತ್ತು ಈಗೊಂಥರಾ ಬೇಂತರಲೋಕದಂತಿದೆ. ನೂರಾರು ಜನ ಹೊಸಬರು ಬರೆಯುತ್ತಿದ್ದಾರೆ, ಸಾವಿರಾರು ಪುಸ್ತಕಗಳೂ ಪ್ರಿಂಟಾಗುತ್ತಿವೆ. ಈ ಗದ್ದಲದಲ್ಲಿ ಯಾರು ಏನು ಹೇಳುತ್ತಿದ್ದಾರೆ, ಅದರಲ್ಲಿ ಮೌಲಿಕವಾದದೆಷ್ಟು, ಸೃಜನಶೀಲತೆ ಎಷ್ಟಿದೆ, ಬರೆಯುತ್ತಿರುವ ಪ್ರತಿಯೊಬ್ಬರ ಅನುಭವ-ಗ್ರಹಿಕೆ ಹಾಗೂ ಅಭಿವ್ಯಕ್ತಿಯ ದ್ರವ್ಯ ಏನೆಂಬುದನ್ನು ಪರಿಶೀಲಿಸಿ ನೋಡುವಷ್ಟು ಸಹನೆ ಅನೇಕರಲ್ಲಿ ಇಲ್ಲ. ಅಷ್ಟು ವ್ಯವಧಾನ ಸಿಗುವುದೂ ಕಷ್ಟಬಿಡಿ.

ಹಾಗೆಂದ ಮಾತ್ರಕ್ಕೆ ತನ್ನನ್ಯಾರೋ ತುಳಿಯುತ್ತಿದ್ದಾರೆಂದು ಕಲ್ಪಿಸಿಕೊಂಡು ಎದುರಿಗೆ ಸಿಕ್ಕವರನ್ನೆಲ್ಲಾ ತುಳಿದುಕೊಂಡು ಓಡಾಡಿದರೆ ಹೇಗೆ?

ರಮೇಶ್ ಮತ್ತು ಅವರಂತೆಯೇ ವರ್ತಿಸುವ ಅವರ ಗೆಳೆಯರು ಇದನ್ನು ಯೋಚಿಸಲಿ. ಬಹಳ ಭಾವತೀವ್ರತೆಯಿರುವವರು ಜೊತೆಗೊಂದಿಷ್ಟು ಸಂಯಮ ರೂಢಿಸಿಕೊಳ್ಳದಿದ್ದರೆ ಹಾಸ್ಯಾಸ್ಪದ ಅನಿಸಿಕೊಳ್ಳುವುದು ಖಚಿತ.

ಇಲ್ಲಿ ನಾಗತಿಹಳ್ಳಿ ರಮೇಶ್‌ರ 'ಸಮುದ್ರ ಮತ್ತು



ಬಿಡಿ ಚಿತ್ರಗಳು

▸ ಪಾರ್ವತೀಶ

ಮಳೆ' ಕವನ ಸಂಕಲನದ ಬಗ್ಗೆ ಒಂದೆರಡು ವಿಚಾರ ಹೇಳಬೇಕು. ಈತನ ತಾಯಿ ಕೆಂಪಕ್ಕ ಇದರ ಕೇಂದ್ರಬಿಂದು. ಹಲವಾರು ಭಾವನಾತ್ಮಕ ಕಾರಣಗಳಿಗೆ ರಮೇಶ್ ತನ್ನ ತಾಯಿಯನ್ನು ಬಹಳ ಹಚ್ಚಿಕೊಂಡಿದ್ದಾರೆ. ಆದರೆ ಎಲ್ಲರೂ ಇದೇ ರೀತಿ 'ಅವ್ವ'ಗಳನ್ನು ತೇದು ಹಣೆಗೆ ಶ್ರೀಗಂಧದಂತೆ ಹಣೆಗೆ ಹಚ್ಚಿಕೊಳ್ಳಲಿ ಎಂದು ಹೊರಡುವುದು ಅಷ್ಟು ಸರಿಯಲ್ಲ. ಆದಿರಲಿ, ನಾಗಮಂಗಲ ಸೀಮೆಯ ರಮೇಶ್ ಪದ್ಯಗಳಲ್ಲಿನ ಅನೇಕ ಸಾಲುಗಳು ತಾಜಾ ಆಗಿವೆ.

ನನ್ನಜ್ಜಿ ಪದ್ಯದಲ್ಲಿನ
...... ತೂತು ಕಾಸು
ಒಂದು, ಎರಡು, ಮೂರು ಪೈಸೆಗಳ
ಹೆಚ್ಚೆಂದರೆ ನಾಲ್ಕಾಣೆ ಎಂಟಾಣೆ ಕಾಲದೊಳಗೆ
ಬಾಳುತ್ತಿದ್ದಳು.
ರೂಪಾಯಿ ಕಾಣುವ ಮುನ್ನ ನನ್ನಜ್ಜ ಸತ್ತಿದ್ದ.

ಓ ನನ್ನ ತಾಯೇ....
ಕಚ್ಚೆಯ ಕಟ್ಟ
ನೆಲಗೇಯ್ದ ನಿನ್ನ ಕೈಗಳ
ಬಣ್ಣವಾವುದು ಹೇಳೆ?


ರಾಗಿ, ಭತ್ತ
ಹುಟ್ಟುತ್ತ
ಬೆಳೆಯುತ್ತಾ ಆಗಸವನ್ನೇ
ದಿಟ್ಟಿಸುತ್ತವೆ
ಫಲದ ಹೊನ್ನ ಕಿರೀಟ
ಮೈದುಂಬಿಕೊಂಡಾಗ
ನೆಲದತ್ತ ತಲೆ ಬಾಗುತ್ತವೆ

-ಹೀಗೆ ಅನೇಕ ಖುಷಿಯ ಸಾಲುಗಳನ್ನು ನಾಗತಿಹಳ್ಳಿ ಬರೆಯುತ್ತಾರೆ. ಈತನಲ್ಲಿ ಏನೋ ವಿಶೇಷವಂತೂ ಇದೆ. ಆದರೂ ಹೇಳಲೇಬೇಕಾದ ಅನೇಕ ಸಶೇಷಗಳೂ ಇವೆ.

ಈ ಕವನ ಸಂಕಲನವನ್ನು ಒಮ್ಮೆ ತಿರುವಿ ಹಾಕಿದರೆ ಗಾಭರಿಯಾಗುವಂತಿದೆ. ನೂರಾ ಮೂವತ್ತು ಪುಟಗಳ ಈ ಪುಸ್ತಕದಲ್ಲಿ ಸುಮಾರು ನಲವತ್ತಾರು ಪುಟಗಳನ್ನು ಪರಿವಿಡಿ, ಮುನ್ನುಡಿ, ಹಿನ್ನುಡಿ, ಬೆನ್ನುಡಿಗಳಿಗೆ ಖರ್ಚು ಮಾಡಲಾಗಿದೆ. ಬರೆದಿರುವ ಪದ್ಯಗಳು ಕೇವಲ ನಲವತ್ತೊಂಭತ್ತೇ ಆದರೂ ಕವಿಯ ಅಂಗರಕ್ಷಕರಂತೆ ಅನೇಕ ಖ್ಯಾತ ಬರಹಗಾರರು ಬೆಂಗಾವಲಾಗಿ ನಿಂತು ರಂಗಪ್ರವೇಶ ಮಾಡಿಸುವಂತೆ ಭಾಸವಾಗುತ್ತದೆ. ಮೊಗಳ್ಳಿ ಗಣೇಶ್, ಸಿದ್ಧನಗೌಡ ಪಾಟೀಲ, ವಿಜಯಲಕ್ಷ್ಮಿ ಪ್ರಹ್ಲಾದ್ **forefront** ನಲ್ಲಿ (ಮುನ್ನುಡಿ)ದ್ದರೆ, ಫೀನಿಕ್ಸ್ ರವಿ, ತುಮಕೂರು ನರಸಿಂಹಯ್ಯ **rearline** (ಹಿನ್ನುಡಿ)ನಲ್ಲಿ ರಕ್ಷಣೆ ನೀಡಿದ್ದಾರೆ. ಈ ಕವಿಯ ಪ್ರಥಮ ದಂಡಯಾತ್ರೆಯ ಬೆನ್‌ಗಾವಲಾಗಿ ಲಿಂಗದೇವರು ಹಳೇಮನೆ, ದೇವನೂರು ಮಹಾದೇವ, ಚೆನ್ನಣ್ಣ ವಾಲೀಕಾರ, ನಾಗತಿಹಳ್ಳಿ ಚಂದ್ರಶೇಖರ ನಿಂತಿದ್ದಾರೆ. ನೂತನ ಕವಿ ರಮೇಶ್ ಸಾಹಿತಿಯೊಬ್ಬರಿಗಿರಬೇಕಾದ ಸೂಕ್ಷ್ಮತೆಗಳನ್ನೆಲ್ಲಾ ನಿರ್ಲಕ್ಷಿಸಿ ಸರಿಸುಮಾರು ಇನ್ನೂರು ಜನರ ಹೆಸರನ್ನು ಪತ್ತೆಹಚ್ಚಿ ಕೃತಜ್ಞತೆ ಕಾಣಿಸಿದ್ದಾರೆ. ಇನ್ನುಳಿದ ಸಾಹಿತ್ಯಾಸಕ್ತರ ಹೆಸರುಗಳು ಬಿಟ್ಟು ಹೋಗಲು ಇರಬಹುದಾದ ಒಂದೇ ಕಾರಣವೆಂದರೆ ಬಹುಶಃ ಕವಿಗೆ ಅಂತವರ ಬಗ್ಗೆ ಮಾಹಿತಿ ಇರದಿರುವುದೇ ಆಗಿರಬಹುದು. ಯಾರೇ ಬರಹಗಾರ 'ಅಕ್ಕೀ.....' ಅಂದೇಟಿಗೆ ಅದನ್ನೂ ಅರ್ಜೆಂಟಾಗಿ ಇಂಗ್ಲಿಷಿಗೆ ಅನುವಾದಿಸಿಬಿಡುವ ಪರಾವಲಂಬಿ ಯುವ ಕವಿ ಅಂಕುರ್ ಬೆಟಗೇರಿಗೂ ಕೃತಜ್ಞತೆ ಸಂದಾಯವಾಗಿದೆ. ಕೆಲ ಯುವ ಕಲಾವಿದರು ಬರೆದಿರುವ ಚಿತ್ರಗಳು 'ಸಮುದ್ರ ಮತ್ತು ಮಳೆ'ಯ ಅಂದ ಹೆಚ್ಚಿಸಿವೆ.

ತನ್ನ ಭಾವನೆಗಳನ್ನು ಸ್ವಲ್ಪ ಕಂಟ್ರೋಲಿನಲ್ಲಿಟ್ಟುಕೊಂಡು ತನ್ನ ತ್ರಾಣ ಸಾಮರ್ಥ್ಯವನ್ನೆಲ್ಲಾ ಒಂದು ಕ್ಷೇತ್ರದಲ್ಲಿ ತೊಡಗಿಸಿಕೊಂಡರೆ ಕೆಲ ವರ್ಷಗಳಲ್ಲಿ ರಮೇಶ್ ಏನಾದರೂ ಸಾಧಿಸಲು ಸಾಧ್ಯ. ಅದು ಬಿಟ್ಟು ತನ್ನ ಬಗ್ಗೆಯೇ ವಾಸ್ತವ ಮೀರಿದ ಕಲ್ಪನೆ ಮಾಡಿಕೊಂಡರೆ ಸಮಸ್ಯೆಗಳು ಶುರುವಾಗುತ್ತವೆ.

ತನ್ನ ತಾಯಿ, ಹಳ್ಳಿಯ ಜನ, ಪ್ರಕೃತಿ...ಹೀಗೆ ಮಾತನಾಡುವಾಗ ಕಣ್ಣಲ್ಲೇ ರಕ್ತ ಜಿನುಗುವಂತೆ ಬಣ್ಣಿಸಬಲ್ಲ ರಮೇಶ್ ಯಾವುದೋ ಇನ್ನೊಂದು ಗಳಿಗೆಯಲ್ಲಿ ಸಹಜ ಮಾನವನಂತಿರುತ್ತಾರೆ ಅಂತ ವಿಷಮಗಳಿಗೆಯಲ್ಲೇ ಕಡುಭ್ರಷ್ಟ ರಾಜಕಾರಣಿ ಕಾಂಗ್ರೆಸ್‌ನ ಎಸ್.ಎಂ. ಕೃಷ್ಣನ ತಂದೆಯ ಬಗ್ಗೆ 'ಮಾನವತಾವಾದಿ ಮಲ್ಲಯ್ಯ'ನೆಂತಲೂ, ಇನ್ನೋರ್ವ ಸೋಂಭೇರಿ ದಲಿತ ನಾಯಕ ಕೆ.ಎಚ್. ರಂಗನಾಥರ ಬಗ್ಗೆ 'ಬುದ್ಧಪ್ರಜ್ಞೆ'ಯೆಂಬ ಕಲಾಕೃತಿಗಳನ್ನು ಈತ ಕಂಡುಹಿಡಿದಿದ್ದಾರೆ. ಮೊನ್ನೆ ಊಟಿಯಲ್ಲಿ ಅದೆಷ್ಟು ಅರ್ಜೆಂಟಾಗಿ ಈ ಕವನ ಸಂಕಲನ ಮತ್ತು ಸೀಡಿ ಬಿಡುಗಡೆಯಾಗಿದೆ ಅಂದರೆ **sericulture department** (ರೇಷ್ಮೆ ಇಲಾಖೆ) ಎನ್ನುವ ಬದಲು ವೇದಿಕೆಯ ಹಿಂಭಾಗದ ಬ್ಯಾನರಿನಲ್ಲಿ **Sri culture** ಎಂದು ಬರೆಯಲಾಗಿತ್ತು. ಯಾವನಿಗೆ ಗೊತ್ತು ಇದೊಂತರಾ ಹೊಸ ಕಲ್ಚರ್ರೇ ಇರಬಹುದು ಬಿಡಿ.



ಅದಕ್ಕೆ ಇನ್ನೊಂದು ಉದಾಹರಣೆ ಇದೇ ಪುಸ್ತಕದಲ್ಲಿದೆ, ಮತ್ತು ಅದು ಹೀಗಿದೆ:

* ನಾಗತಿಹಳ್ಳಿ ರಮೇಶ್ ಹುಟ್ಟಿದ್ದು ಶಾಲಾ ದಾಖಲಾತಿಯ ಪ್ರಕಾರ (ಕೈ ತಲೆ ಮೇಲಿಂದ ಕಿವಿ ಚುಚ್ಚಿಸಿಕೊಂಡಾಗ) ಜೂನ್ ಒಂದರಂದು.

ಜನಮಾನಸದ ಪ್ರಕಾರ ಆಗಸ್ಟ್ 15, 1967 ರಂದು.

–ಇದರರ್ಥ ಏನೆಂದು ಪಂಡಿತರ್‍ಯಾರಾದರು ಹೇಳಬೇಕು.

ಇದೇ ಆಗಸ್ಟ್ 15 ರಂದು ಹುಟ್ಟಿರುವ ಇಂಡಿಯಾ ದೇಶದ ಬಗ್ಗೆಯೇ ಜನ ಈಗ ಕೇರ್ ಮಾಡುತ್ತಿಲ್ಲ, ಇನ್ನು... ಹೋಗಲಿ ಬಿಡಿ ■

ಕನ್ನಡದ ಯುವ ಓದುಗರನ್ನು ಸದಾ ಯೋಚಿಸಿ ಕ್ರಿಯಾಶೀಲರನ್ನಾಗಿ ಮಾಡಿ ಲಂಕೇಶ್‌ರ ದಾರಿಯಲ್ಲಿ ಸಾಗುತ್ತಿರುವ ಪತ್ರಿಕೆ ಹೀಗೆ ಮುನ್ನಡೆಯಲಿ.


-ನಂದೀಶ್ ಅಣಜವಾದಿ

'ರಾಮ' ಇರುವವರೆಗೂ, 'ಲಂಕೇಶ್' ಇರುತ್ತಾನೆ. ಗೌರಿ ಕೂಡಾ. ಜೈ ಹೋ!

-ಕೊದಗು ರಂಗಪ್ಪ

ಲಂಕೇಶ್‌ರವರ ನಂತರ ಸದಾ ವೈಚಾರಿಕ ಲೇಖನಗಳನ್ನು ಪ್ರಕಟಿಸಿ ಕನ್ನಡದ ಜಾಣ-ಜಾಣೆಯರನ್ನು ವೈಚಾರಿಕವಾಗಿ ಚಿಂತನಾಶೀಲರನ್ನಾಗಿ ಮಾಡಿ ಯುವ ಬರಹಗಾರರಿಗೆ ಆದ್ಯತೆ ನೀಡಿರುವ 'ಲಂಕೇಶ್' ಇನ್ನು ಮುಂದೆಯೂ ಹೀಗೆ ಮುನ್ನಡೆಯಲಿ ಎಂದು ಆಶಿಸುವ

-ಬಿಳಿದಾಳೆ ವಿಜಯಕುಮಾರ್




ಮಾರ್ಚ್ 8ರ ಭಾನುವಾರ ನಡೆದ ದಿ. ಲಂಕೇಶರ 74ನೇ ಹುಟ್ಟುಹಬ್ಬದ ಸಮಾರಂಭವು ಒಂದು 20-20 ಮ್ಯಾಚ್ ತರಹ ಶಾರ್ಟ್ ಅಂಡ್ ಸ್ವೀಟ್ ಆಗಿತ್ತು, ಭಾಷಣ ಎಂದರೆ ಗಂಟೆ ಅಥವಾ ಎರಡು ಗಂಟೆ ಕೊರೆಸಿಕೊಳ್ಳುವ ಪದ್ಧತಿಯನ್ನು ಮೊಟಕುಗೊಳಿಸಿ 10 ನಿಮಿಷದ ಅವಧಿಗೆ ಮಾರ್ಪಡಿಸಿರುವುದು ಒಂದು ಅದ್ಭುತವಾದ ಮಾರ್ಪಾಡು. ನಂತರದ ಕಾರ್ಯಕ್ರಮದಲ್ಲಿ ಚೊಚ್ಚಲ ನಿರ್ದೇಶಕರಿಗೆ ನೀಡುತ್ತಿರುವ ಪುರಸ್ಕಾರ ಉತ್ತೇಜನಕಾರಿಯಾದದ್ದು. ಗೌರಿ ಲಂಕೇಶರ ಚುಟುಕು ಭಾಷಣ ಪರಿಪೂರ್ಣ, ವಿಷಯವನ್ನು ಎರಡು ವಾಕ್ಯದಲ್ಲಿ ಮುಗಿಸಿದ್ದು ಪ್ರಶಂಸನೀಯ, ಚಂಪಾರ ಭಾಷಣದ ಬಗ್ಗೆ ಹೇಳಲು ಬೇರೆ ಮಾತೇ ಇಲ್ಲ...

ಒಟ್ಟಾರೆ ಹೇಳಬೇಕೆಂದರೆ ಈ ಸಮಾರಂಭ ಒಂದು 20-20 ಮ್ಯಾಚ್ ತರಹ ಥ್ರಿಲ್ಲಿಂಗ್ ಆಗಿತ್ತು,

-ತ.ವೆಂ.ರವಿ

ಭರಣ ಇನ್ ಡಿಸಾರ್ಡರ್



ಸಿನಿಮಾ ಅಕಾಡೆ[...] ಅಧ್ಯಕ್ಷರಾಗಿ ಆಯ್ಕೆಯಾ[...] ರುವ ನಾಗಾಭರ[...] ನಿರ್ದೇಶಿಸಿದ 'ನಮ್ಮ[...] ಮಾನು' ಚಿತ್ರ ಬಾಕ[...] ಫೀಸ್‌ನಲ್ಲಿ ಅಮೋಘವಾ[...] ನೆಲಕಚ್ಚಿದೆ. ಈ ರೀತಿಯ[...] ಸಿನಿಮಾ ಅಕಾಡೆಮಿ ಅಧ್ಯಕ್ಷರನ್ನು ರಾಜ್ಯದ ಪ್ರೇಕ್ಷಕರು ಸ್ವಾಗತಿಸಿದ್ದಾರೆ. ಒಂದ[...] ರೀತಿಯಲ್ಲಿ ಪ್ರೇಕ್ಷಕ ನೀಡಿದ ತೀರ್ಪಿನ ಬ[...] ನಾಗಾಭರಣ ಆತ್ಮಾವಲೋಕನ ಮಾಡಿಕೊ[...] ಬೇಕಾಗಿದೆ.

ವಿಷ್ಣುವರ್ಧನ್‌ರಂತಹ ಜನಪ್ರಿಯ ನಾಯ[...] ನಟನಿದ್ದು ಈ ಚಿತ್ರ ಮುಗ್ಗರಿಸಲು ಮುಖ್ಯ ಕಾರ[...] ನಾಗಾಭರಣ ಆಯ್ಕೆ ಮಾಡಿದ ಕಥೆ.

Disassociated Identity Disorde[...] ಎಂಬ ಹೆಸರಿನ ರೋಗದಿಂದ ನಾಯ[...] ಬಳಲುವುದರಿಂದ ಆಗುವ ಅವಾಂತರವೇ ಈ ಚಿತ್ರ[...] ಕಥಾವಸ್ತು. ಆದರೆ ಇಡೀ ಭಾರತದಲ್ಲೇ ಈ ರೋಗ[...] ಬಲಿಯಾದ ಒಂದೇ ಒಂದು ಉದಾಹರಣೆ ಕೂಡ[...] ಇಲ್ಲವೆನ್ನುತ್ತಾರೆ ವೈದ್ಯವೃಂದ. ಇಂತಹ ಅತಾರ್ಕಿ[...] ಓಬೀರಾಯನ ಕಾಲದ ಕಥೆಯನ್ನು ಈ ತಾಂತ್ರಿ[...] ಜಮಾನದಲ್ಲಿ ನೀಡಿದರೆ ಯಾರೂ ತಾನೇ ನಂಬುತ್ತಾರೆ[...]

ಇಂತಹ ಅಭಿರುಚಿಯ ಮನುಷ್ಯ ಸಿನಿಮ[...] ಅಕಾಡೆಮಿಯ ಅಧ್ಯಕ್ಷನಾಗುತ್ತಿರುವುದು ಭಯ[...] ಹುಟ್ಟಿಸುತ್ತದೆ. ಈ ಹಿಂದೆ ಹಲವಾರು ಒಳ್ಳೆಯ[...] ಚಿತ್ರಗಳನ್ನು ಭರಣ ನೀಡಿದ್ದಾರೆ. ಅದರಲ್ಲೂ ಅವ[...] 'ಜನುಮದ ಜೋಡಿ'ಯಂತಹ ಸದಭಿರುಚಿಯ[...] ಚಿತ್ರವನ್ನು ಮರೆಯಲು ಸಾಧ್ಯವೇ ಇಲ್ಲ. ಅಂತಹ[...] ಚಿತ್ರಗಳ ಕಲ್ಪನೆಯನ್ನು ಅಕಾಡೆಮಿ ಮುಖಾಂತ[...] ಬಿಂಬಿಸುವಂತಾಗಲಿ ಎಂಬುದಷ್ಟೇ ನಮ್ಮ ಆಶಯ[...]

ಬಣಗುಟ್ಟಿದ ಸಂತೋಷಕೂಟ



ಮೊನ್ನೆ ಮೊನ್ನೆ ತನಕ ರವಿಚಂದ್ರನ್ ಎಂದರೆ ಇಡೀ ಉದ್ಯಮವೇ ಅವರ ಮುಂದೆ ಬಂದು ಮಂಡಿ ಯೂರಿ ಕೂರುತ್ತಿತ್ತು. ಆದರೆ ಅಮೃತ ಮಹೋತ್ಸವದ ನಂತರ ರವಿಚಂದ್ರನ್ ನೀಡಿದ ಸಂತೋಷ ಕೂಟಕ್ಕೆ ಶಿವರಾಜ್-ಪುನೀತ್-ರಾಘವೇಂದ್ರ ಹೊರತುಪಡಿ[...] ಬಹುತೇಕ ಎಲ್ಲಾ ನಾಯಕ ನಟರು ಗೈರುಹಾ[...] ರಾಗಿದ್ದರು. ಆದರೆ ನೂರಕ್ಕೆ ನೂರು ನಾಯಕಿಯರೇ[...] ಸಂತೋಷಕೂಟಕ್ಕೆ ಹಾಜರಾಗಿ ತಮ್ಮ ಬೆಂಬಲವನ್[...] ಪ್ರದರ್ಶಿಸಿದರು.

ಅಂದು ಮಾರ್ಚ್ 8 ಮಹಿಳಾ ದಿನಾಚರಣ[...] ಕೂಡಾ ಆಗಿದ್ದರಿಂದ ರವಿಚಂದ್ರನ್ ಈ ನಾಯಕಿಯ[...] ರಿಗಾಗಿ ಭಾರೀ ಗಾತ್ರದ ಕೇಕ್ ಅನ್ನು ಸಹ ತರಿಸಿ[...] ಮಹಿಳಾ ದಿನಾಚರಣೆಯನ್ನು ವಿಜೃಂಭಣೆಯಿಂ[...] ಆಚರಿಸಿದರು. ಎಷ್ಟಾದರೂ ರವಿಚಂದ್ರನ್ ಅಭಿಮಾ[...] ಗಳಲ್ಲಿ ಹುಡುಗಿಯರೇ ಹೆಚ್ಚು ತಾನೇ? ಆದರ[...] ಇಂತಹ ಥ್ಯಾಂಕ್ಸ್ ಗಿವಿಂಗ್ ಪಾರ್ಟಿಗೆ ನಮ[...] ನಾಯಕ ನಟರ ದಂಡು ಬಾರದಿರುವುದು ಅನೇ[...] ಸಂಶಯಗಳಿಗೆ ಎಡೆ ಮಾಡಿಕೊಟ್ಟಿದೆ.

'ಸ್ಮಾರ್ಟ್' ಅಭಿಲಾಷಾ

ಅನಂತ್ ನಾಗ್ ಅಭಿನಯದ 'ಒಂದು ಸಿನಿಮ[...] ಕಥೆ' ಮುಂತಾದ ಚಿತ್ರಗಳಲ್ಲಿ ಅಭಿನಯಿಸಿ[...] ಅಭಿಲಾಷಾ ಎಂಬ 'ಮಧ್ಯಯುಗ'ದ ಸಿನಿಮಾ ನ[...] ಈಗ 'ಸ್ಮಾರ್ಟ್' ಆಗಿ ಮತ್ತೆ ಬಂದಿದ್ದಾರೆ. ಆದ[...] ಸಿನಿಮಾದಲ್ಲಿ ನಟಿಸುವುದಕ್ಕೋಸ್ಕರ ಅಲ್ಲ, ಬದಲಾ[...] ನಿರ್ದೇಶಕಿಯಾಗಿ ಹೊಸ ಅವತಾರವೆತ್ತಿದ್ದಾರೆ.

ಒಂದೂವರೆ ದಶಕಗಳ ಹಿಂದೆ ಮದುವೆಯಾ[...] ಮೈಸೂರು ಸೇರಿದ್ದ ಅಭಿಲಾಷಾ ಈಗ 'ಸ್ಮಾರ್ಟ್[...]' ಎಂಬ ಸಿನಿಮಾದ ಮೂಲಕ ಡೈರೆಕ್ಷನ್‌ಗಿಳಿದ[...] ಈಕೆಯ ಗಂಡ ಕಬೀರ್ ರಾಜ್ ಈ ಚಿತ್ರದ ಮ್ಯೂಸಿಕ[...] ಡೈರೆಕ್ಟರ್ ಆಗಿದ್ದಾರೆ!

ಗುಡ್‌ಲಕ್ ಅಭಿಲಾಷಾ



...ಪುತ್ರರ ಪಾಳಯ ಉಳಿಯುತ್ತಾ?

...ಜಕೀಯದಲ್ಲಿ ಈಗ ವಂಶ ಪಾರಂಪರ್ಯದ ಬಗ್ಗೆ ಬಿಸಿಬಿಸಿ ... ನಡೆಯುತ್ತಿದೆ. ಇದು ಕೆಲವೊಮ್ಮೆ ವರವೂ ಆಗಬಹುದು ... ಶಾಪವೂ ಆಗಬಹುದು. ಅದೇ ಮಾತು ಬಣ್ಣದ ಲೋಕಕ್ಕೂ ...ಸುತ್ತದೆ.

...ರುವ ಹದಿಮೂರರಂದು ಒಟ್ಟು ಮೂರು ಸಿನಿಮಾಗಳು ...ಲಿವೆ. ಈ ಮೂರರಲ್ಲಿ ಇಬ್ಬರು ಕಲಾವಿದರ ಪುತ್ರರ ... ಪರೀಕ್ಷೆಯಾಗಲಿದೆ. ಒಂದೆಡೆ ಕಾಶಿನಾಥರ ಮಗ ಅಲೋಕ್ ...ಬಾರಿಗೆ ನಾಯಕನಟನಾಗಿ 'ಬಾಜಿ' ಚಿತ್ರದ ಮುಖಾಂತರ ... ಮುಂದೆ ಬರಲಿದ್ದಾನೆ. ಮತ್ತೊಂದೆಡೆ ಸಜ್ಜನ ಎನಿಸಿಕೊಂಡಿರುವ ...ಕ ನಟ ಕೃಷ್ಣೇಗೌಡರ ಮಗ ಮುರಳೀಧರ್ ಕೂಡಾ ...ದಿರು' ಚಿತ್ರದ ಮುಖಾಂತರ ಚಿತ್ರರಂಗಕ್ಕೆ ...ಯುವಾಗಲಿದ್ದಾರೆ. ಇವರಿಬ್ಬರಿಗೆ ಈ 'ಹದಿಮೂರು' ಅದೃಷ್ಟ ...ತ್ತದೋ ಅಥವಾ ಕೈಕೊಡುತ್ತದೋ ನೋಡಬೇಕು.

...ಲ್ಲೊಂದು ವಿಶೇಷವೆಂದರೆ, ಕಾಶೀನಾಥ್ ಅವರ ಮಗ ...ಕನಾಗುತ್ತಿರುವುದು, ಪೋಷಕ ನಟ ಕೃಷ್ಣೇಗೌಡರ ಮಗ ...ೀಧರ್ ಪೋಷಕನಟನಾಗುತ್ತಿರುವುದು. ಅಂದಹಾಗೆ ನಟ, ...ಪಕ, ನಿರ್ದೇಶಕ ಎಲ್ಲವೂ ಆಗಿರುವ ಕಾಶೀನಾಥ್ ತನ್ನ ...ನ್ನು ತಮ್ಮ ಬ್ಯಾನರ್‌ನಲ್ಲಿ ಪರಿಚಯಿಸುವ ಗೋಜಿಗೇ ...ಲಿಲ್ಲ. ಆದರೆ ಕೃಷ್ಣೇಗೌಡರು ತಮ್ಮ ಜೀವಮಾನದ ...ಯವನ್ನೆಲ್ಲಾ ಮಗನ ಭವಿಷ್ಯಕ್ಕಾಗಿ ಸುರಿದು ಮೊದಲ ... ನಿರ್ಮಾಪಕರೂ ಆಗಿದ್ದಾರೆ. ಇವರಿಬ್ಬರ ನಡುವೆ ಎಷ್ಟೊಂದು ... ಅಲ್ಲವೆ?

...ಂದಹಾಗೆ ಕಾಶೀನಾಥರ ಮಗ ಅಲೋಕ್ ಹಿಂದೆಂದೂ ... ನಟನಾಗಬೇಕೆಂದು ಕನಸು ಕಂಡವನೇ ಅಲ್ಲ, ಆತನ ...ರಿಟ ಏನಿದ್ದರೂ ಕ್ರಿಕೆಟ್‌ಗೇ ಮೀಸಲಾಗಿತ್ತು. ಯಾವಾಗ ರಣಜಿ ಅಥವಾ ಲೀಗ್ ಪಂದ್ಯಕ್ಕೂ ಆಡಲು ಅವಕಾಶ ಸಿಗುವುದಿಲ್ಲ ಎಂದು ಖಾತ್ರಿಯಾಯಿತೋ ಅಲೋಕ್ ಬ್ಯಾಟ್ ಹಿಡಿಯುವ ಬದಲು ಬಣ್ಣ ಹಚ್ಚಲು ನಿರ್ಧರಿಸಿದ್ದಾನೆ. ಅದೇ ಥರ ಮುರಳೀಧರ್ ಸಿನಿಮಾದ ಬಗ್ಗೆ ಯಾವುದೇ ಕ್ರೇಜ್ ಇಟ್ಟುಕೊಂಡಿರಲಿಲ್ಲ. ಆದರೆ ಈಗ ಆಕಸ್ಮಿಕವಾಗಿ ನಟರಾಗಿದ್ದಾರೆ.



... ಇಬ್ಬರೂ ಹೊಸಬರನ್ನು ನಾಯಕನಟರನ್ನಾಗಿ ಮಾಡುವ ...ಕ್ಕೆ ಕೈಹಾಕಿರುವ ನಿರ್ದೇಶಕರು ಕೂಡಾ ಹೊಸಬರೇ! ...ಕ್‌ನನ್ನು ನಾಯಕನಟನಾಗಿ ಮಾಡುತ್ತಿರುವವರು ಶ್ರೀನಿವಾಸ್ ...ಟ್ಟಿ. ಹಾಗೆಯೇ ಮುರಳಿಯನ್ನು ದ್ವಿತೀಯ ನಾಯಕನಾಗಿ ...ತ್ತಿರುವವರು ಜನಾರ್ದನ್ ಆರ್. ಹೀಗಾಗಿ ನಾಯಕನಟರ ...ಜೊತೆಗೆ ಈ ನಿರ್ದೇಶಕರ ಭವಿಷ್ಯವೂ ಅಡಗಿರುವುದರಿಂದ ... ಬಗ್ಗೆ ಹೆಚ್ಚು ನಿರೀಕ್ಷೆ ಇರಿಸಿದರೂ ತಪ್ಪಿಲ್ಲ.


...ವರಿಬ್ಬರ ಪಾಲಿಗೆ ಈ ಮೊದಲ ಚಿತ್ರ ಖಂಡಿತವಾಗಿಯೂ ... ಅಗ್ನಿಪರೀಕ್ಷೆ. ಯಾಕೆಂದರೆ, ಶಿವರಾಜ್‌ಕುಮಾರ್, ಪುನೀತ್ ...ಕರಾಗುವಾಗ ಹೇಗೆ ಪ್ರೇಕ್ಷಕರು ಅವರ ಪಾತ್ರವನ್ನು ...ಕುಮಾರ್‌ಗೆ ಹೋಲಿಸಿದ್ದರೋ ಅದೇ ತರ ಅಲೋಕ್ ...ನಲ್ಲಿ ಪ್ರೇಕ್ಷಕ ಕಾಶೀನಾಥರ ತರಲೆ-ತಮಾಷೆಗಳನ್ನೂ ...ಸಬಹುದು; ಹಾಗೆಯೇ ಮುರಳಿ ಪಾತ್ರದಲ್ಲಿ ಕೃಷ್ಣೇಗೌಡರ ...ಗಾಗಿ ಹುಡುಕಬಹುದು. ಇವೆಲ್ಲವೂ ಅವರ ಪಾಲಿಗೆ ...ದರೂ ಆಶ್ಚರ್ಯವಿಲ್ಲ.

...ಂದಹಾಗೆ ಮುಂದಿನ ವಾರವೂ ಮತ್ತೊಬ್ಬ ಕಲಾವಿದರ ...ತೆರೆಗೆ ಬರಲಿದ್ದಾನೆ. ಛಾಯಾಗ್ರಾಹಕ ಪದ್ಮನಾಭ್ ಅವರ ...ವೆಂಕಟೇಶ್ ಪ್ರಸಾದ್ 'ಜೋಲಿ' ಎಂಬ ಚಿತ್ರದ ನಾಯಕ. ...ಲಿಂಗ ಸುಗ್ನಹಳ್ಳಿ ಈ ಚಿತ್ರದ ನಿರ್ದೇಶಕರು. ಕನ್ನಡ ...ಂಗದ ಇತಿಹಾಸದಲ್ಲಿ ಛಾಯಾಗ್ರಾಹಕನ ಮಗನೊಬ್ಬ ...ಕನಟನಾಗುತ್ತಿರುವುದು ಇದೇ ಮೊದಲಬಾರಿಯಂತೆ.

...ನೇ ಇರಲಿ, ಕನ್ನಡ ಚಿತ್ರರಂಗದಲ್ಲಿ ಈ ತರಹ ಕಲಾವಿದರ, ...ರ ಮಕ್ಕಳು ಕೂಡಾ ನಾಯಕನಟರಾಗಿ ಮೆರೆಯುವ ಕಾಲ ...ವುದು ಸಂತೋಷಕರ. ಚಿತ್ರರಂಗದ 75ನೇ ವರ್ಷದ ... ಘಳಿಗೆಯಲ್ಲಿ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡುತ್ತಿರುವ ...ರೂ ಜನ ನಾಯಕನಟರಿಗೆ ಒಳ್ಳೆಯದಾಗಲಿ ಎಂಬುದೇ ...

● ಶ್ರೇಣೈ

ಒಂದು ಹಾಡಿಗೆ 20 ಸಿಗರೇಟು



'ಮುಂಗಾರು ಮಳೆ' ಚಿತ್ರದ ಹಾಡುಗಳು ಜನಪ್ರಿಯವಾದ ನಂತರ ಭಟ್ಟರಿಗೆ ಗೀತರಚನಾಕಾರರಾಗಿ ಬೇಡಿಕೆ ಬರಲಾರಂಭಿಸಿತ್ತು, ಮೊನ್ನೆ ತಾನೇ ಬಿಡುಗಡೆಯಾದ 'ಜಂಗ್ಲಿ' ಚಿತ್ರದ 'ಹಳೇ ಪೇಪರ್, ಹಳೇ ಕಬ್ಬಿಣ...' ಹಾಡು ಜನಪ್ರಿಯವಾದ ನಂತರ ಈಗ ಯೋಗರಾಜ್ ಭಟ್‌ರಿಗೆ ಹೊಸ ವರ್ಚಸ್ಸು ಬಂದಿದೆ. ಯಾಕೆಂದರೆ 'ಜಂಗ್ಲಿ' ಈ ಹಾಡಿನಿಂದಲೇ ಗೆದ್ದಿದ್ದು ಎನ್ನುವುದು ಗಾಂಧಿನಗರದವರ ನಂಬಿಕೆ.

ಹೀಗಾಗಿ ಈಗ ಭಟ್ಟರಿಗೆ ಹಾಡು ಬರೆದುಕೊಡಿ ಎಂದು ದುಂಬಾಲು ಬೀಳುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಮೊನ್ನೆ ಶಶಾಂಕ್ ತನ್ನ ಹೊಸ ಚಿತ್ರಕ್ಕಾಗಿ ಭಟ್ಟರ ಬಳಿ ಹಾಡು ಬರೆಸಿದರು. ಯೋಗರಾಜ್ ಭಟ್ಟರ ಹಾಡಿನ ಸ್ವೀಕೆನ್ಸ್ ಅರಿತುಕೊಳ್ಳುವಷ್ಟರಲ್ಲಿ ಸುಮಾರು ಇಪ್ಪತ್ತು ಸಿಗರೇಟುಗಳನ್ನು ಸೇದಿ ಬೂದಿ ಮಾಡಿದರು ಎಂದು ರಸವತ್ತಾಗಿ ಶಶಾಂಕ್ ತಂಡ ಹೇಳುತ್ತಿದೆ.

ಯೋಗರಾಜ್ ಭಟ್ ಹಾಡೊಂದು ಬರೆಯಲು ಇಷ್ಟೊಂದು ಸಂಖ್ಯೆಯಲ್ಲಿ ಸಿಗರೇಟ್ ಸೇದುತ್ತಿರುವುದು ನಿಜಕ್ಕೂ ಆಘಾತಕಾರಿ ಸುದ್ದಿ. ಅವರು ಹಾಡು ಮತ್ತು ನಿರ್ದೇಶನದ ಜೊತೆಗೆ ಆರೋಗ್ಯದ ಕಡೆಗೂ ನಿಗಾವಹಿಸುವುದು ಒಳ್ಳೆಯದು.


ಗೌರಿ ಕಾರ್ನಿಕ್

'ಜೈ ಹೋ' ಎಂದವರ ಕಾರಂಜಿ!

'ಕಾರಂಜಿ' ಚಿತ್ರದ ನಿರ್ಮಾಪಕ ಎನ್.ಎಂ.ಸುರೇಶ್ ಮತ್ತು ನಿರ್ದೇಶಕ ಶ್ರೀಧರ್ ಭಾರೀ ಹುಮ್ಮಸ್ಸಿನಲ್ಲಿದ್ದಾರೆ. ಇದಕ್ಕೆ ಮುಖ್ಯ ಕಾರಣ ಇವರ 'ಕಾರಂಜಿ' ಚಿತ್ರಕ್ಕೆ ಹಾಡಿದ ಸುಖಿಂದರ್ ಸಿಂಗ್ ಅವರಿಗೆ ಆಸ್ಕರ್ ಪ್ರಶಸ್ತಿ ಬಂದಿರುವುದು. 'ಸ್ಲಂ ಡಾಗ್...' ಚಿತ್ರದ 'ಜೈ ಹೋ...' ಹಾಡನ್ನು ಸುಖಿಂದರ್‌ಸಿಂಗ್ ಮತ್ತು ವಿಜಯಪ್ರಕಾಶ್ ಹಾಡಿದ್ದನ್ನು ಸ್ಮರಿಸಿಕೊಳ್ಳಬಹುದು.

ಸಂಗೀತ ನಿರ್ದೇಶಕ ವೀರ್ ಸಮರ್ಥ್ ಬಹಳ ಹಿಂದೆಯೇ 'ಕಾರಂಜಿ' ಚಿತ್ರಕ್ಕಾಗಿ ಇವರಿಬ್ಬರಿಂದ ತಲಾ ಒಂದೊಂದು ಹಾಡು ಹಾಡಿಸಿದ್ದರು. ಅದರ ಜೊತೆಗೆ 'ಸೈಕೋ' ಖ್ಯಾತಿಯ ರಘು ದೀಕ್ಷಿತ್ ಕೂಡಾ ಒಂದು ಹಾಡು ಹಾಡಿದ್ದಾರೆ. ಒಟ್ಟಾರೆಯಾಗಿ 'ಕಾರಂಜಿ'ಯ ಹಾಡುಗಳು ಕೇಳುಗರಿಗೆ ಹಬ್ಬದೂಟದ ಸವಿ ಹಂಚುತ್ತಿದೆ. ಇದರ ದೃಶ್ಯೀಕರಣ ಚೆನ್ನಾಗಿ ಮೂಡಿಬಂದಲ್ಲಿ ಚಿತ್ರ ಗೆಲ್ಲುವುದು ಗ್ಯಾರಂಟಿ.

ತಂದೆಯವರ ಬಗ್ಗೆ ಪುಸ್ತಕ ತರುವುದು ಬೇಡ!



ಖಳನಟರ ಪುತ್ರರಾದ ದಿನಕರ್, ನಾಗೇಂದ್ರ ಅರಸ್ ಮತ್ತು ತರುಣ್ ಸುದೀರ್ ಮೊನ್ನೆ ಫಿಲ್ಮ್ ಚೇಂಬರ್ ಅಧ್ಯಕ್ಷೆ ಜಯಮಾಲಾ ಅವರನ್ನು ಭೇಟಿಯಾಗಲು ಹೋಗಿದ್ದರು. ಜಯಮಾಲಾ ಅವರ ಅನುಪಸ್ಥಿತಿಯಲ್ಲಿ ಸಾರಾ ಗೋವಿಂದು ಇವರನ್ನು ಮಾತನಾಡಿಸುತ್ತಾ "ನಿಮ್ಮ ತಂದೆಯವರ ಪುಸ್ತಕ ಸದ್ಯದಲ್ಲೇ ಹೊರತರುತ್ತೇವೆ, ದಯವಿಟ್ಟು ಬೇಸರಮಾಡಿಕೊಳ್ಳಬೇಡಿ" ಎಂದು ಸಮಾಧಾನಪಡಿಸಿದರಂತೆ. ಆದರೆ ಈ ಯಂಗ್‌ಟರ್ಕ್‌ಗಳ ತಂಡ "ನಾವು ಜಯಮಾಲಾ ಅವರನ್ನು ಭೇಟಿಯಾಗಬೇಕು, ನೀವು ನಮ್ಮ ತಂದೆಯವರ ಬಗ್ಗೆ ಪುಸ್ತಕ ತರುವುದು ಬೇಡ" ಎಂದು ಗುಡುಗಿದೆ.

ಗಂಟಲು ನೋವಿನಿಂದ ಬಳಲುತ್ತಿದ್ದೇನೆ ಎಂಬ ನೆಪ ನೀಡಿದ್ದ ಜಯಮಾಲಾ ಚೇಂಬರ್ ಕಡೆಗೆ ಬಾರದಿದ್ದುದರಿಂದ ಈ ಯುವಕರ ಆಕ್ರೋಶದಿಂದ ತಪ್ಪಿಸಿಕೊಂಡಿದ್ದಾರೆ. 'ನವಗ್ರಹ' ಚಿತ್ರದಲ್ಲಿ ನಾಯಕನಟರಾಗಿ ನಟಿಸಿದ ಖಳನಟರ ಈ ಪುತ್ರರೆಲ್ಲಾ ತಮ್ಮ ತಮ್ಮ ತಂದೆಯರ ಪರ ಅಭಿಮಾನ ವ್ಯಕ್ತಪಡಿಸಲು ಈ ರೀತಿ ಹೋರಾಡಬೇಕಾಗಿ ಬಂದಿರುವುದು ಉದ್ಯಮದ ದುರಂತ.

ಸಿನಿ Bits

ನೀತೂ ಐಟಂ ಮಾಟ

ನೀತೂ ಎಂಬ ನಾಯಕಿಯ ವೃತ್ತಿಜೀವನ ಕವಲುದಾರಿಯಲ್ಲಿದೆ.


ಯೋಗರಾಜ್ ಭಟ್ ನಿರ್ದೇಶನದ 'ಮನಸಾರೆ' ಚಿತ್ರಕ್ಕೆ ಆಕೆ ಕೊನೆಗಳಿಗೆಯಲ್ಲಿ ಆಯ್ಕೆಯಾಗಿದ್ದರೂ ನೀತೂ ವಿಪರೀತ ಸಂತೋಷ ವ್ಯಕ್ತಪಡಿಸುತ್ತಿದ್ದಾಳೆ. ಆದರೆ ಈ ಚಿತ್ರದಲ್ಲಿ ಆಕೆ ಕಾಣಿಸಿಕೊಳ್ಳುತ್ತಿರುವುದು ಒಂದು ಹಾಡಿನಲ್ಲಿ ಮಾತ್ರ. ಅದರರ್ಥ ನಾಯಕಿ ನೀತೂ ಈಗ ಐಟಂಸಾಂಗ್ ಹುಡುಗಿಯಾಗಿದ್ದಾಳೆಂದಲ್ಲವೇ?

ಯೋಗರಾಜ್ ಭಟ್ ನಿರ್ದೇಶನದ 'ಗಾಳಿಪಟ' ಚಿತ್ರದಲ್ಲಿ ಆಕೆಗೊಂದು ಮುಖ್ಯ ಪಾತ್ರ ದೊರಕಿ ಆಕೆಗೆ ಗಂಡುಬೀರಿಯ ಇಮೇಜು ಬಂದಿತ್ತು, ಅಲ್ಲಿಂದಾಚೆಗೆ ಆಕೆಗೆ ಗಾಂಧಿನಗರದಲ್ಲಿ ಅದೇ ತರಹದ ಪಾತ್ರಗಳೇ ಬರಲಾರಂಭಿಸಿದ್ದವು. ಈಗ ಮತ್ತೆ ಯೋಗರಾಜ್ ಭಟ್ ಚಿತ್ರದಲ್ಲಿ ಐಟಂಸಾಂಗ್ ಮಾಡಿದ ನಂತರ ನೀತೂ ಭವಿಷ್ಯದಲ್ಲಿ ಐಟಂಸಾಂಗ್‌ಗೆ ಸೀಮಿತವಾದರೇ?

ಆದರೆ ಹಾಗಾಗುವುದಿಲ್ಲ ಎನ್ನುತ್ತಾರೆ ನೀತೂ. "ಈ ಹಾಡು ತುಂಬಾ ಚೆನ್ನಾಗಿ ಮೂಡಿಬಂದಿದೆ. ಆ ಕಾರಣಕ್ಕಾಗಿ ನಾನು ಈ ಪಾತ್ರವನ್ನು ಒಪ್ಪಿದ್ದೇನೆ. ಅಷ್ಟೇ ಅಲ್ಲ ಒಂದು ನಾಯಕಿಗೆ ಕೊಡುವಷ್ಟು ಸಂಭಾವನೆಯನ್ನು ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಈ ಸಾಂಗ್‌ಗಾಗಿ ನೀಡಿದ್ದಾರೆ" ಎಂದು ನೀತೂ ಸ್ಪಷ್ಟೀಕರಣ ನೀಡುತ್ತಾಳೆ. ಒಬ್ಬ ನಾಯಕಿಗೆ ನೀಡುವಷ್ಟು ಸಂಭಾವನೆ ಈ ನೃತ್ಯಕ್ಕಾಗಿ ನೀಡಿದ್ದಾರೆ ಎಂದರೆ ಇದರರ್ಥ ಹಾಡು ಖಂಡಿತವಾಗಿಯೂ ಮಾದಕ, ಬಿಸಿಬಿಸಿಯಾಗಿರುತ್ತದೆ ಎಂಬುದರಲ್ಲಿ ಡೌಟೇ ಇಲ್ಲ.



ಅಂದಹಾಗೆ ಮೊನ್ನೆ ಮೊನ್ನೆ ಮೋಹನ್ ನಿರ್ದೇಶನದ 'ಕೃಷ್ಣ ನೀ ಸ್ವಲ್ಪ ಲೇಟಾಗಿ ಬಾರೋ' ಚಿತ್ರದಲ್ಲೂ ತಾನು ಮಳೆಯಲ್ಲಿ ತೊಯ್ದು ತನ್ನ ದೇಹಸಿರಿಯನ್ನು ಪ್ರದರ್ಶಿಸುತ್ತಾ ನೃತ್ಯ ಮಾಡಿದ್ದನ್ನು ಹೆಮ್ಮೆಯಿಂದ ಹೇಳಿಕೊಂಡಿದ್ದಾಳೆ ನೀತೂ. 'ಪೂಜಾರಿ' ಚಿತ್ರದಿಂದ ಫುಲ್‌ಲೆಂತ್ ನಾಯಕಿಯಾದ ನೀತೂ ತನ್ನ ನೃತ್ಯದಿಂದ ಎಲ್ಲರ ಮೆಚ್ಚುಗೆಗೆ ಪಾತ್ರಳಾಗಿದ್ದಳು. ಆದರೆ ಇಷ್ಟು ಸ್ವಲ್ಪ ಸಮಯದಲ್ಲೇ ಈ ನೀತೂ ಪಾತ್ರಗಳ ಆಯ್ಕೆಯಲ್ಲಿ ಎಡವುತ್ತಾ ತನ್ನ ಭವಿಷ್ಯಕ್ಕೆ ತಾನೇ ಕಲ್ಲುಹಾಕುತ್ತಿದ್ದಾಳೆ. 'ಪೂಜಾರಿ'ಯಲ್ಲಿ ಬೆಳ್ಳಗೆ ಬಳ್ಳಿಯಂತೆ ಬಳುಕುತ್ತಿದ್ದ ಈ ದುಂಡು ಮುಖದ ಚೆಲುವೆ ಈಗ ದಪ್ಪಮುಪ್ಪವಾಗಿ ಊದಿಕೊಂಡಿದ್ದಾಳೆ. ನೀತೂ ಪಾತ್ರಗಳ ಆಯ್ಕೆ ಮತ್ತು ತನ್ನ ದೇಹ ತೂಕದ ಕಡೆಗೆ ಸ್ವಲ್ಪ ನಿಗಾ ವಹಿಸಿಕೊಳ್ಳಬೇಕು ಇಲ್ಲದಿದ್ದರೆ ಹೊಸಬರ ಪ್ರವಾಹದಲ್ಲಿ ನೀತೂ ಕೊಚ್ಚಿಹೋಗುವ ಸಾಧ್ಯತೆ ಇದೆ. ■



ಕಲ್ಪನಾ ವಿಲಾಸ- ದೆವ್ವದ ಪ್ರಯಾಸ!

ಜಗ್ಗೇಶ್ ಅಭಿನಯದ 'ಮಾರಿಕಣ್ಣು ಹೋರಿಮ್ಯಾಲೆ' ಎಂಬ ತಗಡು ಚಿತ್ರವನ್ನೂ, ಕಳೆದ ಐದು ವರ್ಷಗಳಿಂದ ಡಬ್ಬಾದಲ್ಲೇ ಕುಳಿತಿರುವ ನವೀನ್ ಮಯೂರ್ ಅಭಿನಯದ 'ಲವ್‌ಲವಿಕೆ' ಎಂಬ ಸಿನಿಮಾವನ್ನೂ ನಿರ್ದೇಶಿಸಿದ್ದ ಕುಮಾರ್ ಈ ಬಾರಿ 'ನಾಗವಲ್ಲಿ'ಯ ಬೆನ್ನು ಹತ್ತಿದ್ದಾರೆ.




'ಆಪ್ತಮಿತ್ರ'ದ ನಾಗವಲ್ಲಿ ಹೆಸರಿನಿಂದ ಸ್ಫೂರ್ತಿ ಪಡೆದಿರುವ ಕುಮಾರ್ ತಮ್ಮ ಹೊಸ ಚಿತ್ರಕ್ಕೆ 'ನಾಗವಲ್ಲಿ' ಎಂದು ಹೆಸರಿಟ್ಟಿದ್ದಾರೆ. ಆದರೆ ಫುಲ್ ಹಾರರ್ ಕಥೆಯನ್ನು ಹೊಂದಿರುವ ಈ ಚಿತ್ರದಲ್ಲಿ ಮಿನುಗುತಾರೆ ಕಲ್ಪನಾರನ್ನು ತಮಗಿಷ್ಟ ಬಂದ ಹಾಗೆ ಬಳಸಿಕೊಂಡಿದ್ದಾರೆ. ಕಲ್ಪನಾ ಸತ್ತು ಈಗಾಗಲೇ ಮೂವತ್ತು ವರ್ಷಗಳೇ ಕಳೆದಿರುವುದರಿಂದ ಆಕೆ ನಟಿಸಿದ್ದ ಬಹುತೇಕ ಚಿತ್ರಗಳ ಕ್ಲಿಪ್ಪಿಂಗ್ಸ್‌ಗಳನ್ನು ಇಲ್ಲಿ ಬಳಸಿಕೊಂಡಿದ್ದಾರೆ. ಅದೂಅಲ್ಲದೆ ಸ್ಮಶಾನದಲ್ಲಿ ಸಮಾಧಿಯ ಮೇಲೆ ಕೂತಿರುವ ಹೆಂಗಸಿನ ಮುಖಕ್ಕೆ ಕಲ್ಪನಾರ ಮುಖ ಅಂಟಿಸಿರುವ ಈತ, ಪ್ರಚೋದನಾಕಾರಿಯಾಗಿರುವ ನರ್ತಕಿಯ ದೇಹಕ್ಕೂ ಕಲ್ಪನಾರ ಮುಖವನ್ನು ಪೇಸ್ಟ್ ಮಾಡಿದ್ದಾನೆ... ಹೀಗೆ ಸಿಕ್ಕಸಿಕ್ಕಲ್ಲೆಲ್ಲಾ ಕಲ್ಪನಾರ ಭಾವಚಿತ್ರವನ್ನು ಬಳಸಿರುವ ಈ ಮಹಾನುಭಾವ ಕುಮಾರನಿಗೆ ಇದಕ್ಕೆಲ್ಲಾ ಯಾರು ಅನುಮತಿ ಕೊಟ್ಟರು ಎಂಬುದು ಮಾತ್ರ ಗೊತ್ತಿಲ್ಲ.

ಕಲ್ಪನಾರ ಬಗೆಗಿನ ಕೆಲ ಸಂಭಾಷಣೆಗಳನ್ನು ಸೆನ್ಸಾರ್ ಅಧ್ಯಕ್ಷ ಚಂದ್ರಶೇಖರ್ ಈಗಾಗಲೇ ಕತ್ತರಿಸಿ ಬಿಸಾಡಿ ಚಿತ್ರಕ್ಕೆ ಎ ಸರ್ಟಿಫಿಕೇಟ್ ನೀಡಿದ್ದಾರೆ.

ಹಾರರ್ ಚಿತ್ರವೊಂದರಲ್ಲಿ ನಟಿಯೊಬ್ಬಳನ್ನು, ಅದರಲ್ಲೂ ಜನಮಾನಸದಲ್ಲಿ ಇಂದೂ ಅಚ್ಚಳಿಯದಂತಿರುವ ಕಲ್ಪನಾರಂತಹ ನಟಿಯನ್ನು ಬಳಸಿಕೊಂಡಿರುವ ನಿರ್ದೇಶಕ ಕುಮಾರನ ಬುದ್ಧಿಗೆ ಅದ್ಯಾವ ದೆವ್ವ ಮೆಟ್ಟಿಕೊಂಡಿದೆಯೋ ಗೊತ್ತಿಲ್ಲ.

ಒಂದು ವೇಳೆ ಕಲ್ಪನಾರನ್ನೇ ದೆವ್ವದ ರೀತಿ ತೋರಿಸಿದ್ದೇ ಆದಲ್ಲಿ ಇನ್ನೆರಡು ವಾರದಲ್ಲಿ ಚಿತ್ರ ಬಿಡುಗಡೆಯಾದ ಮೇಲೆ ಪ್ರೇಕ್ಷಕರು ಈತನಿಗೆ ಹಿಡಿದಿರುವ ಹುಚ್ಚುದೆವ್ವವನ್ನು ಬಿಡಿಸುವುದರಲ್ಲಿ ಯಾವ ಸಂದೇಹವೂ ಇಲ್ಲ.

ಉಪ್ಪಿಯೊಂದಿಗೆ 'ಥ್ರಿಲ್'!



ಸಾಕಪ್ಪಾ ಸಾಕು ಸಿನಿಮಾ ಸಹವಾಸ ಎಂದು ರಿಯಲ್ ಎಸ್ಟೇಟ್ ಧಣಿಗಳೆಲ್ಲಾ ಗಾಂಧಿನಗರದಿಂದ ಕಾಲುಕೀಳುತ್ತಿರುವಾಗಲೇ ಚಿತ್ರರಂಗದ ಹಳೇ ಹುಲಿಗಳೆಲ್ಲಾ ಮೈಕೊಡವಿ ಎದ್ದು ಬರುತ್ತಿದ್ದಾರೆ!

ಹಿಂದೆ 'ಥ್ರಿಲ್ಲರ್', 'ಕಿಲ್ಲರ್'ನಂಥ ಘನಘೋರ ಚಿತ್ರಗಳನ್ನು ನಿರ್ದೇಶಿಸಿ ಸುಸ್ತು ಹೊಡೆದಿದ್ದ ಥ್ರಿಲ್ಲರ್ ಮಂಜು ಈಗ ಮತ್ತೊಮ್ಮೆ ನಿರ್ದೇಶನಕ್ಕೆ ಇಳಿಯುತ್ತಿದ್ದಾರೆ. ಹಾಗಂತ ಥ್ರಿಲ್ಲರ್ ಮಂಜು ಮತ್ತೆ ಹೀರೋ ಆಗಿಬಿಟ್ರಾ? ಎಂದು ಬೆಚ್ಚಿಬೀಳುವ ಅವಶ್ಯಕತೆಯಂತೂ ಇಲ್ಲ, ಯಾಕೆಂದರೆ ಈ ಬಾರಿ ಥ್ರಿಲ್ಲರ್ ಮಂಜು ನಿರ್ದೇಶನದ 'ರಜನಿ' ಚಿತ್ರಕ್ಕೆ ರಿಯಲ್ ಸ್ಟಾರ್ ಉಪೇಂದ್ರ ನಾಯಕರಾಗಿದ್ದಾರೆ.



ತೆಲುಗಿನಲ್ಲಿ ಬಂದಿದ್ದ 'ಕೃಷ್ಣ' ಚಿತ್ರದ ರಿಮೇಕ್ ಆದ ಈ ಚಿತ್ರವನ್ನು ಕನ್ನಡಕ್ಕೆ ಕದ್ದು ತಂದಿರುವುದು ಕೋಟಿ ನಿರ್ಮಾಪಕ ರಾಮು! ■

ಲಂಕೇಶ್ ಚಿತ್ರ ಪ್ರಶಸ್ತಿ ಪಡೆದ

ಥ್ಯಾಂಕ್ಸ್ ಮಾ

ಪ್ರತಿ ವರ್ಷ ರಾಷ್ಟ್ರೀಯ ಮಟ್ಟದಲ್ಲಿ ಅತ್ಯುತ್ತಮ ಚೊಚ್ಚಲ ನಿರ್ದೇಶನ ಮಾಡಿರುವವರಿಗೆ ಕವಿತಾ ಲಂಕೇಶ್ ನೀಡುವ 'ಲಂಕೇಶ್ ಚಿತ್ರ ಪ್ರಶಸ್ತಿ' ಈ ಬಾರಿ 'ಥ್ಯಾಂಕ್ಸ್ ಮಾ' ಎಂಬ ಹಿಂದಿ ಚಿತ್ರದ ನಿರ್ದೇಶಕ ಇರ್ಫಾನ್ ಕಮಲ್ ಪಾಲಾಯಿತು.

ಲಂಕೇಶರ ಹುಟ್ಟುಹಬ್ಬವಾದ ಮಾರ್ಚ್ 8ರಂದು ಈ ಪ್ರಶಸ್ತಿಯನ್ನು ಪ್ರದಾನ ಮಾಡಿದ ನಂತರ ಚಿತ್ರದ ಪ್ರದರ್ಶನವೂ ಇತ್ತಾದ್ದರಿಂದ ಎಲ್ಲ ಸಿನಿಮಾಸಕ್ತರೂ ಅಲ್ಲಿ ಜಮಾಯಿಸಿದ್ದರು. ಅಂದು ಸಿನಿಮಾ ಮುಗಿಸಿಹೊರಬರುತ್ತಿದ್ದ ಪ್ರತಿಯೊಬ್ಬರ ಹೃದಯವೂ ಭಾರ ಭಾರ. "ಇನ್ನೆರಡು ದಿನ ಯಾವ ವಿಷಯವೂ ನನ್ನ ತಲೆಗೆ ಹೋಗುವುದಿಲ್ಲ" ಎಂದು ವಾರಪತ್ರಿಕೆ ಯೊಂದರ ವರದಿಗಾರ ಮತ್ತೊಬ್ಬ ದಿನಪತ್ರಿಕೆಯ ವರದಿಗಾರನಿಗೆ ಹೇಳಿಕೊಂಡು ಹೋಗುತ್ತಿದ್ದರು. ಮತ್ತೊಬ್ಬರು "ಸ್ಲಂ ಡಾಗ್‌ಗಿಂತ ಚೆನ್ನಾಗಿ ತೋರಿಸಿ ದ್ದಾರೆ..." ಎಂದರೆ, ಮಗದೊಬ್ಬರು "ಮುಂಬೈನ ಹಳೇ ನೆನಪು ಬರುತ್ತಿದೆ..." ಹೀಗೆ ಒಬ್ಬೊಬ್ಬರದ್ದೂ ಒಂದೊಂದು ಮಾತು....

ಈ ಮಾತುಗಳನ್ನು ಕೇಳಿದಾಗ 'ಚಿತ್ರದಲ್ಲಿ ಅಂಥದ್ದೇನಿದೆ? ಎನಿಸುವುದು ಸಹಜ.



ಓವರ್ ಟು ಥ್ಯಾಂಕ್ಸ್ ಮಾ!

ನಾವು ದಿನ ಪತ್ರಿಕೆಗಳಲ್ಲಿ ಓದುತ್ತಿರುತ್ತೇವಲ್ಲ? 'ಕಸದ ಬುಟ್ಟಿಯಲ್ಲಿ ಅನಾಥ ಮಗು ಪತ್ತೆ, 'ನವಜಾತ ಶಿಶುವನ್ನು ಬಿಟ್ಟು ಹೋದ ಪಾಲಕರು'.... ಎಂಬಿತ್ಯಾದಿ ಸುದ್ದಿಗಳು? ಇಂಥ 12.26 ಮಿಲಿಯನ್ ಮಕ್ಕಳ ಕಥೆಯ ಎಳೆಯನ್ನೇ ಮೂಲವಾಗಿರಿಸಿಕೊಂಡಿರುವ ನಿರ್ದೇಶಕ ಇರ್ಫಾನ್ ಕಮಲ್ ಅನಾಥ ಮಕ್ಕಳ ಮೂಲಕ ಇಡೀ ಇಂಡಿಯಾದ ಸಮಸ್ಯೆಗಳನ್ನು ಇಲ್ಲಿನ ಅರಾಜಕತೆಯನ್ನು ಮತ್ತು ಭಾರತ ಎದುರಿಸುತ್ತಿರುವ ಸಮಸ್ಯೆಗಳ ಸಾರ್ವಕಾಲಿಕ ಸತ್ಯವನ್ನು ಎಳೆಎಳೆಯಾಗಿ ಬಿಚ್ಚಿಡುತ್ತಾ ಹೋಗುತ್ತಾರೆ.

ಕಥೆ ಆರಂಭವಾಗುವುದು ಹೀಗೆ:

ಅದು ಅಪಾರವಾದ ಶ್ರೀಮಂತಿಕೆಯ ಜೊತೆಜೊತೆಗೆ ಕಿತ್ತು ತಿನ್ನುವ ಕ್ರೂರ ಬಡತನ ಮತ್ತು ಜಗತ್ತಿನ ಅಷ್ಟೂ ದಾರಿದ್ರ್ಯವನ್ನು ಹೊದ್ದು ಮಲಗಿರುವ ಮುಂಬೈ! ಅಲ್ಲಿನ ರೈಲ್ವೇ ಸ್ಟೇಶನ್ನಿನ, ಅದರ ಪಕ್ಕದಲ್ಲಿನ ಸ್ಲಮ್ಮುಗಳ, ಚಿಂದಿ ಗ್ಯಾರೇಜುಗಳ ತುಕ್ಕುಹಿಡಿದ ಕಾರುಗಳನ್ನೇ ಸೂರಾಗಿಸಿಕೊಂಡು ಬದುಕುವ ಲಕ್ಷಾಂತರ ಮಂದಿಯಲ್ಲಿ ಆತನೂ ಒಬ್ಬ. ಹೆಸರು ಮುನಿಸಿಪಾಲಿಟಿ ಫಾಟ್ ಕೋಪರ್ ಅಲಿಯಾಸ್ ಸಲ್ಮಾನ್ ಖಾನ್! ವಯಸ್ಸು ಸುಮಾರು ಹತ್ತನ್ನೆರಡು ವರ್ಷವಿರ ಬಹುದು. ರೈಲ್ವೇ ಸ್ಟೇಷನ್‌ನಲ್ಲಿ ತನ್ನದೇ ವ್ಯವಸ್ಥಿತ ತಂಡದೊಂದಿಗೆ ಪಿಕ್‌ಪಾಕೆಟ್ ಮಾಡುವುದು ಆತನ ಕಸುಬು.



ಒಂದು ದಿನ ವ್ಯಕ್ತಿಯೋರ್ವನ ಕಿಸೆಯಿಂದ ಪರ್ಸ್‌ಅನ್ನು ಮುನಿಸಿಪಾಲಿಟಿ ಎಗರಿಸುತ್ತಾನೆ. ಆತ ಪೊಲೀಸ್‌ನೊಂದಿಗೆ ಬಂದು "ನನ್ನ ಪರ್ಸ್‌ನಲ್ಲಿರುವ ಅಷ್ಟೂ ಹಣವನ್ನು ನೀನೇ ಇಟ್ಟುಕೋ, ಆದರೆ ಅದರಲ್ಲಿ ನನ್ನ ಮಕ್ಕಳ ಫೋಟೋಗಳಿವೆ. ವರ್ಷಕ್ಕೊಮ್ಮೆಯಷ್ಟೇ ಅವರನ್ನು ನಾನು ನೋಡುವುದು. ಅವರ ಫೋಟೋ ಕೂಡ ಇಲ್ಲವಾದರೆ ನನ್ನ ಮನಸ್ಸಿಗೆ ತುಂಬಾ ನೋವಾಗುತ್ತದೆ" ಎಂದು ಈ ಹುಡುಗನಲ್ಲಿ ಬೇಡುತ್ತಾನೆ. ಆದರೆ ಅಷ್ಟೊತ್ತಿಗಾಗಲೇ ಪರ್ಸ್‌ನಲ್ಲಿದ್ದ ದುಡ್ಡನ್ನು ಕಸಿದುಕೊಂಡ ಈ ಹುಡುಗನ ಕ್ಯಾಪ್ಟನ್ ಸೋಡಾ ಎಂಬಾತ ಈತನ ಪಾಲನ್ನು ಕೊಟ್ಟು ಪರ್ಸನ್ನು ಬಿಸಾಡಿರುತ್ತಾನೆ.

ಆಗ ಪೊಲೀಸ್ ಪೇದೆ ಈತನನ್ನು ಕರೆದೊಯ್ದು ಸರ್ಕಾರಿ ರಿಮ್ಯಾಂಡ್ ಹೋಂಗೆ ಸೇರಿಸುತ್ತಾನೆ. ಅಲ್ಲಿಗೆ ಚಿತ್ರದ ಅಸಲಿ ಕಥೆಯೂ ಆರಂಭವಾಗುತ್ತದೆ. ರಿಮ್ಯಾಂಡ್ ಹೋಂನ ಮುಖ್ಯಸ್ಥ ಈತನನ್ನು ಕರೆದೊಯ್ದು ಕೈಗೆ ಸೋಪು ನೀಡಿ ಸ್ನಾನ ಮಾಡಲು ಹೇಳಿ ಈತನ ಕೈಗಳನ್ನು ಹಿಡಿದು ವಿಲಕ್ಷಣವಾಗಿ ಮೂಸಿ, ಮುದ್ದಿಸಲು ಶುರುಮಾಡುತ್ತಾನೆ. ಚಿಕ್ಕಮಕ್ಕಳ ಮೇಲೆ ಅವ್ಯಾಹತವಾಗಿ ನಡೆದುಕೊಂಡುಬರುತ್ತಿರುವ ಲೈಂಗಿಕ ದೌರ್ಜನ್ಯದ ಸಣ್ಣ ಸ್ಯಾಂಪಲ್‌ನಂತಿದೆ ಈ ದೃಶ್ಯ. ಈ ಅಧಿಕಾರಿಯ ವಿಲಕ್ಷಣ ಆಟವನ್ನು ಈ ಪೋರ ವಿರೋಧಿಸಿದಾಗ ಆತನನ್ನು ಕೋಣೆಯೊಂದರಲ್ಲಿ ಕೂಡಿಹಾಕಲಾಗುತ್ತದೆ. ಆದರೆ ಅದೇ ರಾತ್ರಿ ಛಾವಣಿಯ ಹೆಂಚನ್ನು ತೆರೆದು ತಪ್ಪಿಸಿಕೊಳ್ಳುತ್ತಿರುವ ಮುನಿಸಿಪಾಲಿಟಿ ಕಣ್ಣಿಗೆ ಒಂದು ದೃಶ್ಯ ಬೀಳುತ್ತದೆ. ನಿರಾಶ್ರಿತ ಮಕ್ಕಳ ಕಟ್ಟಡದ ಗೇಟ್ ಮುಂದೆ ಹಾಲುಗಲ್ಲದ ಹಸುಳೆಯೊಂದನ್ನು ಬಿಳೀ ಬಟ್ಟೆಯಲ್ಲಿ ಸುತ್ತಿಟ್ಟು ಮಹಿಳೆಯೊಬ್ಬಳು ಕಾರಿನಲ್ಲಿ ಹೊರಟು ಬಿಡುತ್ತಾಳೆ.

ಹಾಗೆ ಬಿಟ್ಟುಹೋದ ಮಗುವನ್ನು ಆಪೋಶನ ತೆಗೆದುಕೊಳ್ಳಲು ಬೀದಿ ನಾಯಿಯೊಂದು ಹವಣಿಸುತ್ತಿರುತ್ತದೆ. ನಾಯಿಗೆ ಕಲ್ಲೊಡೆದು ಓಡಿಸಿ ಮಗುವನ್ನು ಕೈಗೆತ್ತಿಕೊಳ್ಳುವ ಹುಡುಗನಿಗೆ ಒಳಗಿರುವ ಅಧಿಕಾರಿಯ ವಿಲಕ್ಷಣ ವರ್ತನೆ ನೆನಪಾಗಿ "ನೀನು ಇಲ್ಲಿರುವುದು ಸರಿಯಲ್ಲ ನಿನ್ನನ್ನು ಹೇಗಾದರೂ ಮಾಡಿ ನಿನ್ನ ತಾಯಿ ಬಳಿ ಸೇರಿಸುತ್ತೇನೆ ಬಾ" ಎಂದು ತೆಗೆದುಕೊಂಡು ಹೋಗುತ್ತಾನೆ. ಅಲ್ಲಿಂದ ಈ ಸಮಾಜದ ಎಲ್ಲ ಅಂಕುಡೊಂಕುಗಳೂ, ಕಠೋರ ಸತ್ಯಗಳೂ ಒಂದೊಂದಾಗಿ ಪೋರನ ಕಣ್ಮುಂದೆ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ.

ಪೊಲೀಸರ ಕಣ್ಣಿಗೆ ಬಿದ್ದರೆ ಮಗುವನ್ನು ತಾಯಿಯ ಮಡಿಲಿಗೆ ಸೇರಿಸಲು ಸಾಧ್ಯವಿಲ್ಲ ಎಂದು ತಿಳಿದ ಆ ಹುಡುಗ ಪೊಲೀಸರ ಕಣ್ಣಿಗೆ ಬೀಳದಂತೆ ಜಾಗೃತನಾಗುತ್ತಾನೆ. ಮೊದಲಿಗೆ ಪೊಲೀಸರಿಂದ ಮುನಿಸಿಪಾಲಿಟಿಯನ್ನು ರಕ್ಷಿಸುವ ಹಿಜಡಾ ಒಬ್ಬಳು "ನನ್ನೊಂದಿಗೆ ಬಾ" ಎಂದು ಕರೆದೊಯ್ದು ತನ್ನ ನಾಯಕಿ ಬಳಿ ಬಿಡುತ್ತಾಳೆ. ಮಗುವಿನ ಮರ್ಮಾಂಗವನ್ನು ನೋಡಿ ಆ ಸೀನಿಯರ್ ಹಿಜಡಾ ಮಗುವನ್ನು ತನಗೆ ಕೊಡು ಎಂದು ಕೇಳುತ್ತಾಳಾದರೂ ಹುಡುಗ ಮಾತ್ರ ಮಗುವನ್ನು ಕೊಡಲು ಒಪ್ಪುವುದಿಲ್ಲ. ಇದರಿಂದ ಕೋಪಗೊಂಡ ಆಕೆ "ಹಾಳಾಗಿ ಹೋಗು" ಎಂದು ಶಪಿಸಿ ಕಳಿಸುತ್ತಾಳೆ. ನಂತರ ಮಗುವನ್ನು ತೆಗೆದುಕೊಂಡು ತನ್ನೊಂದಿಗಿನ ಹುಡುಗರ ಬಳಿ ಬಂದರೆ, ಕ್ಯಾಪ್ಟನ್‌ನಂತಿರುವ ಸೋಡಾ ಎಂಬ ಹುಡುಗ ಕೂಡ ಮಗುವನ್ನು ಇಲ್ಲಿ ತರಬೇಡ ಎಂದು ಬೈದು ಓಡಿಸುತ್ತಾನೆ.

ಸರಿರಾತ್ರಿಯಲ್ಲಿ ಎರಡು ದಿನದ ಹಸುಗೂಸನ್ನು ಕೈಗಳಲ್ಲಿ ಬಾಚಿ ಹಿಡಿದು ಅವುಚಿಕೊಂಡು ಬರುವಾಗ ವಿಲಾಸೀ ಯುವತಿಯರು ಕುಡಿದು ಬಿಸಾಡಿದ ಖಾಲಿಯಾದ ಅಮಲಿನ ಟಿನ್ ಸಿಗುತ್ತದೆ. ಅದರೊಳಕ್ಕೆ ಹಸುವೊಂದರ ಕೆಚ್ಚಲಿನಿಂದ ಹಾಲು ಹಿಂಡುತ್ತಾನೆ. ಇನ್ನು ಅದನ್ನು ಗರಂ ಮಾಡುವುದಾದರೂ ಹೇಗೆ? ಕಳ್ಳಬಟ್ಟಿ ತಯಾರಿಸುವ ಕೆಂಡದಲ್ಲಿ ಆ ಹಾಲನ್ನು ಬಿಸಿಮಾಡಿ, ಪ್ಲಾಸ್ಟಿಕ್ ಕವರ್‌ಗೆ ತುಂಬಿ, ಅದರ ಚೂಪಾದ ಮೂತಿಗೆ ಸಣ್ಣ ರಂಧ್ರಮಾಡಿ ಹಾಲು ಕುಡಿಸುವ ದೃಶ್ಯವಂತೂ ಎಂಥವರ ಎದೆಯನ್ನೂ ಅಲುಗಾಡಿಸಿಬಿಡುತ್ತದೆ.

ತನ್ನಂತೆಯೇ ಅನಾಥವಾದ ಆ ಮಗುವಿನ ಮೇಲೆ ಮುನಿಸಿಪಾಲಿಟಿಯ ಪ್ರೀತಿ ಅದೆಷ್ಟು ಉತ್ಕಟವಾಗಿರುತ್ತದೆಂದರೆ, ಮಗುವನ್ನು ದೇವಸ್ಥಾನದ ಮುಂದೆ ಇಟ್ಟು ಕುಳಿತಿದ್ದಾಗ ಅದರ ಮೇಲೆ ನೋಟುಗಳನ್ನು ಹಾಕಿದ ಜನರಿಗೆ ಕಾಲು ತೋರಿಸಿ, ಅವರ ಹಣವನ್ನು ಅವರತ್ತಲೇ ಬಿಸಾಡುತ್ತಾನೆ. ಮತ್ತೊಂದು ದೃಶ್ಯದಲ್ಲಿ ಆತನ ಸಹಪಾಠಿ ಹುಡುಗಿಯ ಮೂಗಿನಿಂದ ಬರುವ ಸಿಂಬಳವನ್ನು ನೋಡಿ "ಮೊದಲು ಅದನ್ನು ಒರೆಸು, ಆಮೇಲೆ ಮಗುವನ್ನು ಮುಟ್ಟು" ಎನ್ನುತ್ತಾನೆ. ಮಗು ಮಾಡಿದ ಗಲೀಜನ್ನು ಸ್ವಲ್ಪವೂ ಅಸಹ್ಯಿಸಿಕೊಳ್ಳದೆ ಒರೆಸಿ, ಬೀದಿನಲ್ಲಿಯಲ್ಲಿ ಅದರ ಅಂಡು ತೊಳೆಯುವುದು.. ಇವೆಲ್ಲವೂ ಆ ಹಸುಳೆಯ ಮೇಲೆ ಆ ಹುಡುಗನಿಗಿರುವ ಅತೀವವಾದ ಪ್ರೀತಿಯ ಪ್ರತೀಕದಂತಿದೆ.

ನಂತರ ಮಗುವನ್ನು ಅದರ ತಾಯಿಗೆ ಒಪ್ಪಿಸುವ ದೃಢನಿರ್ಧಾರ ಮಾಡಿ, ಆ ಮಗುವಿನ ಹೆತ್ತವಳನ್ನು ಹುಡುಕುತ್ತಾ ಹೋದಾಗ ತುಂಬು ಸಂಸಾರವನ್ನು ಹೊಂದಿದ್ದರೂ ವೇಶ್ಯೆಯರ ಸಂಗಕ್ಕೆ ಬಿದ್ದ ಮಾರ್ವಾಡಿ, ಮಾರ್ವಾಡಿ ಯನ್ನು ಬ್ಲ್ಯಾಕ್ ಮೇಲ್ ಮಾಡುವ ಘರ್‌ವಾಲಿಗಳು, ಅತೃಪ್ತ ಆತ್ಮಗಳ ವಿಲಕ್ಷಣ ಕಾತುರ, ಬಡತನದ ಬದುಕನ್ನು ನೀಗಿಸಲು ದೇಹವನ್ನು ಪಣಕ್ಕಿಟ್ಟಿರುವ ವೇಶ್ಯೆಯರು, ಬೀದಿಗೆ ಬಿದ್ದ ಪುಟ್ಟ ಹುಡುಗಿಯನ್ನೂ ಕಸುಬಿಗೆ ತಳ್ಳಲು ಆಲೋಚಿಸುವ



ತಲೆಹಿಂಡುಕರು, ತೂತು ಕತ್ತಲೆಯಲ್ಲಿ ಅರಬ್ಬೀ ಸಮುದ್ರದ ಕಡಲ ಕಿನಾರೆಯಲ್ಲಿ ಕದ್ದು ಕುಳಿತು ಚುಂಬಿಸುವ ಸಲಿಂಗಕಾಮಿಗಳು, ಕದ್ದು ಬಸಿರಾದ ಪಿಂಡದ ಜೀವ ತೆಗೆಯುವ ಪ್ರೇಮಿಗಳು!... ಇಂಥ ತೀರ ಕೆಳಹಂತದ ಜನರ ಜೀವನದೊಂದಿಗೆ ಕಾಲ್‌ಸೆಂಟರ್ ಉದ್ಯೋಗಿಗಳ ಕರ್ಮಕಾಂಡ, ಹೆತ್ತ ಮಗಳನ್ನೇ ಕಾಮಿಸುವ ಶ್ರೀಮಂತ ತಂದೆಯ ವಿಕೃತ ಕಾಮ ಮುನಿಸಿಪಾಲಿಟಿಗೆ ಎದುರಾಗುತ್ತವೆ. ಇಂಥ ಜೀರ್ಣಿಸಿಕೊಳ್ಳಲಾಗದ ಕಟುವಾಸ್ತವಗಳನ್ನು ಸೂಕ್ಷ್ಮವಾಗಿ ತೆರೆದಿಟ್ಟಿದ್ದಾರೆ ನಿರ್ದೇಶಕ ಇರ್ಫಾನ್ ಕಮಲ್.

ಇಷ್ಟು ಮಾತ್ರವಲ್ಲದೆ, ಕಳ್ಳಭಟ್ಟಿ ಕಾಸಲು ಹೋಗಿ ಎನ್‌ಕೌಂಟರ್ ಆಗುವ ಮಂದಿ, ಕಾಸಿಗಾಗಿ ಬಾಯ್ತೆರೆದು ಕೂತ ಸರ್ಕಾರಿ ಆಸ್ಪತ್ರೆಯ ವಾಚ್‌ಮನ್, ಅಮಲಿನಲ್ಲಿ ಮೈಮರೆವ ಟ್ಯಾಕ್ಸಿ ಚಾಲಕ, ಪೊಲೀಸರ ಅರಾಜಕತೆ, ಮುಂಬೈನಂಥ ಮಹಾನಗರದಲ್ಲಿ ಮಾದಕ ವಸ್ತುಗಳಿಗೆ ಶರಣಾದ ಕೆಳದರ್ಜೆಯ ಜನ ಮತ್ತವರ ಜೂಜುಗಳು, ಯಾವ ಮುಜುಗರವೂ ಇಲ್ಲದೆ ಸಾಲಾಗಿ ಬಹಿರ್ದೆಸೆಗೆ ಕೂರುವ ಹುಡುಗರು.... ಹೀಗೆ ಹಲವಾರು ಅಂಶಗಳನ್ನು ಕಥೆಯ ಓಘಕ್ಕೆ ಎಲ್ಲೂ ಧಕ್ಕೆಯಾಗದಂತೆ ನಾಜೂಕಾಗಿ ನಿರ್ದೇಶಕ ಇರ್ಫಾನ್ ಬೆರೆಸಿದ್ದಾರೆ.

ಹಿಂದೆ ನಿರ್ದೇಶಕ ಮಧುರ್ ಬಂಡಾರ್ಕರ್ ತಮ್ಮ 'ಪೇಜ್ ತ್ರೀ' ಚಿತ್ರದ ಮೂಲಕ ಇಂಥದ್ದೇ ಸಾಮಾಜಿಕ ಸಮಸ್ಯೆ ಕುರಿತ ಚಿತ್ರವನ್ನು ಮಾಡಿದ್ದರು. ರಾಜ್ ಕಪೂರ್ ಸಹ ತಮ್ಮ 'ಜಾಗ್ ತೆ ರಹೋ' ಚಿತ್ರದಲ್ಲಿ ಇದೇ ರೀತಿಯ ಕಥಾವಸ್ತುವಿನ ಸಿನಿಮಾ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು. ಆದರೆ ಆ ಚಿತ್ರಗಳು ಕೇವಲ ಶ್ರೀಮಂತವರ್ಗದಲ್ಲಿನ ಅವಾಂತರ, ಅನಾಚಾರಗಳನ್ನು ಮಾತ್ರ ಕೇಂದ್ರೀಕರಿಸಿದ್ದವು. ಸದ್ಯ ಎಂಟು ಆಸ್ಕರ್ ಪ್ರಶಸ್ತಿಯನ್ನು ಪಡೆದಿರುವ 'ಸ್ಲಂ ಡಾಗ್ ಮಿಲಿಯನೇರ್' ಕೂಡ ಕೊಳೆಗೇರಿ ಮತ್ತದರ ಹುಡುಗನನ್ನು ಮುಖ್ಯವಾಗಿಸಿತ್ತು. ಆದರೆ 'ಥ್ಯಾಂಕ್ಸ್ ಮಾ' ಚಿತ್ರದ ಮೂಲಕ ನಿರ್ದೇಶಕ ಇರ್ಫಾನ್ ಕಮಲ್ ಸಮಾಜದ ಹತ್ತು ಹಲವು ಸಮಸ್ಯೆಗಳನ್ನು ಒಬ್ಬ ಹುಡುಗ ಮತ್ತು ಒಂದು ಮಗುವಿನ ಮೂಲಕ ತೆರೆದಿಡುತ್ತಾ ಹೋಗಿರುವುದು ಅತಿಮುಖ್ಯ ಮತ್ತು ಗಮನಾರ್ಹ ಅಂಶವಾಗಿದೆ.

ಚಿತ್ರದಲ್ಲಿನ ಪ್ರಮುಖ ಅಂಶವೆಂದರೆ, ಇಲ್ಲಿನ ಪಾತ್ರಗಳಾಗಲಿ, ಭಾಷೆಯ ಪ್ರಕಾರವಾಗಲಿ ಯಾವುದೂ ಕೃತಕವೆನಿಸುವುದಿಲ್ಲ. ಒಟ್ಟಾರೆ ಚಿತ್ರನಿರ್ಮಾಣದಲ್ಲಿ ವಾಸ್ತವತೆಗೇ ಸಂಪೂರ್ಣ ಒತ್ತು ಕೊಟ್ಟಿರುವ ನಿರ್ದೇಶಕ ಪ್ರತಿಯೊಂದು ಪಾತ್ರವನ್ನು ಸಹಜವಾಗಿ ಸೃಷ್ಟಿಸಿದಂತಿದೆ.

ತಾರೆ ಜಮೀನ್ ಪರ್‌ನ ದರ್ಶಿಲ್, ಟಿಂಗ್ಯ ಪಾತ್ರದಲ್ಲಿ ಮಾಡಿದ್ದ ಶರದ್ ಗೋಯೇಕರ್‌ರಿಗೆ ಸರಿಗಟ್ಟುವಂತೆ ಪಾತ್ರ ನಿರ್ವಹಿಸಿರುವ ಪುಟ್ಟ ಪೋರ ಮಾ. ಶಾಮ್ಸ್ ಅಂತೂ ಮೊದಲ ಬಾರಿಗೇ ಎಲ್ಲರ ಮನಸ್ಸನ್ನೂ ಗೆಲ್ಲುತ್ತಾನೆ.

■ ಅರುಣ್ ಕುಮಾರ್.ಜಿ

ಹಾಕ್ಕೊಳ್ಳೋಕೆ ಅಂಡರ್‌ವೇರ್ ಕೇಳಿದ ಶಂಕರ್!

ಶಂಕರ್ ನಾಗ್ ಒಮ್ಮೆ ಕನಕಪುರದಲ್ಲಿ ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದರು. ಶಂಕರ್ ನಾಗ್ ಚಿತ್ರವೆಂದ ಮೇಲೆ ಎಲ್ಲವೂ ಸಮಯಕ್ಕೆ ಸರಿಯಾಗಿ ನಡೆಯಬೇಕಿತ್ತು, ಮಾತ್ರವಲ್ಲ ಟೈಂ ವೇಸ್ಟ್ ಆಗಬಾರದು ಎಂದು ಚಿತ್ರೀಕರಣದ ತಾಣದಲ್ಲಿ ಒಂದೇ ಬಾರಿಗೆ ಮೂರು ನಾಲ್ಕು ಕಡೆ ಟ್ರಾಲಿಗಳನ್ನು ಅರೇಂಜ್ ಮಾಡುತ್ತಿದ್ದರು. ಇದೀ ಯೂನಿಟ್‌ನಲ್ಲಿ ಯಾರೂ ಸಮಯ ವ್ಯರ್ಥಮಾಡದಂತೆ ನಿಗಾವಹಿಸುತ್ತಿದ್ದರು ಶಂಕರ್.

ಆಗ ಶಂಕರ್ ಬೆಂಗಳೂರು ನಗರದಿಂದ ದೂರವಿದ್ದ ಸಿಂಗಸಂದ್ರದಲ್ಲಿ ವಾಸವಿದ್ದರು. ಒಂದು ದಿನ ಶೂಟಿಂಗ್ ರಾತ್ರಿ ತಡವಾಗಿ ಮುಗಿದಿದೆ. ಆ ಹೊತ್ತಿನಲ್ಲಿ ಬೆಂಗಳೂರಿಗೆ ಹಿಂದಿರುಗಿ, ಮಾರನೆ ದಿನ ಮತ್ತೆ ಬೆಳಗ್ಗೆ ಎದ್ದು ಬರುವುದರೊಳಗೆ ತಡವಾಗುತ್ತದೆ ಎಂದು ಶಂಕರ್ ಚಿಂತಿಸಿದ್ದಾರೆ. ಹಾಗಾಗಿ ಹೇಗಿದ್ದರೂ ತನ್ನ ಜಿಗರಿ ದೋಸ್ತ್ ಒಬ್ಬ ಕನಕಪುರದಲ್ಲೇ ಮನೆ ಮಾಡಿದ್ದರಿಂದ ಆತನ ಮನೆಯಲ್ಲೇ ಉಳಿದರಾಯಿತು ಎಂದು ಶಂಕರ್ ನಿರ್ಧರಿಸಿದರು. ಆದರೆ ತನ್ನ ನಿರ್ಧಾರದ ಬಗ್ಗೆ ಸ್ನೇಹಿತನಿಗೆ ಒಂದು ಮಾತನ್ನೂ ಹೇಳದೆ ಶೂಟಿಂಗ್ ಮುಗಿಸಿದ ಆತನ ಮನೆಗೆ ಇದ್ದಕ್ಕಿದ್ದಂತೆ ಹಾಜರಾಗಿದ್ದಾರೆ ಶಂಕರ್. ಮಾತ್ರವಲ್ಲ "ಇವತ್ತು ಇಲ್ಲೇ ಉಳಿದುಕೊಂಡಿದ್ದು ಬೆಳಗ್ಗೆ ಎದ್ದು ಶೂಟಿಂಗ್‌ಗೆ ಹೋಗ್ತೀನಿ" ಎಂದಿದ್ದಾರೆ.



ಶಂಕರ್‌ನಂತಹ ನಟ ಮನೆಗೆ ಬಂದು ಉಳಿಯುತ್ತೀನಿ ಅಂದರೆ ಇಲ್ಲ ಅನ್ನೋದುಂಟೇ? ಖುಷಿಯಿಂದ ತಲೆ ಅಲ್ಲಾಡಿಸಿದ್ದಾರೆ ಸ್ನೇಹಿತ. ಆದರೆ ಶಂಕರ್ ಕೋರಿಕೆ ಅಷ್ಟೇ ಆಗಿರಲಿಲ್ಲ. "ನನಗೆ ಅರ್ಜೆಂಟಾಗಿ ಕುಡಿಯೋಕ್ಕೆ ರಮ್ ಬೇಕು" ಎಂದಿದ್ದಾರೆ. "ಇದೇನಪ್ಪಾ, ಇದು ಇಷ್ಟುಹೊತ್ತಿನಲ್ಲಿ ರಮ್ಮು. ಹೇಳಿಕೇಳಿ ಬ್ರಾಹ್ಮಣರ ಮನೆ ಬೇರೆ" ಎಂದು ಸ್ನೇಹಿತನಿಗೆ ಸ್ವಲ್ಪ ಕಸಿವಿಸಿಯಾದರೂ ಮನೆಗೆ ಅತಿಥಿಯಾಗಿ ಬಂದಿರುವ ಪ್ರಾಣಸ್ನೇಹಿತನಿಗೆ ಇಲ್ಲ ಅನ್ನೋದು ಹೇಗೆ?

ಹೇಗೋ ಮಾಡಿ ನಡುರಾತ್ರಿಯಲ್ಲಿ ರಮ್ಮು ತಂದು ಶಂಕರ್‌ಗೆ ಕುಡಿಸಿ, ಊಟ ಹಾಕಿ ಮಲಗಿಸಿದ್ದಾರೆ ಆ ಗೆಳೆಯ.

ಬೆಳಗ್ಗೆ ಎದ್ದ ತಕ್ಷಣ ಶಂಕರ್ ಸ್ನಾನ ಮಾಡಬೇಕು. ಆದರೆ ನಾನು ಬಟ್ಟೆ ತಂದಿಲ್ಲ. ನಿನ್ನ ಅಂಡರ್‌ವೇರ್ ಜೊತೆಗೆ ಹಾಕ್ಕೊಳ್ಳಕ್ಕೆ ಯಾವುದಾದ್ರು ಬಟ್ಟೆ ಇದ್ರೆ ಕೊಡು" ಎಂದು ಕೇಳಿದ್ದಾರೆ!

ಶಂಕರ್ ನಾಗ್ ಬದುಕಿದ್ದಷ್ಟೂ ದಿನ ಎಷ್ಟು ಸಿಂಪಲ್ ಆಗಿದ್ದರು ಎಂಬುದಕ್ಕೆ ಒಂದು ಪುಟ್ಟ ಉದಾಹರಣೆ.

ಶಂಕರ್ ಅಂದು ಸರಿರಾತ್ರಿಯಲ್ಲಿ ಹೋಗಿ ರಮ್ ತರಿಸಿಕೊಂಡು ಕುಡಿದದ್ದು, ಅಲ್ಲೇ ಊಟ ಮಾಡಿ ನಿದ್ರಿಸಿದ್ದು, ಮಾರನೆ ದಿನ ಅವರ ಬಟ್ಟೆಯನ್ನೇ ಮೈಮೇಲೇರಿಸಿಕೊಂಡು ಬಂದದ್ದು ಯಾವ ಸ್ನೇಹಿತನ ಮನೆಯಿಂದ ಗೊತ್ತ? ಶಂಕರ್‌ರ ಜೀವದ ಗೆಳೆಯ ರಮೇಶ್ ಭಟ್!

ಶಂಕರ್ ಬಗೆಗಿನ ಇಂಥ ನೂರಾರು ಪ್ರಸಂಗಗಳು ರಮೇಶ್ ಭಟ್ಟರ ಬತ್ತಳಿಕೆಯಲ್ಲಿ ಇಂದಿಗೂ ಜೀವಂತವಾಗಿವೆ.

ಆಫ್ ದಿ ರೆಕಾರ್ಡ್

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44